ಸಂಪುಟ 20 ಸಂಚಿಕೆ 35
ಆಗಸ್ಟ್ 29, 1999 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಸಿಪಿಐ(ಎಂ) ಪ್ರಣಾಳಿಕೆ ಕರೆ

ಮತ್ತೆ ಬೇಡ ಬಿಜೆಪಿಯ ವಿನಾಶಕಾರಿ ಆಳ್ವಿಕೆ



ಎನ್.ಡಿ.ಎ. ಪ್ರಣಾಳಿಕೆಯೋ ವಾಜಪೇಯಿ ಆಲ್ಬಮ್ಮೋ?

ಬಿಲ್ಲಿಲ್ಲದ ಬಾಣ ಬಾಣವಿಲ್ಲದ ಬಿಲ್ಲು

ಬಿಲ್ಲಿಲ್ಲದ ಬಾಣ; ಬಾಣವಿಲ್ಲದ ಬಿಲ್ಲು

ಬಾಣಕ್ಕೊಂದು ಬಿಲ್ಲಿಲ್ಲದೆ ಪರಿತಪಿಸಿ ಗೋಳಾಡಿದ್ದನ್ನು ಇಂದು ಕರ್ನಾಟಕದ ಜನರೆಲ್ಲರೂ ಬಲ್ಲರು. 'ಅಂತೂ ಕೊನೆಗೆ ಬಂತು ಮಳೆ' ಎನ್ನುವಂತೆ ಎಲ್ಲರೂ ಕಾದು ಸುಸ್ತಾದ ಮೇಲೆ ಎಲ್ಲಾ ತಿಕ್ಕಾಟ ಘರ್ಷಣೆಗಳ ನಂತರ ಬಿಜೆಪಿ ೯೫ ಸ್ಥಾನಗಳನ್ನು ಜನತಾದಳ(ಸಂಯುಕ್ತ) ಕೂಟಕ್ಕೆ ಕೊಡಮಾಡಿದೆ. ಅದರಲ್ಲಿ ಮೊದಲ ಹಂತದ ಚುನಾವಣೆಗಳ (ಸೆಪ್ಟೆಂಬರ್ ೫ ರಂದು ಮತದಾನ) ಒಟ್ಟು ೧೨೦ ಸ್ಥಾನಗಳಲ್ಲಿ ೫೮ ಜನತಾದಳಕ್ಕೆ ೬೨ ಬಿಜೆಪಿಗೆ ಎಂದು ಹೆಗಡೆ, ಫರ್ನಾಂಡೀಸ್, ವಾಜಪೇಯಿ, ಅದ್ವಾನಿ, ಕುಶಬಾವುಠಾಕ್ರೆ ನಡುವೆ ತೀರ್ಮಾನವಾಗಿದೆ.

ಆದರೆ ಈ ತೀರ್ಮಾನ ಅವರದು ಮಾತ್ರ. ರಾಜ್ಯದ ಬಿಜೆಪಿ ನಾಯಕರು ಹಾಗೂ ಜನತಾದಳ ಮತ್ತು ಲೋಕಶಕ್ತಿ ನಾಯಕರ ತೀರ್ಮಾನಗಳು ಬೇರೆ. ಹೀಗಾಗಿ ಮೂವತ್ತಕ್ಕೂ ಹೆಚ್ಚು ಸ್ಥಾನಗಳಲ್ಲಿ ಪರಸ್ಪರ ಸ್ಪರ್ಧೆಗಳ, ಬಿಜೆಪಿ, ಜನತಾದಳ (ಸಂಯುಕ್ತ)ದ ನಡುವಿನ ಕಿತ್ತಾಟದ ಹಾಗೂ ಜನತಾದಳ ಒಳಗಡೆ ಪಟೇಲ್ ಬಣ ಹಾಗೂ ಲೋಕಶಕ್ತಿ ನಡುವಿನ ಸಂಘರ್ಷದ ಕಣವಾಗಿದೆ. ಜನತಾದಳ (ಸಂ) ಹಾಗೂ ಲೋಕಶಕ್ತಿ ಕಛೇರಿಗಳ ಮುಂದೆ ರಾಮಕೃಷ್ಣ ಹೆಗ್ಡೆಯವರ ಮನೆ ಮುಂದಿನ ದೃಶ್ಯ ಸರಣಿ ಯಾವ ಸಿನಿಮಾಗಳಿಗೂ

ಸಂಪಾದಕೀಯ

ಮೀರಿದಾಗಿತ್ತು. ಲೋಕಶಕ್ತಿಯ ರಾಜ್ಯಅಧ್ಯಕ್ಷ ಜೀವರಾಜ ಆಳ್ವರು, ಅದರ ಪ್ರಧಾನ ಕಾರ್ಯದರ್ಶಿ ಬಿಕ್ಕಿ ಬಿಕ್ಕಿ ಅತ್ತದ್ದು, ಅವರ ಹಿಂಬಾಲಕರು ಹೆಗ್ಗಡೆಯವರ ಮನೆ ಮುಂದೆ ನಡೆಸಿದ ದಾಂಧಲೆ ಈ ಅವಕಾಶವಾದಿ ಮೈತ್ರಿಕೂಟದ ಅವಸರದ ಹೆರಿಗೆಯ ಸೂಚಿಯಾಗಿತ್ತು. ಹೆಗ್ಗಡೆ ಪಟೇಲರ ನೆಚ್ಚಿನ ಭಂಟ ಸಚಿವ ಅನಂತ್ ನಾಗ್ ಹಾಗೂ ಮತ್ತೊಬ್ಬ ಸಚಿವ ಎಂ.ಸಿ. ಮನಗೂಳಿಯವರಿಗೆ 'ಬಿ' ಫಾರಂ ಕೊಡದೆ ಅವರು ನೆಲೆ ಇಲ್ಲದಂತಾಗಿದ್ದು ಒಂದುಕಡೆ. ಅದರಲ್ಲಿ ಅನಂತ್ ನಾಗ್ ಇದು ಹೆಗ್ಗಡೆಯವರ ಕುತಂತ್ರ ಎಂದು ಸಿಡಿದೆದ್ದರೆ ಮನಗೂಳಿ ಕಣ್ಣೀರಿಟ್ಟರು. ಜೊತೆಗೆ ಲೋಕಶಕ್ತಿ, ಜೆ.ಎಚ್.ಪಟೇಲ್ ಬಣದ ಆಕ್ರಮ ಸಂಬಂಧದ ಒಬ್ಬ ಮಧ್ಯಸ್ಥಿಕೆಗಾರ ಎಂ.ಎಸ್.ಪಾಟೀಲ್ ಸೇರಿದಂತೆ ಹಲವು ಸಚಿವರು, ಮಾಜಿ ಶಾಸಕರ ಕ್ಷೇತ್ರಗಳಲ್ಲಿ ಬಿಜೆಪಿ ಲೋಕಶಕ್ತಿಗಳ ಅಭ್ಯರ್ಥಿಗಳ ಸ್ಪರ್ಧೆ ಆ ಮೂಲಕ ಅವರ ಸೋಲಿನ ಖಾತರಿ.

ಇದು ಈ ಲೇಖನವನ್ನು ಬರೆಯುತ್ತಿರವವರೆಗೆ ನಡೆದ ವಿದ್ಯಮಾನಗಳು. ಈದೀಗ ತಾನೇ ದೂರದರ್ಶನ ವಾರ್ತೆ ಬಿತ್ತರಿಸುತ್ತಿದೆ. ಜನತಾದಳ (ಸಂ) ದ ಪರವಾಗಿ ಹೆಗ್ಗಡೆ ಹೆಚ್ಚು ಸ್ಥಾನಗಳ ಬೇಡಿಕೆಯನ್ನು ಬಿಜೆಪಿ ನಿರಾಕರಿಸಿದೆ. ಹಾಗೂ ಕೋಲಾರದ ಲೋಕಸಭಾ ಸ್ಥಾನವನ್ನು ನಿರಾಕರಿಸಿದೆ ಅಂದರೆ ಎಂ.ಎಸ್. ಪಾಟೀಲ್ ಮೊದಲಾದ ಸಚಿವರು ಕೂಡ ತಬ್ಬಲಿಗಳಾದರೇ! ಮುಂದಿನವಾರ ತೆರೆಯ ಮೇಲೆ ನೋಡಬೇಕಾಗಿದೆ. ಒಟ್ಟಿನಲ್ಲಿ ಬಿಲ್ಲಿಲ್ಲದ ಬಾಣದ ಚಾಲನೆ ಇಲ್ಲ. ಬಿಲ್ಲು ಆಶಯ ಕೊಟ್ಟವರ ಬಾಣಗಳು ಮಾತ್ರ ಚಲಾವಣೆ ಆಗುತ್ತದೆ. ಇದು ಕೇವಲ ಬಿಲ್ಲು ಬಾಣಗಳ ಮೇಲೆ ಅವಲಂಬನೆಯಾಗಿಲ್ಲ. ಈ ಎಲ್ಲಾ ಗೊಂದಲ ದಾಂಧಲೆಗಳು ರಾಜ್ಯದ ಅಧಿಕಾರಕ್ಕಾಗಿ ಬಿಜೆಪಿ ಹೆಗ್ಗಡೆ ನಡುವಿನ ಸ್ಪರ್ಧೆ. ಹೆಗ್ಗಡೆ ಬಣದೊಳಗೆ ಪಟೇಲ್ ಆಳ್ವ ಬಣದ ನಡುವಿನ ಕಿತ್ತಾಟ.

ಇದನ್ನು ರಾಜ್ಯದ ಜನತೆ ಕೇವಲ ರಂಜನೀಯವಾಗಿ ನೋಡುವುದಿಲ್ಲ ಈ ಎಲ್ಲಾ ಪ್ರಕರಣಗಳು ಜನರಲ್ಲಿ ಸಾಕಷ್ಟು ಅಸಹ್ಯವನ್ನು ಹುಟ್ಟಿಸಿದೆ.

ತಮಗೆ ಅಸಂಖ್ಯ ಸಮಸ್ಯೆಗಳನ್ನು ಉಂಟುಮಾಡುತ್ತಿರುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಕ್ರಮಗಳ ಬಗ್ಗೆ ಒಂದು ಮಾತಿರದ ಈ ಕಿತ್ತಾಟ ಯಾತಕ್ಕಾಗಿ ಎಂದು ಜನ ತಿಳಿಯಾಲಾಗದವರಲ್ಲ. ಅವರ ಅನುಭವ ಸಂಕಷ್ಟಗಳು ಅವರಿಗೆ ದಾರಿ ತೋರುತ್ತವೆ. ಆದ್ದರಿಂದ ಬಿಲ್ಲು ಬಾಣ ಸೇರಿದ ಕಡೆಯಲ್ಲಿಯೂ ಬಾಣ ಚಲಿಸಬಹುದೇ ಹೊರತು ಗುರಿ ಮುಟ್ಟುವ ಖಾತರಿ ಇಲ್ಲ. ಇನ್ನು ಬಿಲ್ಲು ಬಾಣ ಸೇರದ ಕಡೆ ಬಾಣವೂ ಬಿಲ್ಲೂ ಎರಡೂ ನಿಷ್ಪ್ರಯೋಜಕ ವಾಗಲಿದೆ. ಕರ್ನಾಟಕದ ಜನತೆ ಅಸಹ್ಯಕರ ಅಧಿಕಾರದಾಹದ ಕಿತ್ತಾಟವನ್ನು ಸಹಿಸುವುದಿಲ್ಲ. ಜಾತ್ರೆ ಮುಗಿದ ಮೇಲೆ ಗಂಟು ಕಳ್ಳರು ಕಿತ್ತಾಡುತ್ತಾರೆ. ಆದರೆ ದರೋಡೆಕೋರರ ಕಿತ್ತಾಟ ಜಾತ್ರೆಗೆ ಮೊದಲೇ ಆರಂಭವಾಗಿದೆ. ಮುಂದೆ ಇನ್ನು ಎಷ್ಟು ನಡೆಯಬಹುದು ತೆರೆಯಮೇಲೆ ನೋಡೋಣ.



'ದಿವೀಕ್' ನಲ್ಲಿ ಜಯಚಂದ್ರನ್ ವ್ಯಂಗ್ಯ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಹಿಂದೆ ಹಲವಾರು ಸಂಚಿಕೆಗಳಲ್ಲಿ ಪ್ರಶ್ನೆಗಳಿಗೆ ನೀಡಿದ ಉತ್ತರದಲ್ಲಿ ಕೋಮುವಾದದ ವಿರುದ್ಧವೇ ನಮ್ಮ ಪ್ರಧಾನ ಹೋರಾಟ ಭ್ರಷ್ಟಾಚಾರ, ಜಾತೀಯತೆ ಇವೆಲ್ಲಾ ಅಷ್ಟು ಪ್ರಾಮುಖ್ಯವಲ್ಲ ಎಂದು ಉತ್ತರಿಸಿದ್ದೀರಿ ಇದು ಸರಿಯೇ? ಕೋಮುವಾದ ಪ್ರಜಾಪ್ರಭುತ್ವಕ್ಕೆ ಅಪಾಯವನ್ನು ತಂದೊಡ್ಡುತ್ತದೆ ಎಂದು ಕೂಡ ಬರೆದಿದ್ದೀರಿ ಭ್ರಷ್ಟಾಚಾರ ಮತ್ತು ಜಾತೀಯತೆಯಿಂದಲೂ ಪ್ರಜಾಪ್ರಭುತ್ವಕ್ಕೆ ಅಪಾಯವಲ್ಲವೆ?

ಬಿ.ಆರ್.ಎಸ್.ಮೂರ್ತಿ

ಜಾತೀಯತೆ, ಭ್ರಷ್ಟಾಚಾರ ಇವು ಪ್ರಜಾಪ್ರಭುತ್ವ ಫಲವನ್ನು ಜನರು ಪಡೆಯುವುದರಲ್ಲಿ ದೊಡ್ಡ ಅಡ್ಡಿಗಳು. ಜಾತೀಯತೆ ಮತ್ತು ಭ್ರಷ್ಟಾಚಾರಗಳನ್ನು ತೊಡೆದುಹಾಕಿದರೆ ನಮ್ಮ ದೇಶದ ಪ್ರಜಾಪ್ರಭುತ್ವ ಇನ್ನಷ್ಟು ಆಳವಾಗುತ್ತದೆ, ವಿಸ್ತಾರವಾಗುತ್ತದೆ ಎಂಬುದು ನಿಜ. ದೊಡ್ಡ ಪ್ರಮಾಣದ ಭ್ರಷ್ಟಾಚಾರ ಜಗತ್ತಿನ ಎಲ್ಲಾ ಬಂಡವಾಳಶಾಹಿ ಪ್ರಜಾಪ್ರಭುತ್ವಗಳ ಭಾಗವಾಗಿದೆ. ಇದರ ನಡುವೆಯೂ ಈ ಪ್ರಜಾಪ್ರಭುತ್ವದ ಕೆಲವು ಮೂಲ ಲಕ್ಷಣಗಳಾದ ಎಲ್ಲರಿಗೂ ಒಂದು ಓಟು ಎನ್ನುವ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಕ್ರಮಬದ್ಧವಾಗಿ ಚುನಾವಣೆಗಳು ಚುನಾಯಿತ ಸಂಸ್ಥೆಗಳಿಗೆ ಆಳುವವರ (ಕಾರ್ಯಾಂಗದ) ಉತ್ತರದಾಯಿತ್ವ, ಆಡಳಿತದಲ್ಲಿ ಹಾಗೂ ಕಾನೂನಿನ ಕಣ್ಣಲ್ಲಿ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಪತ್ರಿಕೆಗಳು, ಸಭೆ ಮತ್ತು ಮೆರವಣಿಗೆಗಳ ಸ್ವಾತಂತ್ರ್ಯ ಇಂತಹವು ಜಾತೀಯತೆ ಮತ್ತು ಭ್ರಷ್ಟಾಚಾರಗಳ ನಡುವೆಯು ಸಾಕಷ್ಟು ಪರಿಣಾಮಕಾರಿಯಾಗಿವೆ.

ಕೋಮುವಾದ ಪ್ರಜಾಪ್ರಭುತ್ವದ ಈ ಅಂಶಗಳನ್ನೂ ನಾಶಮಾಡುವಂತಹದು. ಕೋಮುವಾದದ ಬೆಳವಣಿಗೆ ಯೊಡನೆಯೇ ನಮ್ಮ ಸಂವಿಧಾನದಲ್ಲಿ ಕೊಡಮಾಡಿರುವ ಹಲವು ಹಕ್ಕುಗಳ ಮೇಲಿನ ನಿರಂತರ ಧಾಳಿಯೂ ಆರಂಭವಾಗಿದೆ. ಧಾರ್ಮಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ- ಮುಸ್ಲಿಮರು, ಕ್ರಿಶ್ಚಿಯನರ ಮೇಲೆ ಅವರು ಮುಸ್ಲಿಮರು, ಕ್ರಿಶ್ಚಿಯನ್ನರು ಎಂಬ ಕಾರಣಕ್ಕಾಗಿಯೇ ಧಾಳಿ ನಡೆಯುವುದು ವಿವಿಧ ನೆಪ, ಸುಳ್ಳುಗಳ ಆಧಾರ ಮೇಲೆ ಅವರ ಮೇಲೆ ಅಪಪ್ರಚಾರ ಮಾಡುವುದು, ಅವರನ್ನು ಪಾಕೀಸ್ತಾನದ ಅಭಿಮಾನಿಗಳು, ಗುಪ್ತಚಾರರು ಎಂಬ ಭಾವನೆ ಹರಡುವುದು, ಅದಕ್ಕಾಗಿ ಕ್ರಿಕೆಟ್, ಸಾಹಿತ್ಯ, ಸಂಗೀತ, ಸಿನೆಮಾ, ಟಿ.ವಿ ಮಾಧ್ಯಮಗಳನ್ನು ಕೋಮುವಾದಿ ದೃಷ್ಟಿಯಿಂದ ನೋಡುವಂತೆ ಕಲುಷಿತ ಗೊಳಿಸುವುದು, ಇವೆಲ್ಲಕ್ಕಿಂತ ಮಿಗಿಲಾಗಿ ಈ ಎರಡು ಧರ್ಮಗಳ ಪೂಜಾಸ್ಥಾನಗಳ ಮೇಲೆ ಧಾಳಿ ಮಾಡುವುದು, ಬಾಬರಿ ಮಸೀದಿಯ ಉಪಯೊಗವನ್ನೇ (ದಶಕಗಟ್ಟಲೇ ಕಾಲ) ಮಾಡದಂತೆ ವಂಚಿಸಿದ್ದರ ಜೊತೆಗೆ ಅದನ್ನು ನಾಶಪಡಿಸಿದ್ದು, ದೇಶಾದ್ಯಂತ ಕೋಮುದಂಗೆ, ಗಲಭೆಗಳ ಮೂಲಕ ಅವರಲ್ಲಿ ಅಭದ್ರತೆಯನ್ನು ಉಂಟು ಮಾಡಿರುವುದು- ಒಂದೇ ಎರಡೇ.

ಈ ನೆಲ ನಮ್ಮದು ನೀವು ಇಲ್ಲಿ ಬಾಳಲು ತಕ್ಕವರಲ್ಲ ಎಂಬ ಭಾವನೆ ಹಬ್ಬಿಸುವ ಮೂಲಕ, ಪ್ರಜೆಗಳಲ್ಲಿ ಮೊದಲನೆ, ಎರಡನೆ ಎಂದು ದರ್ಜೆಗಳನ್ನು ಸೃಷ್ಟಿಸುವ ಮೂಲಕ ಮನುಷ್ಯರೆಲ್ಲರೂ ಸಮಾನರು ಎಂಬ ಪ್ರಜಾಪ್ರಭುತ್ವದ ಮೂಲ ಆಧಾರಕ್ಕೆ ಕೊಡಲಿಪೆಟ್ಟು ಹಾಕುತ್ತದೆ ಕೋಮುವಾದ. ಮುಂದುವರೆದು ಪ್ರಜಾಪ್ರಭುತ್ವದ ಬದಲು ಸರ್ವಾಧಿಕಾರ, ಭಯಂಕರ ಭಯೋತ್ಪಾದಕ ಸರ್ವಾಧಿಕಾರವನ್ನು ನಮ್ಮ ದೇಶದ ಮೇಲೆ ಹೇರುವ ಯತ್ನ ಮಾಡುತ್ತದೆ.

ಸಂವಿಧಾನದ ಪುನರ್ವಿಮರ್ಶೆ, ಸಂಸದೀಯ ಆಡಳಿತ ಮಾದರಿಗೆ ಬದಲಾಗಿ ಚುನಾಯಿತ ಸಭೆಯ ಸಾರ್ವಭೌಮತ್ವಕ್ಕೆ ಬದಲಾಗಿ ವ್ಯಕ್ತಿಯೊಬ್ಬನ ಅಧಿಕಾರಕ್ಕೆ ದೇಶವನ್ನು ಅಧೀನ ಮಾಡುವ ಅಧ್ಯಕ್ಷೀಯ ಮಾದರಿ ಸರ್ಕಾರವನ್ನು ಹೇರಬೇಕೆನ್ನುವ ಬಿಜೆಪಿ ಘೋಷಣೆ, ರಾಷ್ಟ್ರಪತಿಗಳ ಸೂಚನೆಯ ತಿರಸ್ಕಾರ, ನ್ಯಾಯಾಂಗದ ತಿರಸ್ಕಾರ, ರಾಜ್ಯಸಭೆಯನ್ನು ಕರೆದು ಅದರ ನಿರ್ದೇಶನ ಪಡೆಯಲು ನಿರಾಕರಿಸಿದ್ದು, ಸುಗ್ರೀವಾಜ್ಞೆಗಳ ಮೂಲಕ ಆಡಳಿತ- ಇಂತಹ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಇನ್ನು ಸರ್ಕಾರದಲ್ಲಿ ಭದ್ರವಾಗಿ ಕುಳಿತುಕೊಳ್ಳಲು ಅವಕಾಶವೇ ಆಗದೆ, ಅಲ್ಪಸಂಖ್ಯಾತ ಸರ್ಕಾರ, ಮೈತ್ರಿ ಕೂಟ ಸರ್ಕಾರವೆನ್ನುವಾಗಲೇ ಪ್ರದರ್ಶಿಸಿದೆ. ಇನ್ನು ಬಹುಮತವಿರುವ ಸರ್ಕಾರ ಬಂದರೆ ಆಟಾಟೋಪಕ್ಕೆ ಮಿತಿ ಉಂಟೇ!

ಇದರ ಜೊತೆಗೆ ಶಿವಸೇನೆ, ಭಜರಂಗದಳ, ಹಿಂದೂ ಜಾಗರಣ ವೇದಿಕೆಗಳಂತಹ ಗೂಂಡಾಪಡೆಗಳು ಜನರನ್ನು ಸದಾ ಹೆದರಿಸಿ ಅಂಕೆಯಲ್ಲಿಟ್ಟು ಕೊಳ್ಳುವ ಅಂಗಸಂಸ್ಥೆಗಳು. ಪೋಲಿಸ್, ಸೈನ್ಯದಲ್ಲಿ ಕೋಮುವಾದಿ ಭೇದಗಳನ್ನು ಮಾಡುವುದು, ವಿಭಜನೆಯನ್ನು ತರುವುದು, ಜೊತೆಗೆ ಯುದ್ಧೋನ್ಮಾದವನ್ನು ಹುಟ್ಟು ಹಾಕುವುದು ಇಂತಹ ಕುಕೃತ್ಯಗಳ ಸರ್ವಾಧಿಕಾರವನ್ನು ಭಯೋತ್ಪಾದಕ ಸರ್ವಾಧಿಕಾರವನ್ನಾಗಿ, ಹಿಟ್ಲರನ ಫ್ಯಾಸಿಸ್ಟ್ ಸರ್ವಾಧಿಕಾರವನ್ನಾಗಿ ಮಾಡುತ್ತವೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಸಭೆ ಮೆರವಣಿಗೆಗಳ ಹಕ್ಕು, ಪತ್ರಿಕೆಗಳು ಮಾಧ್ಯಮಗಳ ಕತ್ತುಹಿಸುಕುವುದು ಮೊದಲಾದ ಪ್ರಜಾಪ್ರಭುತ್ವದ ಹಕ್ಕುಗಳ ಸರ್ವಾಧಿಕಾರದ ಕಾಲ ಕಸವಾಗುತ್ತವೆ. ಕೋಮುವಾದಕ್ಕೆ ಇಂತಹ ಸ್ವರೂಪವಿರುವುದರಿಂದ ಇದೇ ದೇಶದ ಪ್ರಮುಖ ಶತ್ರು. ಅದನ್ನು ಸೋಲಿಸಿದ ನಂತರ ಮಿಕ್ಕುಳಿದ ವಿಷಯ ಎನ್ನುವ ಅನಿವಾರ್ಯತೆ ಸೃಷ್ಟಿಯಾಗಿದೆ.

ಕರಡು ಪರಮಾಣು ಸಿದ್ಧಾಂತದ ಪ್ರಕಟಣೆ ಎಂಬ ಕಾನೂನು ಬಾಹಿರ ಕ್ರಮ

ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿ ಕರಡು 'ಪರಮಾಣು ಸಿದ್ಧಾಂತ' ವನ್ನು ಪ್ರಕಟಿಸಿರುವುದು ಒಂದು ಕಾನೂನು ಬಾಹಿರ ಕ್ರಮ ಎಂದು ಸಿಪಿಐಎಂ ಈ ಬಗ್ಗೆ ತನ್ನ ಬಲವಾದ ಆಕ್ಷೇಪಣೆಗಳನ್ನು ಎತ್ತಿದೆ. ಪರಮಾಣು ಶಸ್ತ್ರಗಳು ದೇಶದ ಭದ್ರತೆಯನ್ನು ಬಲಪಡಿಸುತ್ತವೆ ಎಂಬ ರಾಷ್ಟ್ರೀಯ ಭದ್ರತಾ ಸಲಹೆಗಾರ ಬ್ರಜೇಶ್ ಮಿಶ್ರಾವಾದವನ್ನು ಅದು ತಿರಸ್ಕರಿಸಿದೆ. ಒಂದು ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರತ್ ಹಾಗೂ ಸೀತಾರಾಂ ಯೆಚೂರಿ ಮಿಶ್ರರವರ ಈ ವಾದವನ್ನು ಪ್ರಶ್ನಿಸುತ್ತಾ ನಿಜವಾದ ಸಂಗತಿಯೆಂದರೆ ಪೋಖ್ರಾನ್‌ನಿಂದಾಗಿ ಕಾರ್ಗಿಲ್ ಉಂಟಾಯಿತು ಎಂದು ಹೇಳಿದರು.

ಈ ಪರಮಾಣು ಸಿದ್ಧಾಂತಕ್ಕೆ ಸಂಸತ್ತಿನಲ್ಲಿ ಅನುಮೋದನೆಯಿಲ್ಲ. ಉಸ್ತುವಾರಿ ಸರ್ಕಾರಕ್ಕೆ ಇಂತಹ ಪ್ರಮುಖ ನಿರ್ಣಯ ಕೈಗೊಳ್ಳುವ ಅಧಿಕಾರವೇ ಇಲ್ಲ. ಎರಡೇ ದಿನಗಳ ಹಿಂದೆ ಪ್ರಕಟಿಸಿದ್ದ ಎನ್‌ಡಿಎದ ಚುನಾವಣಾ ಪ್ರಣಾಳಿಕೆಯಲ್ಲಿ ಇದರ ಪ್ರಸ್ತಾಪವಿಲ್ಲ. ಆದ್ದರಿಂದ ಇದು ಬಿಜೆಪಿಯ ಚುನಾವಣೆಯ ದೃಷ್ಟಿಯಿಂದ ಮಾಡಿರುವ ಕೆಲಸ ಎಂಬುದು ಸ್ಪಷ್ಟ. ರಾಷ್ಟ್ರೀಯ ಸಲಹಾ ಮಂಡಳಿ ಪರಮಾಣು ಶಸ್ತ್ರಗಳ ಪರವಾಗಿರುವ ಒಂದು ಕ್ಲಬ್ ಅಷ್ಟೆ ಪರಮಾಣು ನಿಶ್ಯಸ್ತ್ರೀಕರಣದ ಪರವಾಗಿರುವ ಒಬ್ಬನೇ ಒಬ್ಬ ಪರಿಣತ ಅದರಲಿಲ್ಲ ಎಂಬ ಸಂಗತಿಯತ್ತ ಪ್ರಕಾಶ್ ಕಾರತ್ ಗಮನ ಸೆಳೆದರು.

ಈ ಕರಡು ಬಿಜೆಪಿ ಮುಖಂಡರು ತಮ್ಮ ಅಮೋಘ ಸಾಧನೆಯೆಂದು ಹೇಳಿಕೊಳ್ಳುವ ಲಾಹೋರ್ ಘೋಷಣೆಗೂ ವಿರುದ್ಧವಾಗಿದೆ. ಇದು ಪರಮಾಣು ಶಸ್ತ್ರಗಳಲ್ಲಿ ನಮಗೆ ಸಮಬಲವಾಗಿರಿ ಎಂದು ಪಾಕಿಸ್ತಾನಕ್ಕೆ ನೀಡಿರುವ ಆಹ್ವಾನ ಎಂದು ಟೀಕಿಸಿದ ಅವರು "ವಿಶ್ವಾಸಾರ್ಹ ಪರಮಾಣು ತಡೆ" ನಿರ್ಮಿಸಲು ತಗಲುವ ಅಪಾರ ವೆಚ್ಚದತ್ತ ಗಮನಸೆಳೆದರು.(ವರ್ಷಕ್ಕೆ 15-20 ಸಾವಿರ ಕೋಟಿ ರೂಗಳು ಎಂದು ಹೇಳಲಾಗುತ್ತಿದೆ) ಇದೇ ಸರಕಾರ ತಮಗೆ ಸಲ್ಲಬೇಕಾದ ಬಾಕಿಗೆ ಅರ್ಜಿ ಸಲ್ಲಿಸಬೇಡಿ ಎಂದು ನೌಕರರಿಗೆ ಸರಕಾರಿ ಆದೇಶ ಹೊರಡಿಸಿದೆ ಎಂದು ನೆನಪಿಸಿದರು.

ಚುನಾವಣಾ ಆಯೋಗದ ನಿರ್ದೇಶನ

ಸೀತಾರಾಂ ಯೆಚೂರಿಯವರು ಸೇನಾಪಡೆಗಳನ್ನು ರಾಜಕೀಯ ಗ್ರಸ್ತಗೊಳಿಸುವ ಅಂಶದ ಬಗ್ಗೆ ಹೇಳಿದರು. ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಗೆ ಸೇನಾಧಿಕಾರಿಗಳ ವಿವರಣೆ, ನಂತರ ಆರ್.ಎಸ್.ಎಸ್. ನ 'ಸಿಂಧು ಯಾತ್ರೆ' ಕಾರ್ಯಕ್ರಮದಲ್ಲಿ ಐ.ಟಿ.ಬಿ.ಪಿ. ಪಡೆಗಳ ಬಳಕೆ ಹಾಗೂ ಈಗ ಸೇನಾ ಆಸ್ಪತ್ರೆಗಳಿಗೆ ವಿ.ಹೆಚ್.ಪಿ. ಮುಖಂಡರ ಭೇಟಿಗೆ ಸರ್ಕಾರಿ ನೆರವು, ಅಲ್ಲಿ ವಿ.ಹೆಚ್.ಪಿ. ಪ್ರಚಾರ ಸಾಮಗ್ರಿ ಹಂಚಿದ್ದು ಇವೆಲ್ಲಾ ಅಪಾಯಕಾರಿ ಬೆಳವಣಿಗೆ ಎಂದರು. ಈ ಬಗ್ಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ರಾಷ್ಟ್ರಪತಿಗಳಿಗೆ ಹಾಗೂ ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವ ಬಗ್ಗೆ ಸೀತಾರಾಂ ಯೆಚೂರಿ ಹೇಳಿದರು. ಈಗ ಕಾರ್ಗಿಲ್ ಸಂಘರ್ಷ ಮುಗಿದಿದೆ. ದೇಶ ನಮ್ಮ ಹುತಾತ್ಮರಿಗೆ ಶ್ರದ್ಧಾಂಜಲಿ ನೀಡಿದೆ, ಶೌರ್ಯ ಪದಕಗಳನ್ನು ನೀಡಿ ಗೌರವಿಸಲಾಗಿದೆ. ಈಗ ಚುನಾವಣೆಯಲ್ಲಿ ರಕ್ಷಣಾ ಮಂತ್ರಿಗಳು

ಪುಟ 12

ಎಲ್ಲರ ಗಮನವೀಗ ಬಳ್ಳಾರಿಯತ್ತ

ಕಾಂಗ್ರೆಸ್‌ನ ಅಖಿಲ ಭಾರತ ಅಧ್ಯಕ್ಷೆ ಸೋನಿಯಗಾಂಧಿ ಈ ಚುನಾವಣೆಯಲ್ಲಿ ಬಳ್ಳಾರಿಯಿಂದ ಲೋಕಸಭಾ ಅಭ್ಯರ್ಥಿ. ಆಕೆಯನ್ನು ರಾಜಕೀಯವಾಗಿ ಎದುರಿಸದೇ, ಹುಟ್ಟಿದೂರಿನ ಬಗ್ಗೆಯೇ ದೂಷಿಸುತ್ತಾ ಬಂದಿರುವ ಬಿಜೆಪಿಯು ಸೋನಿಯಾಗೆ ಎದುರಾಳಿಯಾಗಿ ಸುಷ್ಮ ಸ್ವರಾಜ್ ರನ್ನು ಕಣಕ್ಕಿಳಿಸಿದೆ. ಜನ್ಮ ಜಾತಕಗಳ ಜಾಲಾಟಗಳು ಮೂಲತಃ ಫ್ಯಾಸಿಸ್ಟರ ಚಿಂತನಾಕ್ರಮ. ಅದಕ್ಕೀಗ ಸ್ವದೇಶಿ-ವಿದೇಶಿ ಎಂಬ ಹೊಸ ಹೊದಿಕೆ.

ಸ್ವದೇಶಿಯೋ-ವಿದೇಶಿಯೋ ಎಂಬ ಹಳಸಲು ಘೋಷಣೆಯೇ ಬಿಜೆಪಿ ಪ್ರಚಾರದ ಬಂಡವಾಳ. ಇದೀಗ ಸ್ವದೇಶಿ ಬ್ರಾಂಡಿನೊಂದಿಗೆ ಬಳ್ಳಾರಿ ಪ್ರವೇಶಿಸಿರುವ ಸುಷ್ಮಾ ಸಹ ಬಳ್ಳಾರಿ ಜನತೆಗೆ 'ಪರದೇಶಿಗಳೇ'. ಹೀಗಾಗಿ ಕಾಡುವ ಮನಸ್ಸಿನೊಂದಿಗೆ ಬಳ್ಳಾರಿಯಲ್ಲಿ ಠಿಕಾಣಿ ಹೂಡಿ ಒಂದೆರಡು ಕನ್ನಡ ವಾಕ್ಯ ಕಲಿಯುವ ಗಿಮಿಕ್ ತಯಾರಿ. ಸೋನಿಯಾಗಾಂಧಿ ದೇಶದ ಬೇರೆಡೆಗೆ ಪ್ರಚಾರಿಸದಂತೆ ತಡೆಯುವ ಲೆಕ್ಕಾಚಾರ. ಅಂದರೆ ಸೋನಿಯಾ ಬಗ್ಗೆ ಅದೆಷ್ಟು ಭಯ?


ಆದರೆ ಬಿಜೆಪಿ- ತಾವು ಮಾತ್ರ ಸ್ವದೇಶಿ ಎಂದೆಲ್ಲಾ ಪೋಜ್ ಕೊಟ್ಟುಕೊಳ್ಳುವ ಅದರ ಬಣ್ಣ ಈ ಒಂದೂವರೆ ವರ್ಷದಲ್ಲಿಯೇ ಬಯಲಾಗಿದೆ. ವಿದೇಶಿ ಬಂಡವಾಳಗಾರರ ಸ್ವದೇಶಿ ಗುಲಾಮರು ಎಂಬುದು ಸಾಬೀತಾಗಿದೆ.

ಬಿಜೆಪಿ ಅಧಿಕಾರಕ್ಕೇರುತ್ತಿರುವಂತೆಯೇ ಆರ್ಥಿಕತೆಯ ಎಲ್ಲಾ ವಲಯಗಳನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗಾಗಿ ತೆರೆದಿಟ್ಟರು. ಪೊಖ್ರಾನ್ ಸ್ಫೋಟದ ಧೂಳು ಆಕಾಶದಲ್ಲಿ ಅಡರಿರುವ ಕರಿ ನೆರಳಿನಲ್ಲಿಯೇ ಅಮೂಲ್ಯ ಸಂಪತ್ತುಗಳಾದ ಕಲ್ಲಿದ್ದಲು-ಕಬ್ಬಿಣ ಚಿನ್ನ ಹಾಗೂ ತೈಲದ ಪ್ರದೇಶಗಳನ್ನು ಅಮೇರಿಕಾ, ಜಪಾನ್ ಮುಂತಾದ ಕಂಪನಿಗಳಿಗೆ ಬರೆದುಕೊಟ್ಟರು. ಸಾರ್ವಜನಿಕ ವಲಯದ ಆಸ್ತಿಗಳನ್ನು ವಿದೇಶದ ಕಂಪನಿಗಳಿಗೆ ಸಂಶಯಾಸ್ಪದವಾಗಿ ಕಡಿಮೆ ದರಗಳಲ್ಲಿ ಮಾರಿದರು. 50 ಸಾವಿರ ಕೋಟಿಗಳ ಈ ಸಹಸ್ರಮಾನದ ಮಹಾ ಹಗರಣವಾದ ಟೆಲಿಕಾಂ ಹಗರಣ (ಟೆಲಿಫೋನ್ ಖಾಸಗೀಕರಣಕ್ಕೆ ಸಂಬಂಧಿಸಿ) ಬಿಜೆಪಿ ಸಂಘಪರಿವಾರವು ಭಾರತದ ಜನತೆಗೆ ಬಗೆದ ದ್ರೋಹದ ಶಿಖರ.

ಭಾರತದ ಭದ್ರತೆ, ಹಿತಾಸಕ್ತಿಗೆ ವಿರುದ್ಧವಾಗಿರುವ, ಸಿಟಿಬಿಟಿಗೆ ಸಹಿ ಮಾಡಲು ಅಣುಸ್ಫೋಟ ತದ ನಂತರದಲ್ಲಿ, ಕಾರ್ಗಿಲ್ ಘರ್ಷಣೆಯಲ್ಲಿ ಅಮೇರಿಕಾದ ಅಡಿಯಾಳಿನಂತೆ ಮಣಿದಿದ್ದು ಮತ್ತು ಪಾಕಿಸ್ತಾನದ ತಂತ್ರಕ್ಕೆ ಬಲಿಯಾದದ್ದು ಏನನ್ನು ಎತ್ತಿತೋರಿಸುತ್ತದೆ?

ದೇಶದ 843 ಕೃಷಿ ಉತ್ಪನ್ನಗಳನ್ನು ವಿದೇಶದ ಕಂಪನಿಗಳಿಗೆ ಮುಕ್ತವಾಗಿ ತೆರೆದಿದ್ದು ದೇಶದ ಕೃಷಿಯನ್ನು ದಿವಾಳಿಯಡೆಗೆ ನೂಕಿದೆ. ಈ ಬಜೆಟ್‌ನಲ್ಲಿ ಬಂಡವಾಳಗಾರರಿಗೆ ನೀಡಿದ ರಿಯಾಯಿತಿ ಸುಮಾರು 10 ಸಾವಿರ ಕೋಟಿ. ಸ್ವತಃ ಸುಷ್ಮ ಸ್ವರಾಜ್ ವಾರ್ತಾ ಸಚಿವೆಯಾಗಿರುವಾಗ ವಿದೇಶಿ ಟಿ.ವಿ. ಚಾನಲ್‌ಗಳಿಗೆ ಮಣೆಹಾಕಿ ನೀಡಿದ ಭಾರೀ ಉಡುಗೊರೆಗಳು ಯಾರಿಗೆ ತಿಳಿದಿಲ್ಲ. ಇಡೀ ಆಡಳಿತದ ಉದ್ದಕ್ಕೂ ವಾಜಪೇಯಿಯವರ ಪರಿವಾರದ ಹೃದಯ ಮಿಡಿದದ್ದು ವಿದೇಶಕ್ಕಾಗಿಯೇ, ಭಾರೀ ಬಂಡವಾಳಗಾರರಿಗಾಗೀಯೇ

ಈ ಅಪ್ಪಟ ದೇಶಿಯರಿಗೆ- ವಿದೇಶಿ ಕಾರು ಬೇಕು, ವಸ್ತ್ರಗಳು



ಬೇಕು. ಭಜರಂಗದಳ, ವಿಶ್ವ ಹಿಂದು ಪರಿಷತ್, ಆರ್.ಎಸ್.ಎಸ್. ಮುಂತಾದ ಪರಿವಾರಗಳಿಗೆ ವಿದೇಶಿ ಕಂಪನಿಗಳ ಯಥೇಚ್ಛ ದೇಣಿಗೆ, ವಾಕಿಟಾಕಿಗಳು ಬೇಕೇಬೇಕು. ವ್ಯವಹಾರಗಳಲ್ಲಿ ಲಂಚ ರುಷುವತ್ತು ಇರಲೇಬೇಕು.

ಸ್ವದೇಶಿ ಎಂದರೆ ತಿಲಕವಿಟ್ಟು, ಕೈಯಲ್ಲಿ ತ್ರಿಶೂಲ ಹಿಡಿದು ತಿರುಗುವ ವಿಧ್ವಂಸಕ, ವಿಕೃತ ಮನಸ್ಸುಗಳಲ್ಲ.

ಸುಲಿಗೆಕೋರರು ದೇಶಿಯರೋ-ವಿದೇಶಿಯರೋ ಎಂಬುದರ ಬಗ್ಗೆ ಎಳಷ್ಟು ಕಾಳಜಿ ಇಲ್ಲ ಅಥವಾ ಇದನ್ನು ಮರೆಮಾಚಲೆಂದೇ ಅಬ್ಬರದಲ್ಲಿ ಸ್ವದೇಶಿ- ವಿದೇಶಿ ಎಂಬ ಪುಕಾರು ಹುಟ್ಟು ಹಾಕುವುದು. ಹೀಗಿದೆ ಇವರ ಸಿದ್ಧಾಂತ- ಜರ್ಮನಿಯ ಹಿಟ್ಲರ್ ಮತ್ತು ಗೊಬೆಲ್ಸ್‌ನಿಂದ ಎರವಲು ಪಡೆದ ಸಿದ್ಧಾಂತವಲ್ಲವೇ.

ಸಂಘ ಪರಿವಾರ ಹೇಳುವಂತೆ ಹುಟ್ಟಿನಿಂದಲೇ ಸ್ವದೇಶಿ ವಿದೇಶಿ ಎಂದು ಪರಿಗಣಿಸುವಂತಾದರೆ ಗೃಹ ಸಚಿವ ಎಲ್.ಕೆ. ಅಡ್ವಾನಿ, ಮಾಜಿ ಪ್ರಧಾನಿ ಐ.ಕೆ.ಗುಜ್ರಾಲ್ ಮುಂತಾದ ಹಲವರು ವಿದೇಶಿಯಾಗುತ್ತಾರೆ

ಆದರೆ ಈಗಾಗಲೇ ಮಲೇಶಿಯಾ, ಸಿಂಗಾಪುರ, ಫಿಜಿ, ಗಯಾನ, ಮಾರಿಷಸ್ ಮುಂತಾದ ದೇಶಗಳಲ್ಲಿ ರಾಷ್ಟ್ರಾಧ್ಯಕ್ಷರಂತಹ ಹುದ್ದೆ ಅಲಂಕರಿಸಿದ ಭಾರತೀಯರ ಬಗ್ಗೆ ಏನು ಹೇಳುತ್ತಾರೆ?. ಅವರು ಕೇವಲ ಭಾರತಕ್ಕೆ ನಿಷ್ಠರು, ದೇಶ ದ್ರೋಹಿಗಳು ಎಂದು ಅಲ್ಲಿನ ಜನ ಭಾವಿಸಬೇಕೆ? ಇಲ್ಲಿ ಅಡ್ವಾನಿಯಂತೇ ಅವರ ನೆಚ್ಚಿನ ನಾಯಕರಾಗಿ ಆಯ್ಕೆಯಾಗಿರುವುದು. ಹುಟ್ಟಿನಿಂದ ದೇಶಪ್ರೇಮ ಅಳೆಯುವ ಸಂಘಪರಿವಾರ ಸೋನಿಯಾಳನ್ನು ವಿದೇಶಿ ಎನ್ನುವುದರಲ್ಲಿ ಸೂಕ್ಷ್ಮವಾಗಿ ಮತೀಯ ಮನೋಭಾವನೆಯಿದೆ. ದೇಶದ ಹಿತಕಾಯುವ ವಿದೇಶಿ ವಿಭಾಗಗಳ ವಿದೇಶಿ ಒತ್ತಡ ಎದುರಿಸುವ ಸಾಮರ್ಥ್ಯ, ಅದನ್ನು ಪ್ರತಿಪಾದಿಸುವ ರಾಜಕೀಯ ಧೋರಣೆಯ ಪಕ್ಷ ಮುಖ್ಯ. ಹುಸಿ ರಾಷ್ಟ್ರೀಯತೆಯ ಉನ್ಮಾದದ, ಕೋಮುವಾದದ ಮನಸ್ಸಿನ ಪಕ್ಷ ಅಲ್ಲ.

ಭಾರತದ ಸಂವಿಧಾನದಂತೆ ಸೋನಿಯ ಭಾರತದ ಪ್ರಜೆ. ಚುನಾವಣಾ ಸ್ಪರ್ಧೆಗೆ ಅವರ ಅಭ್ಯರ್ಥಿತನದ ಅಂಗೀಕಾರವೇ ಇದಕ್ಕೆ ಸ್ಪಷ್ಟ ಸೂಚನೆ. ದೇಶದ ಸಂವಿಧಾನ ರೂಪಿಸುವಾಗ ಹಲವು ಮಗ್ಗಲುಗಳಲ್ಲಿ ದೀರ್ಘ ಚರ್ಚೆ ನಡೆದು ಅಂತಿಮವಾಗಿ ಒಪ್ಪಿಕೊಂಡ ಸತ್ಯಗಳು ಇವು.

ಒಂದು ಪಕ್ಷದ ನಾಯಕತ್ವವನ್ನು ಆಯ್ಕೆ ಮಾಡುವುದು, ಆ ಪಕ್ಷದ ಅಭ್ಯರ್ಥಿತನದ ಬಗ್ಗೆ ತೀರ್ಮಾನಿಸುವುದು ಆಯಾಯಾ ರಾಜಕೀಯ ಪಕ್ಷ ಮಾತ್ರ. ಪಕ್ಷವನ್ನು ಆಯ್ಕೆ ಮಾಡುವುದು ಜನತೆಗೆ ಬಿಟ್ಟ ಆಯ್ಕೆ. ವಿದೇಶಿ ಆಳ್ವಿಕೆ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಕಿಂಚಿತ್ತು ಹೋರಾಡದ ಈ ಸಂಘಪರಿವಾರದ ದೇಶ ಭಕ್ತಿ, ದೇಶ ಪ್ರೇಮಗಳನ್ನು ಅರಿಯಲಾರದಷ್ಟು ಜನತೆ ಮುಗ್ಧರಲ್ಲ. ಸೋನಿಯಾರ ಬಗ್ಗೆ ತಮ್ಮದೇ ಕೃತ್ಯಗಳ ಬಗ್ಗೆ ಬಿಜೆಪಿ ಮತ್ತು ಮಿತ್ರ ಕೂಟಕ್ಕೆ ಭಯ ಆವರಿಸಿದಂತಿದೆ. ಇವರ ಸ್ವದೇಶಿ ನಾಯಕತ್ವವನ್ನು ಜನ ತಿರಸ್ಕರಿಸಬಹುದೆಂಬ ಅನುಮಾನವೇ ಇಷ್ಟು ಆಕ್ರಮಣಕಾರಿಯಾಗಿ ವರ್ತಿಸುವಂತೆ ಮಾಡುತ್ತಿದೆ.

ಅಂತು ಬಳ್ಳಾರಿ ಲೋಕಸಭಾ ಕ್ಷೇತ್ರವೀಗ ಅತ್ಯಂತ ಹೆಚ್ಚಿನ ಮಹತ್ವ ಪಡೆದಿದೆ. ಕೋಮುವಾದ ಮತ್ತು ಧರ್ಮನಿರಪೇಕ್ಷತೆಯ ಶಕ್ತಿಗಳ ನಡುವಿನ ಹೋರಾಟ ಕಣವಾಗಿ ಪರಿವರ್ತನೆಯಾಗಿದೆ. ಈ ಹೋರಾಟದಲ್ಲಿ ಜನರ ನಿಜವಾದ ಸಮಸ್ಯೆಗಳು ಸಾಮರಸ್ಯ, ಸಮಾನತೆಯ ಜೀವನ, ಆರ್ಥಿಕ ನೀತಿಗಳು, ಕಾರ್ಗಿಲ್‌ನಲ್ಲಿ ಕೇಂದ್ರಸರ್ಕಾರದ ಹೊಣೆಗೇಡಿತನ ಇವು ಪ್ರಮುಖ ಪ್ರಶ್ನೆಯಾಗಬೇಕು. ಇದನ್ನು ಮುಚ್ಚಿಡಲು ಸುಳ್ಳು ಪ್ರಶ್ನೆಗಳನ್ನು ಎತ್ತುವುದಲ್ಲ. ಈ ಹೋರಾಟದಲ್ಲಿ ಕೋಮುವಾದಿಗಳು ಮಣ್ಣು ಮುಕ್ಕಲೇಬೇಕು. ಅದಕ್ಕಾಗಿ ಎಲ್ಲಾ ಪ್ರಾಮಾಣಿಕ ದೇಶ ಪ್ರೇಮಿಗಳು ಜಾತ್ಯಾತೀತ ಶಕ್ತಿಗಳು ಶ್ರಮಿಸಬೇಕು. ಇದು ಕೇವಲ ಬಳ್ಳಾರಿ ಮಾತ್ರವಲ್ಲ ಕರ್ನಾಟಕ ಹಾಗೂ ದೇಶದಲ್ಲಿ ಕೋಮುವಾದಕ್ಕೆ ಪ್ರತಿರೋಧ ಒಡ್ಡುವ ಹೋರಾಟಕ್ಕೆ ಹುರುಪು ತುಂಬುತ್ತದೆ. ದೇಶದ ಅತ್ಯುನ್ನತ ರಂಗಗಳಲ್ಲಿ ನುಸುಳಿರುವ ಕೋಮುವಾದಿಗಳನ್ನು ಹೊರಹಾಕುವ ಹೋರಾಟವಾಗುತ್ತದೆ.

ಈಗಂತೂ ಸೋನಿಯಾ ಬಳ್ಳಾರಿಯ ಅಭ್ಯರ್ಥಿ, ಬಳ್ಳಾರಿಯ ಮತ್ತು ಆ ಪ್ರದೇಶದ ಹಿಂದುಳಿದಿರುವಿಕೆ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಅರಿಯುವದರತ್ತ, ಪರಿಹರಿಸುವುದರತ್ತ ಸೋನಿಯಾ ಗಮನ ಹರಿಸಲಿ.

-ಎಸ್.ವೈ.ಗುರುಶಾಂತ್

ಎನ್.ಡಿ.ಎ ಪ್ರಣಾಳಿಕೆಯೋ ಅಥವಾ ಬಹುವರ್ಣದ ವಾಜಪೇಯಿ ಆಲ್ಬಮ್ಮೋ?



ಎನ್.ಡಿ.ಎ ಎಂಬ ನಾಮಾಂಕಿತ ಬಿಜೆಪಿ ನೇತೃತ್ವದ ಕೂಟ ತನ್ನ ಚುನಾವಣಾ ಪ್ರಣಾಳಿಕೆ ಹೊರಡಿಸಿದೆ. 20 ಪುಟಗಳ ಈ ಪುಸ್ತಕದಲ್ಲಿ ವಾಜಪೇಯಿರವರ ಹತ್ತು ವರ್ಣರಂಜಿತ ಫೋಟೋಗಳಿವೆ. ಆದ್ದರಿಂದ ಇದು ವಾಜಪೇಯಿಯವರ ಚಿತ್ರಸಂಗ್ರಹ (ಆಲ್ಬಮ್)ವೋ ಅಥವಾ ಚುನಾವಣಾ ಪ್ರಣಾಳಿಕೆಯೋ ಎಂದು ಸಂದೇಹ ಬರದಿರದು. ಮುದ್ರಿತ ಅಕ್ಷರಗಳಿಗಿಂತ ವರ್ಣಚಿತ್ರಗಳೇ ಹೆಚ್ಚು ಜಾಗ ಆಕ್ರಮಿಸಿದಂತಿದೆ. ಎನ್.ಡಿ.ಎ ಎಂಬ ವೇದಿಕೆಯ ಪೊಳ್ಳುತನದ ಪ್ರತೀಕ ಇದು. ವರ್ಣಚಿತ್ರಗಳು ಚುನಾವಣೆಗೆಲ್ಲುವುದಾದರೆ ಎನ್.ಡಿ.ಎ. ಗೆಲುವು ಈ ಪ್ರಣಾಳಿಕೆಯಿಂದಲೇ ಶತಸಿದ್ಧ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪ್ರಕಾರ ಕಾರತ್ ಗೇಲಿ ಮಾಡಿದ್ದಾರೆ. ಬಹುಶಃ ಎನ್.ಡಿ.ಎ. ಮುಖಂಡರಿಗೂ ಹಾಗೇ ಅನ್ನಿಸಿರಬೇಕು. ಆದ್ದರಿಂದ ನಂತರ ಒಂದು 'ಆರ್ಥಿಕ ಕಾರ್ಯ ಸೂಚಿ' ಬಿಡುಗಡೆ ಮಾಡಿದ್ದಾರೆ.

ಈ ಪ್ರಣಾಳಿಕೆ ರಾಜಕೀಯ ಸ್ಥಿರತೆಯ ಭರವಸೆ ನೀಡಿದೆ. ವಾಜಪೇಯಿಯವರು ತನ್ನ ತನ್ನ ಹಿಂದಿನ ಅನುಭವಗಳಿಂದ ಎಳ್ಳಷ್ಟು ವಿಚಲಿತರಾದಂತಿಲ್ಲ ಎಂದು ಈ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿಯ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಟಿಪ್ಪಣಿಮಾಡಿದೆ. 1998ರಲ್ಲಿ ರಚಿಸಿದ ಸರ್ಕಾರ ತನ್ನ ಮಂದೆಯನ್ನು ಜತೆಗಿಟ್ಟುಕೊಳ್ಳಲಾರದ ಅವರ ಅಸಾಮರ್ಥ್ಯದಿಂದಾಗಿ ಕುಸಿಯಿತು. ರಾಜಕೀಯ ಅಸ್ಥಿರತೆಗೆ, 1999ರ ಚುನಾವಣೆಗಳಿಗೆ ಇದೇ ಕಾರಣ ತಾನೇ?. ಆದರೂ ವಾಜಪೇಯಿ ಮತ್ತೆ ಅದೇ ಕಸರತ್ತಿಗೆ ಇಳಿದಿದ್ದಾರೆ- ಈ ಬಾರಿ ಇನ್ನೂ ದೊಡ್ಡದಾದ ಅಜಗಜಾಂತರದ ಹತಾಶೆಯ ಸಮ್ಮಿಶ್ರ ಕೂಟ.

ರಾಜಕೀಯ ಸ್ಥಿರತೆ - ಲೊಳ ಲೊಟ್ಟೆ!.

ಹಿಂದಿನ ಬಾರಿ ಎನ್.ಡಿ.ಎ ದಲ್ಲಿ ಯಾವ ಯಾವ ಪಕ್ಷಗಳಿವೆ ಎಂದು ತಿಳಿಸಲಾಗಿತ್ತು. ಈ ಭಾರಿ ಅದೂ ಇಲ್ಲ. ಈ ಪ್ರಣಾಳಿಕೆ ಬಿಡುಗಡೆಯ ವೇಳೆ ಶರದ್ ಯಾದವ್ ಜನತಾದಳ ಎನ್.ಡಿ.ಎ ಯಲ್ಲಿದೆಯೇ ಎಂದು ಕೇಳಿದಾಗ ವಾಜಪೇಯಿ ಉತ್ತರಿಸಲಾಗಲಿಲ್ಲ. ಇನ್ನೂ ವಿಚಿತ್ರ ಸಂಗತಿಯೆಂದರೇ ಪಕ್ಕದಲ್ಲೇ ಕುಳಿತಿದ್ದ ಫಾರುಕ್ ಅಬ್ದುಲ್ಲಾ ತಾನು ಎನ್.ಡಿ.ಎಯಲ್ಲಿ ಇಲ್ಲ ಎಂದು ಸಾರಿದರು. ಚಂದ್ರಬಾಬು ನಾಯ್ಡು ಕೂಡ ಇಲ್ಲ, ಮಮತಾ ಬ್ಯಾನರ್ಜಿಕೂಡ ಇಲ್ಲ. ಅಂದರೆ ನೀತಿಬದ್ಧ ರಾಜಕೀಯದ ಅಳಿದುಳಿದ ಅಂಶಗಳನ್ನು ಗಾಳಿಗೆ ತೂರಿ ಈ ಎಲ್ಲಾ ಪಕ್ಷಗಳು ಒಂದಾಗಿವೆ ಎಂದೇ ಅರ್ಥ ಅಲ್ಲವೇ? ಏತಕ್ಕಾಗಿ?- ಕೇವಲ ಅಧಿಕಾರ ಕಬಳಿಸಲಿಕ್ಕಾಗಿ. ಇಂಥಹ ಒಂದು ಕೂಟ ಸ್ಥಿರತೆ ನೀಡುತ್ತದೆ ಎಂದರೆ ಅದಕ್ಕಿಂತ ಹಾಸ್ಯಾಸ್ಪದ ಸಂಗತಿ ಬೇರೇನಿದೆ?. ಈ ಕಸರತ್ತು ಆರಂಭವಾಗುವ ಮೊದಲೇ ಇದರ ಟೊಳ್ಳುತನ ಬಯಲಾಗಿದೆ.

ಕಳೆದ ಭಾರಿ ಕೇವಲ ಒಬ್ಬ ಪಾಲುದಾರರು ಸಾಕಾಯಿತು ವಾಜಪೇಯಿ ಸರ್ಕಾರವನ್ನು ಅಸ್ಥಿರಗೊಳಿಸುವುದಕ್ಕೆ. ಈ ಭಾರಿ ಆ ಕೆಲಸ ಮಾಡಬಲ್ಲ ಹಲವರಿದ್ದಾರೆ. ಏನಾದರೂ ಈ ಕೂಟ ಅಧಿಕಾರಕ್ಕೆ ಬಂದರೆ ಇನ್ನೊಂದು ಸುತ್ತಿನ ಅಸ್ಥಿರತೆಯನ್ನು, ಮತ್ತೊಂದು ಮಧ್ಯಂತರ ಚುನಾವಣೆಯನ್ನು ಭಾರತದ ಜನತೆ ಖಂಡಿತವಾಗಿ ಕಾಣಬೇಕಾಗಿದೆ.

ಸಂದರ್ಭ ಸಾಧಕತನದ ಕೆಸರಿನಾಳದಲ್ಲಿ

ಮತ್ತೆ ಅಧಿಕಾರ ಕಬಳಿಸಲು ಬಿಜೆಪಿ ಎಷ್ಟು ಹತಾಶವಾಗಿದೆ ಎಂದರೆ ಅದಕ್ಕಾಗಿ ಅದು ಪ್ರದರ್ಶಿಸುತ್ತಿರುವ ಸಂದರ್ಭಸಾಧಕತನಕ್ಕೆ ಮಿತಿಯೇ ಇಲ್ಲ. ಹಿಂದೆ ತನ್ನ ಕೋಮುವಾದಿ ರಾಜಕೀಯವನ್ನು 'ಕಮಂಡಲ ರಾಜಕೀಯ' ಎಂದು ವ್ಯಂಗ್ಯ ಮಾಡಿದವರನ್ನು ಈ ಭಾರಿ ಅಪ್ಪಿಕೊಳ್ಳಲು ಮುಂದಾಗಿದೆ. ಬಿಜೆಪಿ ಆ ಜನತಾದಳ ಮುಖಂಡರದ್ದು 'ಜಾತೀ ರಾಜಕೀಯ' ಹರಡುವ ಮಂಡಲ ರಾಜಕೀಯ ಎಂದು ಹೇಗೆ ಗೇಲಿ ಮಾಡಿತ್ತು ಎಂಬುದನ್ನು ನೆನಪಿಸಿಕೊಳ್ಳಿ.

ಅತ್ತ ಕರುಣಾನಿಧಿಯ ಡಿಎಂಕೆ ರಾವಣರ ಶಿಷ್ಯರು ಎಂದವರು ಈ ಶ್ರೀರಾಮನ ಅಪರಾವತಾರಗಳೇ ಅಲ್ಲವೇ? ಈಗ ಮತ್ತೆ ಅಧಿಕಾರ ಕಬಳಿಸಲು ತಮ್ಮ ಪೌರಾಣಿಕ ಶತ್ರುಗಳನ್ನು ಆಲಂಗಿಸಲೂ ಹೇಸದ ಜನ ಇವರು.

ಬಿಜೆಪಿಯ ಹೊಲಸು ಸಂದರ್ಭ ಸಾಧಕತೆ ಇಷ್ಟೇ ಅಲ್ಲ. ತಮಿಳು ನಾಡಿನಲ್ಲಿ ಡಿಎಂಕೆ ವಿರುದ್ಧ ಎಐಎಡಿಎಂಕೆ ಜತೆ, ಹರಿಯಾಣದಲ್ಲಿ ಚೌತಾಲರ ವಿರುದ್ಧ ಬನ್ಸಿಲಾಲರ ಹೆಚ್.ವಿ.ಪಿ ಯೊಂದಿಗೆ, ಆಂಧ್ರಪ್ರದೇಶದಲ್ಲಿ ಚಂದ್ರಬಾಬುನಾಯ್ಡು ವಿರುದ್ಧ ಲಕ್ಷ್ಮಿ ಪಾರ್ವತಿಯ ಟಿಡಿಪಿ ಯೊಂದಿಗೆ ಮೈತ್ರಿ ಮಾಡಿಕೊಂಡ ಈ ಪಕ್ಷ ಅವರಿಗೆಲ್ಲಾ ಕೈಕೊಟ್ಟು ಕಳೆದ ಭಾರಿ ತಾನು ವಿರೋಧಿಸಿದವರೊಂದಿಗೇ ಕೈ ಜೋಡಿಸಲು ಹಿಂದೆ ಮುಂದೆ ನೋಡುತ್ತಿಲ್ಲ. ಕರ್ನಾಟಕದಲ್ಲೂ ತಾನು ಇತ್ತೀಚಿನವರೆಗೆ ದಿನಬೆಳಗಾದರೆ ಎಗರಾಡುತ್ತಿದ್ದ ಜೆ.ಹೆಚ್. ಪಟೇಲರೊಂದಿಗೆ ಕೈ ಜೋಡಿಸಿದೆ.

ಎನ್.ಡಿ.ಎ.ದಲ್ಲಿ ರಾರಾಜಿಸುತ್ತಿರುವ ಸಂದರ್ಭ ಸಾಧಕತನದ ಸ್ವರೂಪವಿದು. '**ನೀತಿಗೆಟ್ಟವರಲ್ಲೂ ಸ್ವಲ್ಪ ನೈತಿಕ ಶಕ್ತಿ, ಕಳ್ಳರಲ್ಲೂ ಸ್ವಲ್ಪ ಗೌರವ ಎಂಬುದು ಇರುತ್ತದಂತೆ. ಬಿಜೆಪಿ ಅದನ್ನೂ ಬಿಟ್ಟಿದೆ. ವಾಜಪೇಯಿ ಈ ಸಮಯಸಾಧಕ ನೀತಿಬಾಹಿರ ಗಣಗಳ ಉತ್ಸವಮೂರ್ತಿ**' ಎಂದು ವರ್ಣಿಸಿರುವ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ ಈ ಕೂಟಕ್ಕೂ, ಸ್ಥಿರತೆ ಎಂಬುದಕ್ಕೂ ಬಹಳ ದೂರದ ನಂಟು ಎಂದು ವ್ಯಂಗವಾಗಿ ಹೇಳಿದೆ.



ಚುನಾವಣೆ-99



ಹೀಗನ್ನುತ್ತಿದ್ದಾರೆ........

ಜಾಣತನವೋ, ಜೋಕೋ?

(ಏಕತಾ ಸಮಾವೇಶದಲ್ಲಿ) ಅಲ್ಪಸಂಖ್ಯಾತರ ರಕ್ಷಣೆಗಾಗಿ ಬಿಜೆಪಿ ಜೊತೆ ಮೈತ್ರಿ ಎಂಬ ಮುಖ್ಯಮಂತ್ರಿಗಳ ಮಾತು ಜಾಣತನವೋ ಜೋಕೋ ತಿಳಿಯದಾಯಿತು.

- 'ಪ್ರಜಾವಾಣಿ'ಯಲ್ಲಿ ವಾಚಕರೊಬ್ಬರ ಪತ್ರ

ಬಿಜೆಪಿ ಹೊರತಲ್ಲವಂತೆ!

ಮಹಿಳೆಯರಿಗೆ 33% ಮೀಸಲಾತಿ ನೀಡದಿರಲು ಪುರುಷ ಪ್ರಧಾನ ಸಮಾಜವೇ ಕಾರಣ. ಇದಕ್ಕೆ ಭಾರತೀಯ ಜನತಾಪಕ್ಷ ಕೂಡಾ ಹೊರತಲ್ಲ.

- ಬಳ್ಳಾರಿಯಲ್ಲಿ ಈಗ ಬಿಜೆಪಿ ಅಭ್ಯರ್ಥಿಯಾಗಿರುವ ಸುಷ್ಮಾ ಸ್ವರಾಜ್

(ಭಾರತೀಯ ರಾಜಕಾರಣದಲ್ಲಿ ಇಂದು ಪುರುಷ ಪ್ರಧಾನ ಸಮಾಜದ ಅತ್ಯಂತ ಪ್ರಬಲ ಪ್ರತಿಪಾದಕ ಬಿಜೆಪಿಯೇ ತಾನೇ?)

ಇದ್ಯಾವ ರಾಜಕೀಯ ಸಿದ್ಧಾಂತ?

ಎ.ಬಿ.ವಿ.ಪಿ. ಯಾವುದೇ ರಾಜಕೀಯ ಸಿದ್ಧಾಂತಗಳನ್ನು ಮುಂದಿಡುವುದಿಲ್ಲ......... ವಿದೇಶಿ ರಾಷ್ಟ್ರೀಯತೆಯವರು ದೇಶದಲ್ಲಿ ಅತ್ಯುನ್ನತ ಹುದ್ದೆ ಪಡೆಯುವ ಪ್ರಶ್ನೆ ಕುರಿತಂತೆ ವಿದ್ಯಾರ್ಥಿಗಳು ಯೋಚಿಸಬೇಕು.(!)

- ಬೆಂಗಳೂರಿನ ಸಮಾರಂಭವೊಂದರಲ್ಲಿ ಎ.ಬಿ.ವಿ.ಪಿ ಅಧ್ಯಕ್ಷ ಎಂ.ಕೆ.ಶ್ರೀಧರ್

ಸಂಶಯಕ್ಕೆ ಎಡೆ

ಸರ್ಕಾರ ಏನೆಲ್ಲಾ ಹೇಳಿ ಜನರನ್ನು ನಂಬಿಸಲು ಪ್ರಯತ್ನಿಸಿದರೂ ಜಗಮೋಹನ್ ಅವರ ಖಾತೆಯನ್ನು ಬದಲಾಯಿಸಿ, ಅಟಾರ್ನಿ ಜನರಲ್ ಮತ್ತು ಹಣಕಾಸು ಸಚಿವಾಲಯದ ಆಕ್ಷೇಪಗಳನ್ನು ಬದಿಗಿರಿಸಿ ಹೊಸ ಟೆಲಿಕಾಂ ನೀತಿಯನ್ನು ಜಾರಿಗೊಳಿಸಿದ ಕ್ರಮ ಮಾತ್ರ ಸಂಶಯಕ್ಕೆ ಎಡೆ ಮಾಡಿಕೊಡದೇ ಬಿಡುವುದಿಲ್ಲ.

- 'ಪ್ರಜಾವಾಣಿ'ಯ ಒಂದು ಲೇಖನದಲ್ಲಿ

ಪ್ರಧಾನಿಗಳ ಆಪ್ತ ಕಾರ್ಯದರ್ಶಿ - ಅಳಿಯರ ಭಲೇ ಜೋಡಿ!

ಬ್ರಜೇಶ್ ಮಿಶ್ರರವರು ಪ್ರಧಾನಿಯವರ ಪ್ರಧಾನ ಕಾರ್ಯದರ್ಶಿ. ರಂಜನ್ ಭಟ್ಟಾಚಾರ್ಯರವರು ಪ್ರಧಾನಿ ವಾಜಪೇಯಿಯವರ ದತ್ತು ಅಳಿಯ. ಅವರಿಬ್ಬರಿಗೂ ಏನು ಸಂಬಂಧ ಎನ್ನುವಿರಾ? ತೆರೆಮರೆಯ ಸಂಬಂಧವಿದೆ ಎಂದು ಹೇಳಲಾಗುತ್ತಿದೆ. ರಹಸ್ಯ ವ್ಯವಹಾರಗಳು, ರಸವತ್ತಾದ ರಾತ್ರಿಗಳು, ಹಣದ ಚೀಲಗಳ ಹಸ್ತಾಂತರ, ಅಧಿಕಾರಿಗಳ ವರ್ಗಾವರ್ಗಿ ಮುಂತಾದವುಗಳು ಮಿಶ್ರಾ - ರಂಜನ್ ಜೋಡಿಯ ಆಶ್ರಯದಲ್ಲಿ ನಡೆಯುತ್ತಿವೆ ಎನ್ನುವುದು ಕಪೋಲಕಲ್ಪಿತ ಊಹಾಪೋಹವಿರಬಹುದು. ಆದರೆ ಈ ಬಗ್ಗೆ ಗುಸು-ಗುಸು ಪಿಸು-ಪಿಸು ಪ್ರಧಾನಿ ಕಚೇರಿಯಲ್ಲಿ ಹಾಗೂ ಸರ್ಕಾರಿ ಕಛೇರಿಗಳಲ್ಲಿ ನಡೆದೇ ಇದೆ. ವಾಜಪೇಯಿಯವರ ಮುಖ ನೋಡಿದರೆ ಹೀಗೆ ನಡೆಯುತ್ತಿರಲಾರದು ಎನಿಸುವುದು, ಅಲ್ಲವೇ? ಅಕ್ಟೋಬರ್‌ವರೆಗೆ ಕಾದು ನೋಡಿ. ಯಾವ ರಾಜಕೀಯ ಪಕ್ಷ ವ್ಯೂಹ ಅಧಿಕಾರಕ್ಕೆ ಬಂದು ಈ ರಹಸ್ಯಮಯ ಚಕ್ರವ್ಯೂಹವನ್ನು ಭೇದಿಸುವುದೋ ನೋಡೋಣ.

- ಸಂಯುಕ್ತ ಕರ್ನಾಟಕ ದಲ್ಲಿ ಟಿಪ್ಪಣಿ

ಎಂತಹಾ ಮಾದರಿ!

ಬ್ರಾಹ್ಮಣರ ನಡುವೆ ಸರಿಯಾದ ಅಭ್ಯರ್ಥಿಗಳನ್ನು ಪ್ರಾಯೋಜಿಸಿ, ಬೆಂಬಲಿಸುವುದಾಗಿ ಕಾಂಗ್ರೆಸ್(ಐ) ಮತ್ತು ಲೋಕಶಕ್ತಿ ಮುಖಂಡರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಂಘದ ಅಧ್ಯಕ್ಷರಿಗೆ ಸಾರ್ವಜನಿಕವಾಗಿ ಭರವಸೆ ನೀಡಿರುವುದು ಪ್ರಶಂಸಾರ್ಹ. ಕರ್ನಾಟಕದ ಈ ಮುಖಂಡರ ಮಾದರಿಯನ್ನು ಬೇರೆ ರಾಜ್ಯಗಳಲ್ಲೂ ಅನುಸರಿಸಬೇಕು.

- ಹಿಂದು ಪತ್ರಿಕೆಯಲ್ಲಿ ವಾಚಕರ ಪತ್ರ



ದಿಲ್ಲಿ-ಲಾಹೋರ್ ಬಸ್ಸಿನ ಬದಲು ಈಗ... ದಿಲ್ಲಿ-ಕರ್ನಾಟಕ-ಆಂಧ್ರ-ಬಿಹಾರ-ತಮಿಳುನಾಡು.........

ಆರ್.ಕೆ.ಲಕ್ಷ್ಮಣ್ ವ್ಯಂಗ್ಯ

ಆಶ್ಚರ್ಯವಾಗಿಲ್ಲ

ವಾಧ್ವಾ ಆಯೋಗ ಯಾವುದೇ ಹಿಂದುತ್ವ ಸಂಘಟನೆ(ಸ್ಟೈನ್ಸ್ ಕೊಲೆ ಪ್ರಕರಣದಲ್ಲಿ) ಪಾತ್ರ ವಹಿಸಿಲ್ಲ ಎಂದು ಸರ್ಟಿಫಿಕೇಟ್ ನೀಡಿಲ್ಲ. ತನ್ನ ಮುಂದೆ ಮಂಡಿಸಿದ ಸಾಕ್ಷ್ಯಾಧಾರಗಳಿಂದ ಈ ಕೊಲೆ ಪ್ರಕರಣದಲ್ಲಿ ಯಾವುದೇ ಸಂಘಟನೆಯ ಪಾತ್ರ ಸಾಬೀತಾಗುವುದಿಲ್ಲ ಎಂದಷ್ಟೇ ಅದು ಹೇಳಿದೆ. ಈ ಕೊಲೆಯ ಹಿಂದಿರುವ ದಾರಾಸಿಂಗ್‌ನ ಕೋಮುವಾದಿ ಸಂಪರ್ಕಗಳನ್ನು ಸಾಬೀತು ಮಾಡುವ ಸಂಗತಿಗಳನ್ನು ಕೇಂದ್ರ ಮತ್ತು ಒರಿಸ್ಸಾ ಸರ್ಕಾರ ಆಯೋಗಕ್ಕೆ ಒದಗಿಸಲಿಲ್ಲ. ಕೇಂದ್ರ ಸರ್ಕಾರದ ಈ ಕ್ರಮ ನಮಗೇನು ಆಶ್ಚರ್ಯ ತಂದಿಲ್ಲ.


- ಅಖಿಲ ಭಾರತ ಕ್ರಿಶ್ಚಿಯನ್ ಮಂಡಳಿ

ಬಿಜೆಪಿ ನಾಯಕರ ಮನೆ ಬಾಗಿಲು ಕಾದ ಪಟೇಲ್ ಲೋಹಿಯಾ ಜಯಪ್ರಕಾಶ್ ನಾರಾಯಣ್‌ರ ತತ್ವಗಳನ್ನೆಲ್ಲಾ ದೆಹಲಿಯಲ್ಲೇ ಸಮಾಧಿ ಮೂಡಿ ಬಂದಿದ್ದಾರೆ...... ತತ್ವ ಎಂಬುದು ಇದ್ದರೆ ಪಂಚಾಯ್ತಿ ಸಚಿವ ಎಂ.ಪಿ.ಪ್ರಕಾಶ್ ಹಿಂದೂ ಮುಂದೂ ನೋಡದೆ ದೇವೇಗೌಡರ ಪಾಳೆಯದಲ್ಲಿರಬೇಕಿತ್ತು. ಆದರೆ ಲಿಂಗಾಯತರ ಲಾಬಿ, ಅಧಿಕಾರ ದಾಹಕ್ಕಾಗಿ ಈ ಮನುಷ್ಯ ಪಟೇಲರನ್ನು ಬಿಟ್ಟು ಬರಲಿಲ್ಲ

- 'ಅಗ್ನಿ' ವಾರಪತ್ರಿಕೆಯಲ್ಲಿ ಟಿಪ್ಪಣಿ

ಚಿಡ್ಡಿಗಳು, ಸ್ವಾರ್ಥಸಾಧಕ ರಾಜಕಾರಣಿಗಳು ಮತ್ತು ಚಿಡ್ಡಿ ಪತ್ರಕರ್ತರನ್ನು ಬಿಟ್ಟರೆ ಸಾಮಾನ್ಯ ಜನರ್‍ಯಾರೂ ಸೋನಿಯ ವಿದೇಶಿ ಎಂಬ ಬಗ್ಗೆ ಒಂದಿಷ್ಟು ತಲೆಕೆಡಿಸಿಕೊಂಡಿಲ್ಲ. ಏಕೆಂದರೆ ಎಲ್ಲಾ ಭಾರತಿಯ ಸಾಮಾನ್ಯರಿಗೆ ನೆಮ್ಮದಿ ಬೇಕು, ಸಂತೃಪ್ತ ಬದುಕು ಬೇಕು, ಕ್ರೈಸ್ತರೆಂದು ಮಕ್ಕಳನ್ನು ಕೊಲ್ಲುವುದು, ಇಸ್ಲಾಂ ಧರ್ಮಕ್ಕೆ ಸೇರಿದ್ದೆಂದು ಮಸೀದಿಯನ್ನು ಕೆಡಹುವ ಇತಿಹಾಸ ಚಿಡ್ಡಿಗಳು ಕೊಬ್ಬುವವರೆಗೆ ಭಾರತದಲ್ಲಿ ಎಲ್ಲಿತ್ತು?

- 'ಲಂಕೇಶ್ ಪತ್ರಿಕೆ' ಯಲ್ಲಿ ಟಿ.ಕೆ.ತ್ಯಾಗರಾಜ್



ವಿದೇಶಿ ಕೈಗಳು ಸ್ಪರ್ಶಿಸದ ಎನ್.ಡಿ.ಎ. ಪ್ರಣಾಳಿಕೆ! ಎಕಾನಮಿಕ್ ಟೈಮ್ಸ್ ನಲ್ಲಿ ಪೊನ್ನಪ್ಪರವರ ವ್ಯಂಗ್ಯ

ರಾಮಜನ್ಮಭೂಮಿ, 370 ನೇ ಕಲಮು, ಸಮಾನ ನಾಗರೀಕ ಸಂಹಿತೆಯಂತಹ ವಿವಾದಾತ್ಮಕ ವಿಷಯಗಳಿಗೆ ವಿರಾಮ ಮಾತ್ರ ಯಾಕೆ, ಪೂರ್ತಿಯಾಗಿ ಸಮಾಧಿ ಯಾಕೆ ಮಾಡಿಲ್ಲ ಎಂದು ಪತ್ರಕರ್ತರು ಪ್ರಣಾಳಿಕೆ ಬಿಡುಗಡೆ ಸಮಾರಂಭದಲ್ಲಿ ಕೇಳಿದಾಗ 'ನಾವು ಈಗ ಇಟ್ಟದ್ದು ಮೊದಲ ಹೆಜ್ಜೆ ಮಾತ್ರ. ಅದೂ ದಿಟ್ಟ ಹೆಜ್ಜೆ' ಎಂದರಂತೆ. ಇಲ್ಲ, 'ಸದ್ಯಕೆ ಕೈ ಬಿಟ್ಟಿದ್ದೇವಷ್ಟೇ'- ಮರುದಿನವೇ ಸುಷ್ಮಾ ಸ್ವರಾಜ್ ಉದ್ಗಾರ.

ಉತ್ತಮ ಕಾರ್ಯತಂತ್ರದ ಸಂಕೇತವಲ್ಲ

(ಪಾಕಿಸ್ತಾನ ನಾವಿಕ ಪಡೆಯ ವಿಮಾನ) ಅಟ್ಲಾಂಟಿಕವನ್ನು ಹೊಡೆದುರುಳಿಸುವ ನಿರ್ಣಯ ಕಾರ್ಗಿಲ್‌ನಂತರ ಅನುಸರಿಸಿದಬೇಕಾದ ಒಂದು ಉತ್ತಮ ಕಾರ್ಯತಂತ್ರದ ಸಂಕೇತವನ್ನಂತೂ ನೀಡುತ್ತಿಲ್ಲ ಅಥವಾ ರಾಜಕೀಯ ಮತ್ತು ರಕ್ಷಣಾ ಸಾಮರ್ಥ್ಯಗಳ ನಡುವೆ ನಿಕಟ ಸಹಯೋಗದ ಸಂಕೇತವನ್ನು ನೀಡುತ್ತಿಲ್ಲ

- ಆರ್.ರಾಘವನ್ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕ

ಇಣುಕು ನೋಟ

ಆಗಸ್ಟ್ 19:ಗೊಂದಲವೋ ಗೊಂದಲ

ರಾಜ್ಯದಲ್ಲಿ ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನ. ನಾವೇ ಮುಂದಿನ ಸರ್ಕಾರದ ಮುಖ್ಯಮಂತ್ರಿಗಳು ಎಂದು ಕನಸು ಕಾಣುತ್ತಿದ್ದ ಬಿಜೆಪಿ-ಲೋಕಶಕ್ತಿ-ಮೈತ್ರಿಯ ಗೊಂದಲ ಅಥವಾ ಗೊಂದಲದ ಮೈತ್ರಿ. ಜನತಾದಳ(ಯು) ನಲ್ಲಂತೂ ಅತಂತ್ರ ಸ್ಥಿತಿ. ಕಾಂಗ್ರೆಸ್(ಐ) ನಲ್ಲಿ ಕಚ್ಚಾಟ. ಬಾಗೇಪಲ್ಲಿಯಲ್ಲಿ ಅಧಿಕೃತ ಅಭ್ಯರ್ಥಿಗೆ ನಾಮಪತ್ರ ಸಲ್ಲಿಸಲೂ ಬಿಡದಷ್ಟು.

ಕಣ್ಣೀರು ಸುರಿಸಿದ ಆಳ್ವ!

ಆಗಸ್ಟ್ 18 ರಂದು ರಾಮಕೃಷ್ಣ ಹೆಗಡೆಯವರ ನಿವಾಸದಿಂದ ಹೊರಬರುತ್ತಿದ್ದಾಗ ಲೋಕಶಕ್ತಿಯ ರಾಜ್ಯ ಘಟಕದ ಅಧ್ಯಕ್ಷ ಡಾ. ಜೀವರಾಜ ಆಳ್ವರ ಕಣ್ಣುಗಳಲ್ಲಿ ನೀರೇ ಸುರಿಯುತ್ತಿತ್ತಂತೆ. ಹೊರಗೆ ಧರಣಿ, ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರೇ ತಮ್ಮ ಅಧ್ಯಕ್ಷರಿಗೆ ಸಮಾಧಾನ ಹೇಳಬೇಕಾಯಿತು.

'ಹೊರನಡೆ' ಎಂದು ಆಜ್ಞಾಪಿಸಿದ ಯಡಿಯೂರಪ್ಪ!

ಅದರ ಹಿಂದಿನ ದಿನ ದಿಲ್ಲಿಯ ಸುದ್ದಿಗೆ ಕಾದುಕೂತಿದ್ದ ಬಿಜೆಪಿ ಕಚೇರಿ ಮತ್ತೊಂದು ಗೊಂದಲದ ಆಲಯ. ಮೈಸೂರಿನಿಂದ ಬಂದ ಹಿರಿಯರೊಬ್ಬರು 40 ವರ್ಷಗಳಿಂದ ಪಕ್ಷದಲ್ಲಿ ದುಡಿದರೂ ಯಾರಾರಿಗೋ ಟಿಕೆಟ್ ಕೊಟ್ಟು ಅನ್ಯಾಯ ಮಾಡುತ್ತೀರಿ ಎಂದು ಗೋಗರೆಯುತ್ತಿದ್ದರು. ನೂರಾರು ಪತ್ರಕರ್ತರಿರುವಾಗ ಹೀಗೆ ಮಾತನಾಡಬಾರದು ಎಂದು 'ಭಾವಿ' ಮುಖ್ಯಮಂತ್ರಿ ಯಡಿಯೂರಪ್ಪ ಕಿಡಿಕಾರಿದರಂತೆ. ಕಾದು-ಕಾದು ಬೇಸತ್ತಿದ್ದ ಕಾರ್ಯಕರ್ತರೂ ಪ್ರತ್ಯುತ್ತರ ನೀಡಿದಾಗ ಯಡಿಯೂರಪ್ಪನವರ ಸಿಟ್ಟು ಇನ್ನಷ್ಟು ಏರಿತು. ಸೀಟು ಯಾರಿಗೆ ಕೊಡಬೇಕು ಎಂದು ವಾಜಪೇಯಿ ಹೇಳಬೇಕು, ನೀನಲ್ಲ, ನಾನೂ ಅಲ್ಲ ಎಂದು ಶಿಸ್ತಿನ ಬಗ್ಗೆ ಬೋಧಿಸಿ ತಕ್ಷಣ ಹೊರನಡೆ ಎಂದು ಆಜ್ಞಾಪಿಸಿದರಂತೆ. ಅನಂತ್ ಕುಮಾರ್ ತನ್ನ ಆದೇಶವನ್ನೂ ಸೇರಿಸಿದರಂತೆ. ಮೆಲ್ಲಗೆ ಹೊರನಡೆಯುತ್ತಿದ್ದ ಹಿರಿಯರನ್ನು ಹೊರಹಾಕಲು ಅಧ್ಯಕ್ಷರೇ ಮುಂದಾದಾಗ ಕಾರ್ಯಕರ್ತರೇ ಅವರನ್ನು ಸಮಾಧಾನ ಪಡಿಸಿದರಂತೆ!

ಗೊಂದಲಪುರ

ಅಂದು ಬಿಜೆಪಿಯ ಕಚೇರಿಯಲ್ಲಿ ಪವರ್ ಕಟ್‌ನ ಸನ್ನಿವೇಶ ಎಂದು ಇನ್ನೊಬ್ಬ ಪತ್ರಕರ್ತ ವರ್ಣಿಸುತ್ತಾರೆ.

ಬೆಳಿಗ್ಗೆ ಗೊಂದಲ ಪರಿಹಾರವಾಯಿತು ಎಂದು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೆಂಕಯ್ಯನಾಯ್ಡು ಪ್ರಕಟಿಸಿದಾಗ ಸಂತೋಷದ ಅಲೆ; ರಾಮಕೃಷ್ಣ ಹೆಗಡೆ ನಾಯ್ಡುರವರನ್ನು ಭೇಟಿಯಾಗುವುದಿಲ್ಲ ಎಂಬ ಸುದ್ದಿ ಬಂದಾಗ ಮುದಿಡಿದ ಮುಖಗಳು ; ಕೊನೆಗೂ ಹೆಗ್ಡೆ-ನಾಯ್ಡು ಭೇಟಿ ನಡೆಯುತ್ತಿದೆ ಎಂದಾಗ ಮತ್ತೆ ಮುಖದಲ್ಲಿ ಗೆಲವು; ಹೆಗ್ಡೆ ಹಠ ಹಿಡಿದ್ದಾರೆ ಎಂದು ಕೇಳಿದಾಗ ಮತ್ತೆ ನಿರಾಸೆ; ಹೆಗ್ಡೆ-ನಾಯ್ಡು ಭೇಟಿಯಾಗಲೇ ಇಲ್ಲ ಎಂದು ಸುದ್ದಿ ಬಂದಾಗ ಹತಾಶೆ; ಸಂಜೆಯಾಗುತ್ತಿದ್ದಂತೆ ಎಲ್ಲರ ಮುಖವೂ ಗಂಟಿಕ್ಕಿತು. ಕಚೇರಿ ಬಿಟ್ಟು ಹೋದ ನಾಯ್ಡು ಇನ್ನೂ ವಾಪಸು ಬರದಾಗ ಯಡಿಯೂರಪ್ಪ, ಅನಂತ್ ಕುಮಾರ್‌ಗೂ ಅಧೀರತೆ. ಯಾರನ್ನೂ ಭೇಟಿ ಮಾಡಲು ನಿರಾಕರಣೆ. ಹಿಂದಿನ ದಿನದವರೆಗೆ ಬಿಜೆಪಿಯ ದಿಲ್ಲಿ ಬಾಗಿಲಲ್ಲಿ ಪಟೇಲ್ ಕಾದಿದ್ದರೆ, ಈಗ ನಾಯ್ಡು ಹೆಗ್ಡೆ ಮನೆ ಬಾಗಿಲಲ್ಲಿ ಕಾಯುವ ಪ್ರಸಂಗ ಬಂತಲ್ಲಾ ಎಂದು ಕಸಿವಿಸಿ. ಅಧಿಕಾರ ಕಬಳಿಸಲು ಇದೆಲ್ಲಾ ಅನುಭವಿಸಬೇಕು ಎಂದು ಎಣಿಸಿರಲಿಲ್ಲವೇನೋ!

ರಾಹುಕಾಲ ಕಳೆದರೂ ......

ಬಳ್ಳಾರಿಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಮೊದಲು ನಾಮಪತ್ರ ಸಲ್ಲಿಸಿದವರು ಮೊನ್ನೆ-ಮೊನ್ನೆಯವರೆಗೆ ಕಾಂಗ್ರೆಸ್ಸಿಗನಾಗಿದ್ದ ರಾಜಶೇಖರಮೂರ್ತಿ. ರಾಹುಕಾಲಕಳೆದ ಮೇಲೆಯೇ ನಾಮಪತ್ರ ಸಲ್ಲಿಸಿದರಂತೆ. ಇದರಲ್ಲೇನು ವಿಶೇಷ ಎನ್ನಬಹುದು. ಹೌದು, ವಿಶೇಷವಿಷ್ಟೆ - ರಾಹುಕಾಲದಲ್ಲಿ ತನಗೆ ನಂಬಿಕೆಯಿಲ್ಲ, ... ಜ್ಯೋತಿಷ್ಯ ನೋಡಿ ವಿವಾಹದ ಮುಹೂರ್ತ ನಿರ್ಧರಿಸಿದ್ದರೂ ಸೀತೆಗೆ ವನವಾಸ, ರಾಮನಿಂದ ಅಗ್ನಿ ಪರೀಕ್ಷೆ ತಪ್ಪಲಿಲ್ಲವಲ್ಲ ಎಂದು ಅವರು ಆ ಮೊದಲು ಕಥೆ ಹೇಳಿದ್ದರಂತೆ. ಕಥೆ ಹೇಳುವುದರಲ್ಲಿ ನಿಷ್ಣಾತರಾದ ಸುಷ್ಮಾಸ್ವರಾಜ್ ಮಾತ್ರ ಈ ವಿಷಯದಲ್ಲಿ ಏನೂ ಕತೆ ಹೇಳದೆ ರಾಹುಕಾಲ ಕಳೆದ ಮೇಲೆಯೇ ನಾಮಪತ್ರ ಸಲ್ಲಿಸಿದರಂತೆ. ಆದರೆ 12ನೇ ಲೋಕಸಭೆ ಮುಕ್ತಾಯಗೊಂಡಾಗಲೇ 13ನೇ ಲೋಕಸಭೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದೆ ಎಂದು ಕೆಲವೇ ದಿನಗಳ ಹಿಂದೆ ಹೇಳಿದ ಈಕೆ ಈಗ ಸ್ಪರ್ಧಿಸುತ್ತಿರುವುದಕ್ಕೆ ಕಥೆ ಹೇಳದಿರಲಂತೂ ಸಾಧ್ಯವಿರಲಿಲ್ಲ.

ಅನಂತನಾಗ್ ಆಕ್ರೋಶ

ಬೆಂಗಳೂರಿನಲ್ಲಿ ಮಲ್ಲೇಶ್ವರಂ ಬದಲು ಈ ಬಾರಿ ಬಸವನಗುಡಿಯಿಂದ ಜನತಾದಳ(ಯು) ಪರವಾಗಿ 'ನಿಷ್ಠ' ಸಚಿವ ಅನಂತ್‌ನಾಗ್ ಸಲ್ಲಿಸಿದ ನಾಮಪತ್ರ ತಿರಸತವಾಯಿತು. ಅವರಿಗೆ ಕೊಟ್ಟಿದ್ದ 'ಬಿ' ಫಾರಂ ಅಸಿಂಧುವಾಗಿತ್ತಂತೆ. ಜನತಾದಳ (ಯು) ನಿಂದಲೇ ಲೋಕಶಕ್ತಿಯ ಇನ್ನೊಬ್ಬ ಅಭ್ಯರ್ಥಿಗೆ 'ಬಿ' ಫಾರಂ ಕೊಡಲಾಗಿದೆ ಎಂದು ತಿಳಿದಾಗ ಅನಂತ್‌ನಾಗ್ ಆಕ್ರೋಶದಿಂದ ಹೆಗ್ಡೆ, ಜೀವರಾಜ್ ಆಳ್ವರನ್ನು ಶಪಿಸಿದರಂತೆ. ಇದೇ ರೀತಿ ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಇಬ್ಬರಿಗೆ ಜನತಾದಳ(ಯು) ನ 'ಬಿ' ಫಾರಂ ಇದ್ದು ಮೊದಲು ಸಲ್ಲಿಸಿದ ಬಾಲಾಜಿ ಚನ್ನಯ್ಯರ ನಾಮಪತ್ರ ಅಂಗೀಕಾರವಾಯಿತು.ನಂತರ ಸಲ್ಲಿಸಿದ ಮದನಮಲ್ಲುರವರ ನಾಮಪತ್ರ ತಿರಸತವಾಯಿತು.

ಆಂಧ್ರಪ್ರದೇಶದಲ್ಲೂ

ಎನ್.ಡಿ.ಎ.ಕೂಟದಲ್ಲಿ ಇಂತಹುದೇ ಗೊಂದಲ ಎದ್ದಿರುವಂತೆ ಕಾಣುತ್ತದೆ. ನಿಜಾಮಾಬಾದ್ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡುವ ಬಗ್ಗೆ ನೂರಾರು ಮುಸ್ಲಿಂ ಮಹಿಳೆಯರು ತೆಲುಗುದೇಶಂನ ಮುಖ್ಯ ಕಚೇರಿಯೆದುರು ಧರಣಿ ನಡೆಸಿದರು. ಅಲ್ಲಿಯ ಹಾಲಿ ಶಾಸಕ ರೈಲು ತಡೆದು ಪ್ರತಿಭಟನೆ ವ್ಯಕ್ತಪಡಿಸಿದರು. ಬಾಗೇಪಲ್ಲಿಯಲ್ಲಿ ಕಾಂಗ್ರೆಸ್ಸಿಗರು ಕಿತ್ತಾಟದಂತೆ ಅಲ್ಲಿ ಕೋಡಂಗಲ್ ಕ್ಷೇತ್ರದಲ್ಲಿ ಟಿ.ಡಿ.ಪಿ. ಟಿಕೆಟ್ ಪಡೆದ ಅಭ್ಯರ್ಥಿ ನಾಮಪತ್ರ ಸಲ್ಲಿಸದಂತೆ ಹಾಲಿ ಟಿ.ಡಿ.ಪಿ. ಶಾಸಕರ ಕಡೆಯವರು ಅಡ್ಡಿಪಡಿಸಿದರಂತೆ:

ಹೆಗ್ಡೆ ನಿರಾಕರಿಸಿದ್ದರಿಂದ.....?

ಸೋನಿಯಾ ಗಾಂಧಿ ಬಳ್ಳಾರಿಯಿಂದ ಸ್ಪರ್ಧಿಸುತ್ತಾರೆ ಎಂದು ತಿಳಿದಾಗ ಬಿಜೆಪಿ ಕೇಂದ್ರ ಮುಖಂಡರು ರಾಮಕೃಷ್ಣ ಹೆಗ್ಡೆಯವರನ್ನು ಬಳ್ಳಾರಿಯಿಂದ ಸ್ಪರ್ಧಿಸಲು ಕೇಳಿದರಂತೆ. ಹೇಗೂ ಸೀಟು ಜನತಾದಳ(ಯು)ಗೆ ಬಿಟ್ಟ ಸೀಟು. ಹೆಗ್ಡೆಯವರ ಜನಪ್ರಿಯತೆಯ ಪರೀಕ್ಷೆಯೂ ಆಗಲಿ ಎಂದಿರಬೇಕು. ಪರಕೀಯರು-ದೇಶೀಯರು ಎಂಬ ದಾರಿ ತಪ್ಪಿಸುವ ಚರ್ಚೆಗೆ ಇದು ಇನ್ನಷ್ಟು ಅನುಕೂಲವಾಗಿಯೂ ಇರುತ್ತಿತ್ತು. ಆದರೆ ಹೆಗಡೆ ನಿರಾಕರಿಸಿದರಂತೆ. ಅಷ್ಟೇ ಅಲ್ಲ, ಈ ಸೀಟನ್ನು ಬೇಕಾದರೆ ನೀವೇ ತೆಗೆದುಕೊಳ್ಳಿ ಎಂದರಂತೆ. ಈ ಹಿನ್ನೆಲೆಯಲ್ಲೇ ಕಾಂಗ್ರೆಸ್ ಕೋಟೆ ಎಂದು ಹೇಳಲಾಗುವ ಈ ಕ್ಷೇತ್ರದಲ್ಲಿ ಇತ್ತೀಚಿನವರೆಗೆ ಕಾಂಗ್ರೆಸ್ಸಿಗರಾಗಿದ್ದ ರಾಜಶೇಖರ ಮೂರ್ತಿಯವರನ್ನು ಕಣಕ್ಕಿಳಿಸಲು ಬಿಜೆಪಿ ಮುಖಂಡರು ನಿರ್ಧರಿಸಿದ್ದರು. ನಂತರ ಮತ್ತೊಂದು ಐಡಿಯಾ ಹೊಳೆದು ಸುಷ್ಮಾ ಸ್ವರಾಜ್‌ರನ್ನು ಕಳಿಸಲಾಯಿತಂತೆ.

ಮೊಣಕಾಲೂರಿ ಅಂದರೆ........... ಉರುಳು ಸೇವೆ ಮಾಡಿದ ಚೆಡ್ಡಿ ಪತ್ರಕರ್ತರು

ನಂ.7, ಸಫ್ದರ್‌ಜಂಗ್, ನವದೆಹಲಿ. ಊಟದ ಸಮಯ. ಇಲ್ಲಿ ಬೇರೆ ರೀತಿಯ ಅಡುಗೆ ಬೇಯುತಿದೆ. ಇಲ್ಲಿ ವಿವಿಧ ಕ್ಷೇತ್ರದ ಪರಿಣತರು ಸೇರಿ ದಿನದ ವಿವಿಧ ಪತ್ರಿಕೆಗಳ, ಟಿವಿ ಚಾನಲ್‌ಗಳ, ಚುನಾವಣಾ ಸಮೀಕ್ಷೆಗಳ ಪರಿಶೀಲನೆಯಲ್ಲಿ ತೊಡಗಿದ್ದಾರೆ. ಇದಕ್ಕೆಲ್ಲಾ ಸಾರಥ್ಯ ರಾಮಮೋಹನ ರಾವ್------- ಈತ 1985-1992 ರ ಅವಧಿಯಲ್ಲಿ ಸರ್ಕಾರದಲ್ಲಿ ಮುಖ್ಯ ಮಾಹಿತಿ ಅಧಿಕಾರಿ ಆಗಿದ್ದವರು.. ಪತ್ರಿಕೆಗಳ ವರದಿಗಳು, ಸಂಪಾದಕೀಯ ಧೋರಣೆ, ಆಳುವ ಪಕ್ಷದ ವಿರೋಧ ಪಕ್ಷಗಳ ಕವರೇಜ್, ಟಿವಿ ಚಾನೆಲ್ ವರದಿಗಳಲ್ಲಿ ಇದೇ ರೀತಿಯ ವಿಶ್ಲೇಷಣೆ ನಡೆಯುತ್ತಿದೆ. ಆಳುವ ಪಕ್ಷಕ್ಕೆ ಆದ ಲಾಭ ಹಾನಿಗಳ ಲೆಕ್ಕಾಚಾರ ಆಗುತ್ತದೆ. ಪ್ರಧಾನ ಮಂತ್ರಿಗಳ ಕವರೇಜ್, ಸರ್ಕಾರದ ಬಗ್ಗೆ ಟೀಕೆ ಇತ್ಯಾದಿಗಳನ್ನೆಲ್ಲಾ ಗಮನಿಸ ಲಾಗುತ್ತದೆ. ಆಮೇಲೆ ಈ ಬಗ್ಗೆ ಸರ್ಕಾರಕ್ಕೆ ವರದಿ ತಯಾರಿಸಲಾಗುತ್ತದೆ.

ವರದಿಯನ್ನು ಮಂತ್ರಿ ಮಹೋದಯರ ಪ್ರಮುಖ ಸಹಾಯಕರಿಗೆ ಕೊಡಲಾಗುತ್ತದೆ. ಆಮೇಲೆ ಕಾರ್ಯಾಚರಣೆ ಶುರು. ಪತ್ರಿಕೆಗಳ ವರದಿಗಳ ಸಂಪಾದಕರು, ಟಿ.ವಿ ಚಾನಲ್ ಗಳ ಸುದ್ದಿ ಸಂಪಾದಕರು, ಮಾಲಕರು ಇವರಿಗೆಲ್ಲಾ ಫೋನ್ ಕರೆಗಳ ಸರಮಾಲೆ ಆರಂಭವಾಗುತ್ತದೆ. ಆಳುವ ಪಕ್ಷಕ್ಕೆ ಲಾಭ ಆಗಿದ್ದರೆ ಫೋನ್ ಮೂಲಕ ಶಬಾಶ್‌ಗಿರಿ ಸಿಗುತ್ತದೆ. ಇಲ್ಲವಾದರೆ ಫೋನ್‌ನಲ್ಲೇ ಬೆಂಡೆತ್ತಲಾಗುತ್ತದೆ. ಆಳುವ ಪಕ್ಷಕ್ಕೆ ಲಾಭ ಮಾಡಿದರೆ ಸರಿ ಇಲ್ಲದಿದ್ದರೆ.... ಇದು ತುರ್ತು ಪರಿಸ್ಥಿತಿಯ ಚಿತ್ರಣ ಅಲ್ಲ. ಈಗ ರಾಜಧಾನಿಯಲ್ಲಿ ಮಾನ್ಯ ವಾರ್ತಾ ಮಂತ್ರಿ ಪ್ರಮೋದ್ ಮಹಾಜನ್‌ರ ಮನೆಯಲ್ಲಿ ದಿನಂಪ್ರತಿ ನಡೆಯುತ್ತಿರುವ ನಾಟಕ. ಹಲವು ಪ್ರಮುಖ ಪತ್ರಿಕೆಗಳ ಸಂಪಾದಕರು, ಮಾಲಕರಿಗೆ ಈಗಾಗಲೇ ಎಚ್ಚರಿಕೆ ಫೋನ್ ಕರೆಗಳು ಬಂದಿವೆಯಂತೆ. ಖ್ಯಾತ ಸುದ್ದಿ ಸಂಪಾದಕ ಸ್ಟಾರ್ ನ್ಯೂಸ್ ಖ್ಯಾತಿಯ ಪ್ರಣಯ್ ರಾಯ್‌ಗೂ ಇಂತಹದೇ ಕರೆ ಹೋಗಿತ್ತಂತೆ. ಅದು ಪರಿಣಾಮವನ್ನೂ ಬೀರಿದೆಯಂತೆ. ಟೆಲಿಕಾಂ ಹಗರಣದ ಬಗ್ಗೆ ಈ ಚಾನೆಲ್‌ನ ಮೌನವನ್ನು ಹಲವರು ಗಮನಿಸಿರಬಹುದು. ಇದು ಏನಕೇನ ಪ್ರಕಾರೇಣ ಈ ಬಾರಿಯ ಚುನಾವಣೆಯನ್ನು ಗೆಲ್ಲಲು ಬಿಜೆಪಿ ಪರ ಮಾಧ್ಯಮಗಳಲ್ಲಿ ಪ್ರಚಾರ ನಡೆಸಲು ಬಿಜೆಪಿ ಕಾರ್ಯಯೋಜನೆ.ಈಗಾಗಲೇ ಇದು ಫಲ ಕಂಡಿದೆ.

ಚುನಾವಣಾ ಸಮೀಕ್ಷೆಯ ಉರುಳುಸೇವೆ

ಇಂಡಿಯನ್ ಎಕ್ಸ್‌ಪ್ರೆಸ್ ಗುಂಪು (ಕನ್ನಡ ಪ್ರಭ ಸೇರಿಂದಂತೆ) ಚೆಡ್ಡಿಗಳ ಮುಖವಾಣಿಯೇ ಆಗುತ್ತಿದೆ. ಅರುಣ್ ಶೌರಿಯವರ ಸಂಪಾದಕತ್ವದಲ್ಲಿ ಅದು ಪೂರ್ಣ ಕಾವಿಮಯವಾಗಿದೆ. ಬೊಫೋರ್ಸ್, ಮೇವು ಹಗರಣಗಳ ವಿಷಯದಲ್ಲಿ ಗುಡುಗಿದ ಎಕ್ಸ್‌ಪ್ರೆಸ್‌ಗೆ ಪ್ರಧಾನಿ ಆಫೀಸಿನ ಟೆಲಿಕಾಂ ಹಗರಣ ಅಚ್ಚುಹಾಕಲು ಜಾಗವೇ ಸಿಕ್ಕುತ್ತಿಲ್ಲ.

ಪರ್ತಕರ್ತರು, ಸಂಪಾದಕರು ಉರುಳು ಸೇವೆ ಆರಂಭಿಸಿದ್ದಾರೆ. ಇಂಗ್ಲೀಷ್ ಪತ್ರಿಕೆಗಳಾದ ಔಟ್‌ಲುಕ್ ಇಂಡಿಯ ಟುಡೇಗಳ ಮೊದಲ ಚುನಾವಣಾ ಸಮೀಕ್ಷೆಗಳ ಪ್ರಕಾರ ಬಿಜೆಪಿ ರಂಗಕ್ಕೆ ಬಹುಮತ. ಈ ಬಹುಮತ ಪತ್ರಿಕೆಗಳ ಡೆಸ್ಕ್‌ನಲ್ಲೇ ತಯಾರಾದ್ದು ಅಂತ ಕಾಣುತ್ತದೆ. ಇಂಡಿಯ ಟುಡೇ ಸಮೀಕ್ಷೆ ಪ್ರಕಾರ ಎಲ್ಲದರಲ್ಲೂ ಬಿಜೆಪಿಗೆ ಜಯಭೇರಿ. ಪ್ರಧಾನಿ ಜನಪ್ರಿಯತೆ, ಕಾರ್ಗಿಲ್ ಘರ್ಷಣೆ ನಿರ್ವಹಣೆ, ಉತ್ತಮ ಸರ್ಕಾರ-ಎಲ್ಲದರಲ್ಲೂ.

ಇತ್ತೀಚೆಗೆ ಚೆಡ್ಡಿ ಹಾಕಿಕೊಂಡ "ಉದಯ ಟೀವಿ" ಇನ್ನೂ ಪ್ಯಾಂಟಿನೊಳಗೆ ಅದನ್ನು ಮುಚ್ಚಿಕೊಳ್ಳಲು ಸಫಲವಾಗಿದೆ. ಅದರೆ ಆಗೊಮ್ಮೆ ಈಗೊಮ್ಮೆ ಚೆಡ್ಡಿ ಕಾಣಲಾರಂಭಿಸಿದೆ. ಇತ್ತೀಚೆಗೆ ಚುನಾವಣೆಗಳ ಬಗ್ಗೆ ಹಲವು ಸಾಹಿತಿಗಳ ಪ್ರಮುಖರ ಸಂದರ್ಶನ ನಡೆಸಿದ್ದಾಗ ಅವರೆಲ್ಲಾ ಕೋಮುವಾದದ ವಿರುದ್ಧ ಸ್ಪಷ್ಟವಾಗಿ ಮಾತನಾಡಿದರು. ಆದರೆ ಅದನ್ನು ಪ್ರಸ್ತುತ ಪಡಿಸಿದಾಕೆ ಸಮರ್ಥ ಪ್ರಧಾನಿ, ಸುಭದ್ರ ಸರ್ಕಾರದ ಅವಶ್ಯಕತೆಯ ಬಗ್ಗೆ ವಗ್ಗರಣೆ ಹಾಕುವುದನ್ನು ಮರೆಯಲಿಲ್ಲ.

"ಜನರಲ್ ವಾಜಪೇಯಿಯ ಕಾರ್ಗಿಲ್ ವಿಜಯ"

ಈ ಪತ್ರಕರ್ತರಿಗೆ, ಸಂಪಾದಕರಿಗೆ, ಮಾಲಕರಿಗೆ ಬಿಜೆಪಿಯನ್ನು ಅಟ್ಟಕೇರಿಸುವುದು (ಅದೂ ತಮ್ಮ ವಿಶ್ವಾಸಾರ್ಹತೆ ಕಳೆದುಕೊಳ್ಳದೆ) ಅಷ್ಟು ಸುಲಭದ ಕೆಲಸವಲ್ಲ. ಆರ್ಥಿಕ ದುಸ್ಥಿತಿ, ಸರ್ಕಾರದ ನಿರ್ಲಕ್ಷ್ಯ, ಸರ್ಕಾರದ ಎಲ್ಲಾ ನಿರ್ಧಾರಗಳಿಗೆ ರಾಷ್ಟ್ರಪತಿ ಅಡ್ಡಗಾಲು ಹಾಕುವುದು ಸರಿಯೆ? ಇತ್ಯಾದಿ. ಇಂಟರ್‌ನೆಟ್ ಮೇಲೆ ಸಮೀಕ್ಷೆಗೆ ಉತ್ತರ ಕೊಡುವುದು ಉಚ್ಚ ಮಧ್ಯಮವರ್ಗದ ಈ ಸವಲತ್ತು ಇರುವ ಜನ. ಶೇ. 1 ಜನರ ಅಭಿಪ್ರಾಯ 'ರಾಷ್ಟ್ರೀಯ ಅಭಿಪ್ರಾಯ' ಹೇಗಾಯಿತು ಎಂದು ಕೇಳಬಾರದಂತೆ. ಪ್ರತಿದಿನ ಇಂತಹ ಸಮೀಕ್ಷೆಯ ವಿವರಗಳನ್ನು ದಿನಪತ್ರಿಕೆಗಳು ಪ್ರಕಟಿಸುತ್ತಿವೆ.

ಇದೂ ಸಾಲದೆಂಬತೆ ದೂರದರ್ಶನ 24 ಗಂಟೆ ನ್ಯೂಸ್ ಚಾನೆಲ್‌ನ್ನು ಪ್ರಮೋದ್ ಮಹಾಜನ್ ತರಾತುರಿಯಲ್ಲಿ ಆರಂಭಿಸಿದ್ದಾರೆ. ಚುನಾವಣಾ ಕಮೀಷನ್‌ಗೆ ವಿರೋಧ ಪಕ್ಷಗಳು ದೂರು ಸಲ್ಲಿಸಿದ್ದರೂ ಅದರ ದುರ್ಬಳಕೆ ರಾಜಾರೋಷವಾಗಿ ಮುಂದುವರೆದಿದೆ. ಪ್ರಮೋದ್ ಮಹಾಜನ್ ಬಂಟನಾದ ಸಂಜಯ್ ನಿಗಮ್ ಈ ಚಾನಲ್‌ಗೆ ಸಲಹೆಗಾರ.

ಕಳೆದ ಚುನಾವಣೆಯಲ್ಲಿ ಬಿಜೆಪಿಗಿಂತ ಹೆಚ್ಚು ಮತಗಳಿಸಿದ ಕಾಂಗ್ರೆಸ್ ಲೆಕ್ಕಕ್ಕೇ ಇಲ್ಲವೇನೋ ಎಂಬಂತೆ ಈ ಮಾಧ್ಯಮಗಳ ವರ್ತನೆ. ಇನ್ನು ಚುನಾವಣಾ ಸಮೀಕ್ಷೆಗಳ ಇತ್ತೀಚಿನ ಚರಿತ್ರೆಯೂ ರೋಚಕವಾದ್ದು. ಎಲ್ಲಾ ಸಮೀಕ್ಷೆಗಳ ಪ್ರಕಾರ ಬಿಜೆಪಿ ರಾಜಸ್ತಾನ, ಮಧ್ಯಪ್ರದೇಶಗಳಲ್ಲಿ ಇತ್ತೀಚೆಗೆ ಗೋವದಲ್ಲಿ ಜಯಭೇರಿ ಬಾರಿಸಬೇಕಿತ್ತು. ಜನ ಈ ಸಮೀಕ್ಷೆಗಳನ್ನು ತಿಪ್ಪೆಗೆಸೆದಿದ್ದರು.(ಆ ಮೇಲೆಯೇ ಸೋನಿಯಾ ವಿದೇಶಿ ಮೂಲದವರು ಎಂದು ಹಲವರಿಗೆ ನೆನಪಾಯಿತು.) ಕಳೆದ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆ ಜಯಭೇರಿ ಬಾರಿಸಬೇಕಾಗಿತ್ತು. ಎಲ್ಲಾ ಸಮೀಕ್ಷೆಗಳ ಪ್ರಕಾರ ಏನಾಯ್ತು ಅಂತ ಗೊತ್ತು ತಾನೆ?.

ಎಮರ್ಜೆನ್ಸಿ ಮುಗಿದ ನಂತರ, ಆ ಕಾಲದಲ್ಲಿ ಪತ್ರಿಕೆಗಳ ವರ್ತನೆ ಬಗ್ಗೆ ಅಂದಿನ ವಾರ್ತಾಮಂತ್ರಿ ಅಡ್ವಾಣಿ ಟೀಕಿಸಿದ್ದರು-ಪತ್ರಿಕೆಗಳಿಗೆ ಸರ್ಕಾರ ಮೊಣಕಾಲೂರಿ ಎಂದರೆ, ಅವು ಒಂದು ಹೆಜ್ಜೆ ಮುಂದೆ ಹೋಗಿ ಉರುಳು ಸೇವೆ ಮಾಡಿದವು ಅಂತ. ಈಗಿನ ವಾರ್ತಾಮಂತ್ರಿ ಪ್ರಮೋದ್ ಮಹಾಜನ್ ಪತ್ರಿಕೆಗಳಿಗೆ, ಟಿವಿ ಚಾನಲ್ ಗಳಿಗೆ, ಎಲ್ಲಾ ಮಾಧ್ಯಮಗಳ ಪತ್ರಕರ್ತರಿಗೆ, ಸಂಪಾದಕರಿಗೆ ಮೊಣಕಾಲೂರಿ ಎನ್ನುತಿದ್ದಾರೆ. ಅದಕ್ಕಿಂತ ಮೊದಲೇ ಅವರು ಉರುಳು ಸೇವೆ ಮಾಡುತ್ತಿದ್ದಾರೆ. ಚುನಾವಣಾ ಕಾಲದಲ್ಲಿ ಮೊದಲ ಬಾರಿಗೆ ಕೇಂದ್ರದಲ್ಲಿರುವ ಬಿಜೆಪಿ ಕಾಂಗ್ರೆಸ್ ಕೂಡ ನಾಚುವಂತೆ ಮಾಧ್ಯಮಗಳಲ್ಲಿ ಕೈತಿರುಚುತಿದ್ದಾರೆ. ಈ ಬಗ್ಗೆ ಓದಿ

ಸಮೀಕ್ಷೆಯ ಅಂಕೆ ಸಂಖ್ಯೆ ನೋಡಿದರೆ ಗೊತ್ತಾಗುತ್ತದೆ ಇದು ಎಷ್ಟು ಬೊಗಳೆ ಎಂದು. ಇನ್ನೂ ವಿವಿಧ ಪಕ್ಷಗಳ ನಡುವೆ ಮೈತ್ರಿ ಕೂಟಗಳೇ ಆಗದಿರುವ, ಅಭ್ಯರ್ಥಿಗಳ ಆಯ್ಕೆಯೇ ಆಗದಿರುವ ಸನ್ನಿವೇಶದಲ್ಲಿ ಚುನಾವಣಾ ಸಮೀಕ್ಷೆ ಎಂಬುದು ಅರ್ಥಹೀನ. ಅದರಲ್ಲೂ ಇಂಡಿಯಟುಡೇ ಸಮೀಕ್ಷೆಗೆ ಆಧಾರ 86 ಸಂಸದಿಯ ಕ್ಷೇತ್ರಗಳಲ್ಲಿ ಕೇವಲ 20 ಸಾವಿರ ಜನರ ನಡುವೆ ಸಮೀಕ್ಷೆ. 90 ಕೋಟಿ ಜನಸಂಖ್ಯೆಯಲ್ಲಿ ಈ ಸ್ಯಾಂಪಲ್ ಎಷ್ಟು ವೈಜ್ಞಾನಿಕ? ಈ ಸಮೀಕ್ಷೆಯ ವಿವರಣೆ ಬರೆದವರು ಕುಖ್ಯಾತ ಕಾವಿಪರ ಲೇಖಕ ಸ್ವಪನ್ ದಾಸ್‌ಗುಪ್ತ ಎಂಬುದನ್ನು ಗಮನಿಸಬೇಕು. 'ಔಟ್‌ಲುಕ್' ಚಂದ್ರಬಾಬು ನಾಯ್ಡು ಪುನರಾಯ್ಕೆಯ ಭವಿಷ್ಯವಾಣಿಯನ್ನು ಸಹ ಆಗಲೇ ನುಡಿದಿದೆ.

'ತರಂಗ'ದಲ್ಲಿ ಎಂ.ವಿ.ಕಾಮತ್‌ರ ಚುನಾವಣಾ ಬಗ್ಗೆ ಬರಹಗಳು ಒಬ್ಬ ವಸ್ತುನಿಷ್ಟ ಪತ್ರಕರ್ತನ ಬರಹಗಳು ಎಂದು ಹೇಳಲು ಯಾರಿಗಾದರೂ ಸಾಧ್ಯವೇ? ಧೈರ್ಯವೇ? ಅವರಿಗೀಗ ತಮ್ಮ ವಿಶ್ವಾಸಾರ್ಹತೆಯ ಪರಿವೆಯೂ ಉಳಿದಂತಿಲ್ಲ. ದುರಾಡಳಿತ ಇವೆಲ್ಲದರ ಮುಂದೆ ಜನರನ್ನು ಮರುಳುಮಾಡುವುದೆಂದರೆ ಅತ್ಯಂತ ಚಾಣಾಕ್ಷತನದ ಕೆಲಸ. ಅದಕ್ಕೆ ಇವರೆಲ್ಲಾ ಹಿಡಿದ ದಾರಿಯೆಂದರೆ ಬಿಜೆಪಿ ಪಕ್ಷ, ಸರ್ಕಾರ ವನ್ನೆಲ್ಲಾ ಮರೆತು ಬರೀ ಪ್ರಧಾನ ಮಂತ್ರಿ ವಾಜಪೇಯಿ ಗುಣಗಾನ ಮಾಡುವುದು. ಇತ್ತೀಚೆಗೆ ದೇಶಾಭಿಮಾನ, ಕೆರಳಿಸಿದ ಕಾರ್ಗಿಲ್ ವಿಜಯ, ಪ್ರೋಖ್ರಾನ್-II ನ್ನು ಎತ್ತಿಹಿಡಿಯುವುದು ಇತ್ಯಾದಿ. 'ಔಟ್‌ಲುಕ್' ಚುನಾವಣಾ ಸಮೀಕ್ಷೆಯ ಜೊತೆಗೆ 'ಜನರಲ್ ವಾಜಪೇಯಿ' ಯ ಕಾರ್ಗಿಲ್ ವಿಜಯ ಎಂದು ಅವರನ್ನು ವಾಚಾಮಗೋಚರವಾಗಿ ಹೊಗಳಲಾಯಿತು. ಇದೂ ಸಾಲದೆಂಬತೆ ಈ ಎಲ್ಲಾ ಪತ್ರಿಕೆಗಳು (ಅದರಲ್ಲೂ ದಿನ ಪತ್ರಿಕೆಗಳು) ದಿನಾ ಇಂಟರ್‌ನೆಟ್ ಮೇಲೆ ನಡೆಸುವ ಸಮೀಕ್ಷೆಗೆ ಆರಿಸುವ ವಿಷಯಗಳ ಸ್ಯಾಂಪಲ್ ನೋಡಿ- ಕಾರ್ಗಿಲ್‌ನಲ್ಲಿ ಭಾರತೀಯ ಪಡೆಗಳು ಗಡಿದಾಟಬೇಕೆ? ಪಾರ್ಲಿಮೆಂಟಿಗೆ ಐದು ವರ್ಷಗಳ ಆಯಸ್ಸು ಗ್ಯಾರಂಟಿ ಮಾಡಬೇಕೆ? ವಿದೇಶದಲ್ಲಿ ಹುಟ್ಟಿದವರಿಗೆ ಉಚ್ಚ ಸ್ಥಾನಗಳನ್ನು ಕೊಡಬೇಕೆ?

ಆದರೆ ಆಳುವ ಪಕ್ಷದ, ಆಳುವ ವರ್ಗಗಳ ಈ ಮಾಧ್ಯಮಗಳ ಮೇಲೆ ಪ್ರಹಾರ, ಪ್ರಜಾಪ್ರಭುತ್ವ ಚುನಾವಣೆಯನ್ನು ಬುಡಮೇಲು ಮಾಡುವಂತದ್ದು. ಈ ಬಗ್ಗೆ ವಸ್ತುನಿಷ್ಠ ಪತ್ರಕರ್ತರಲ್ಲೂ ಆತಂಕ ಹುಟ್ಟುತ್ತಿದೆ. ಏಕೆಂದರೆ ಇದು ಅವರಿಗೆ ತಮ್ಮ ವೃತ್ತಿಯ ವಿಶ್ವಾಸಾರ್ಹತೆ ಯನ್ನು, ಗೌರವವನ್ನು ಉಳಿಸಿಕೊಳ್ಳುವ ಪ್ರಶ್ನೆ ಕೂಡ. ಚುನಾವಣಾ ಕಮಿಶನರ್ ಮಧ್ಯಪ್ರವೇಶಿಸಿ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಅಭಿಪ್ರಾಯ ಸಂಗ್ರಹಣ ಏಜೆನ್ಸಿಗಳು ಮತದಾರರಲ್ಲಿ ಗೊಂದಲ ಹುಟ್ಟಿಸದಂತೆ ತಡೆಯಬೇಕು ಎಂದು ಆಗ್ರಹಿಸಲಾರಂಭಿಸಿದ್ದಾರೆ.

ಜನ ಯಾವತ್ತೂ ಈ ಮಾಧ್ಯಮಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಆದರೂ ಈ ಬಿಜೆಪಿಯ ಮಾಧ್ಯಮ ತಿರುಚುವ, ಚಡ್ಡಿ ಪರ್ತಕರ್ತರ ಬಗ್ಗೆ ಪ್ರಚಾರ ಜನಜಾಗೃತಿ ಮೂಡಿಸಿವುದು ಪ್ರಮುಖ ಪ್ರಜಾಪ್ರಭುತ್ವ ಕರ್ತವ್ಯ.

ಬಾಗೇಪಲ್ಲಿ ಘಟನೆ: ಸಂಪಂಗಿ ಹೇಳಿಕೆಗೆ ಖಂಡನೆ

ಬಾಗೇಪಲ್ಲಿಯಲ್ಲಿ ಮೊನ್ನೆ ನಡೆದ ಗೋಲೀಬಾರ್ ಘಟನೆಗೆ ಕಾರಣವಾದ ಪ್ರಕರಣದಲ್ಲಿ ಮೊದಲ ಆರೋಪಿ ಯಾಗಿರುವ ಎನ್.ಸಂಪಂಗಿಯವರು ತಾವು ಮಾಡಿದ ಕೃತ್ಯಗಳಿಂದ ನುಣುಚಿಕೊಳ್ಳಲು ಸಿಪಿಐ(ಎಂ) ಪಕ್ಷದ ಮುಖಂಡರು, ಕಾರ್ಯಕರ್ತರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಮಂಡಳಿಯುವ ತೀವ್ರವಾಗಿ ಖಂಡಿಸಿದೆ.

ತಮ್ಮ ಗುಂಪು ಜಗಳ, ಅಧಿಕಾರದಾಹದಲ್ಲಿ ಮುಳುಗಿರುವ ಈ ಮುಖಂಡರು ತಮ್ಮ ಸಹಜವಾದ ಗೂಂಡಾ ಸಂಸ್ಕೃತಿಯನ್ನು ತೋರಿಸಿದ್ದಾರೆ. ರಾಜಕೀಯವಾಗಿ ಸಿಪಿಐ(ಎಂ)ನ್ನು ಎದುರಿಸುವ ತಾಕತ್ತಿಲ್ಲದೆ ಸಂಪಂಗಿಯವರು ದುರುದ್ದೇಶದಿಂದ ಪಕ್ಷದ ವಿರುದ್ಧ ಪ್ರಲಾಪಿಸಿದ್ದಾರೆ.

ಇಂತಹ ಹತಾಶೆಯ ಸಂಚುಗಳನ್ನು ನಡೆಸುತ್ತಿರುವುದರ ವಿರುದ್ಧ ಸಿಪಿಐ(ಎಂ) ಉಗ್ರವಾಗಿ ಎಚ್ಚರಿಸಿದೆ. ಸಂಪಂಗಿ ಮುಂತಾದವರ ಕುತಂತ್ರಗಳನ್ನು ಅರಿಯಬೇಕು ಮತ್ತು ತಕ್ಕ ಉತ್ತರ ನೀಡಬೇಕು ಎಂದು ಸಿಪಿಐ(ಎಂ) ಜನತೆಗೆ ಮನವಿ ಮಾಡಿದೆ. ಗೋಲೀಬಾರ್ ಘಟನೆಗೆ ಕಾರಣವಾದ ಸಂಚುಕೋರರ ಮೇಲೆ ನಿಷ್ಠುರ ಕ್ರಮ ಕೈಗೊಳ್ಳಲು ಆಗ್ರಹಿಸಿದೆ.

ಬಾಗೇಪಲ್ಲಿಯಲ್ಲಿ ಚುನಾವಣೆ ಅಕ್ಟೋಬರ್ 3 ರಂದು

ಬಾಗೇಪಲ್ಲಿಯಲ್ಲಿ ಸೇರಿದಂತೆ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಚುನಾವಣಾ ಆಯೋಗ ತಡೆ ಹಿಡಿದಿದೆಯೆಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವಾಗ ತಿಳಿದು ಬಂದಿದೆ. ಬಾಗೇಪಲ್ಲಿಯಲ್ಲಿ ಕಳೆದ ಬಾರಿ ಗೆದ್ದಿದ್ದ ಶ್ರೀರಾಮರೆಡ್ಡಿಯವರು ಸಿಪಿಐ(ಎಂ) ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಈ ಸಾರ್ವತ್ರಿಕ ಚುನಾವಣೆಗಳ ಕೊನೆಯ ಹಂತವಾದ ಅಕ್ಟೋಬರ್ 3 ರಂದು ಈ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ನಾಮಪತ್ರ ಸಲ್ಲಿಸಿರುವ ಇತರ ಸಿಪಿಐ(ಎಂ) ಅಭ್ಯರ್ಥಿಗಳೆಂದರೆ ಹೆಚ್.ಎನ್.ಗೋಪಾಲ ಗೌಡ(ವರ್ತೂರು), ಚಂದ್ರು ತೇಜಸ್ವಿ(ದೊಡ್ಡ ಬಳ್ಳಾಪುರ), ಕೆ.ಎಂ.ವೆಂಕಟೇಶ್(ಶಿಡ್ಲಘಟ್ಟ), ಜಿ.ವಿ.ಅಶ್ವತ್ಥ ನಾರಾಯಣ ರೆಡ್ಡಿ(ಚಿಂತಾಮಣಿ), ಟಿ.ಎಸ್.ಮಣಿ (ಕೆ.ಜಿ.ಎಫ್), ಎಸ್.ಪ್ರಸನ್ನ ಕುಮಾರ್(ಹೊಸಪೇಟೆ), ಮಾರುತಿ ಮಾನ್ಪಡೆ(ಕಮಲಾಪುರ), ಚಂದ್ರಪ್ಪ ಹೊಸ್ಕೇರಾ(ದೇವದುರ್ಗ), ಫಕೀರಪ್ಪ ಹೋತನಹಳ್ಳಿ(ಹಾನಗಲ್ ಹಾಗೂ ಬಿ.ಮಾಧವ (ಉಳ್ಳಾಲ). ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಜಿ.ಸಿ.ಬಯ್ಯಾರೆಡ್ಡಿಯವರು ನಾಮಪತ್ರ ಸಲ್ಲಿಸಿದ್ದಾರೆ.



ಪ್ರಣಾಳಿಕೆ ಬಿಡುಗಡೆ ಸಮಾರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರೊಂದಿಗೆ ಪಾಲಿಟ್... ಸದಸ್ಯರಾದ ಸೀತಾರಾಂ ಯೆಚೂರಿ, ಪಿ.ರಾಮಚಂದ್ರನ್ ಪಿಳ್ಳೆ ಹಾಗೂ ಪ್ರಕಾಶ್ ಕಾರಟ್

ಕೇಂದ್ರದಲ್ಲಿ ಬಿಜೆಪಿ ಆಳ್ವಿಕೆ ಬೇರೆ ಯಾವುದೇ ಪಕ್ಷದ ಆಳ್ವಿಕೆಗಿಂತ ಭಿ... ಬಂದಿರುವ ಪಕ್ಷ ಸಿಪಿಐ(ಎಂ). ಕಳೆದ 13 ತಿಂಗಳಲ್ಲಿ ವಾಜಪೇಯಿ ಸ... ಭಾರತೀಯ ಜನತೆಯ ಪ್ರಜ್ಞೆಯಲ್ಲಿ ಬೆರೆತು ಹೋಗಿರುವ ಮೌಲ್ಯಗಳ... ಬಿಜೆಪಿ ಅಧಿಕಾರಕ್ಕೆ ಮತ್ತೆ ಬರದಂತೆ ತಡೆಯುವುದು ಅತ್ಯಗತ್ಯ - ಇದು ಮತದಾರರ ಮುಂದಿಟ್ಟಿರುವ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿರುವ

ಸಿಪಿಐ(ಎಂ)ನ ಚುನಾವಣಾ ಪ್ರಣಾಳಿಕೆ ಯಲ್ಲಿ ಎರಡು ಭಾಗಗಳಿದ್ದು ಮೊ... ದುರಾಡಳಿತವನ್ನು ಪರಿಶೀಲಿಸಲಾಗಿದೆ. ಎರಡನೇ ಭಾಗದಲ್ಲಿ ಮುಂಬರುವ... ಪ್ರಶ್ನೆಗಳ ಬಗ್ಗೆ ವಿವರಿಸಲಾಗಿದೆ. ಮೊದಲನೆಯ ಭಾಗದ ಒಂದು ಚಿತ್ರ...

ದುರಾಡಳಿತವೆಂದ...

ಅಂತಿಂತ ದುರಾಡಳಿತವಲ್ಲ ಈ ವಾಜಪೇಯಿ ಸರಕಾರದ...

ಈ ಚುನಾವಣೆ ಏಕೆ ನಡೆಯುತ್ತಿದೆ? ಒಂದೂವರೆ ವರ್ಷದೊಳಗೇ ಭಾರತೀಯ ಜನತೆ ಹೊಸದೊಂದು ಲೋಕಸಭೆಯನ್ನು ಆರಿಸಬೇಕಾಗಿ ಬಂದಿದೆಯೇಕೆ? ಇದಕ್ಕೆ ಸಂಪೂರ್ಣವಾಗಿ ಬಿಜೆಪಿಯೇ ಹೊಣೆ ಎಂದು ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಹೇಳಿದೆ. 1998 ರ ಚುನಾವಣೆಗಳ ನಂತರ ಬಿಜೆಪಿ ನೇತೃತ್ವದ ಮೈತ್ರೀಕೂಟ ಬಹುಮತದಿಂದ ಬಹಳ ದೂರದಲ್ಲಿತ್ತು. ಆದರೂ ಏನೆಲ್ಲಾ ಮಾಡಿ, ಚುನಾವಣೆಯಲ್ಲಿ ತಮ್ಮ ವಿರುದ್ಧ ಸ್ಪರ್ಧಿಸಿದ್ದ ಪಕ್ಷಗಳನ್ನು ಕೂಡಾ ಸೇರಿಸಿಕೊಂಡು ಒಂದು ಹರಕು-ಮುರುಕು ಮೈತ್ರಿಕೂಟ ಸೃಷ್ಟಿಸಿ ರಚಿಸಿದ ಸರಕಾರ ಆರಂಭದಿಂದಲೂ ಕುಸಿತದ ಅಂಚಿನಲ್ಲೇ ತೂಗಾಡುತ್ತಿದ್ದ ಸರಕಾರ. ಕೊನೆಗೂ ಆಗಬೇಕಾದ್ದೇ ಆಯಿತು.

"13 ತಿಂಗಳ ಬೆಚ್ಚಿಬೀಳುವಂತಹ ದುರಾಡಳಿತದ ನಂತರ ಈ ಸರಕಾರ ತಲೆತಗ್ಗಿಸಿಕೊಂಡು ನಿರ್ಗಮಿಸಿತು" ಎಂದು ವರ್ಣಿಸಿರುವ ಪ್ರಣಾಳಿಕೆ ಈ ದುರಾಡಳಿತ ಕೇಂದ್ರದಲ್ಲಿ ಬಿಜೆಪಿ ಆಳ್ವಿಕೆ ಬೇರೆ ಯಾವುದೇ ಪಕ್ಷದ ಆಳ್ವಿಕೆಗಿಂತ ಮೂಲಭೂತವಾಗಿ ಭಿನ್ನವಾದದ್ದು ಎಂದು ಸಿಪಿಐ(ಎಂ) ಆರಂಭದಿಂದಲೂ ಹೇಳುತ್ತಾ ಬಂದಿರುವುದನ್ನು ಸಾಬೀತು ಮಾಡಿದೆ ಎಂದಿದೆ. ಏಕೆಂದರೆ ಈ ಬಿಜೆಪಿ ಆರ್.ಎಸ್.ಎಸ್. ನ ಮಾರ್ಗದರ್ಶನದಂತೆ ನಡೆಯುವ ಪಕ್ಷ, ಹಿಂದುತ್ವದಲ್ಲಿ ನಂಬಿಕೆಯಿರುವ, ನಮ್ಮ ಭಾರತೀಯ ಗಣತಂತ್ರದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕಳಚಿಹಾಕಬೇಕೆನ್ನುವ ಪಕ್ಷ.

ಬಿಜೆಪಿ ನೇತೃತ್ವದ ಸರಕಾರದ 13 ತಿಂಗಳ ಪಕ್ಕಾ ವಿನಾಶಕಾರಿ ಆಡಳಿತದ ಮುಖ್ಯ ಲಕ್ಷಣಗಳನ್ನು ಪ್ರಣಾಳಿಕೆ ಹೀಗೆ ಸಾರಾಂಶ ರೂಪದಲ್ಲಿ ಹೇಳಿದೆ.

- ★ ರಾಷ್ಟ್ರೀಯ ಐಕ್ಯತೆಯ ಮೇಲೆ ಹೆಚ್ಚಿದ ತೀವ್ರ ಧಾಳಿ
- ★ ಅಲ್ಪಸಂಖ್ಯಾತರಲ್ಲಿ ಭಯ ಮತ್ತು ಅಭದ್ರತೆ ಹುಟ್ಟಿಸಿದ ಘಟನಾವಳಿ
- ★ ವಿದೇಶಿ ಬಂಡವಾಳಿಗರಿಗೆ ಮತ್ತು ದೇಶೀ ದೊಡ್ಡ ಬಂಡವಾಳಿಗರಿಗೆ ಭಾರಿ ಭಕ್ಷೀಸು
- ★ ಜನಸಾಮಾನ್ಯರ ಮೇಲೆ ವಿಪರೀತ ಹೊರೆ ಹೇರಿಕೆ

ಮತ್ತು. ಆಡಳಿತದಲ್ಲಿ ವ್ಯಾಪಕ ಪ್ರಮಾಣದಲ್ಲಿ ಆರ್.ಎಸ್.ಎಸ್.ನ ತೂರಿಕೆ

ಬಿಜೆಪಿ ನೇತೃತ್ವದ ಸರಕಾರಕ್ಕೆ ರಾಷ್ಟ್ರೀಯ ಆಡಳಿತ ಅಜೆಂಡಾ ಎಂಬುದಿದ್ದರೂ ಬಿಜೆಪಿ-ಆರ್.ಎಸ್.ಎಸ್.ಕೂಟ ನಿಜವಾಗಿ ಜಾರಿಗೆ ತಂದದ್ದು ಹಿಂದುತ್ವದ ಬಚ್ಚಿಟ್ಟ ಅಜೆಂಡಾ ಎಂಬುದು ಈ 13 ತಿಂಗಳಲ್ಲಿ ಕಂಡ, ಅನುಭವಿಸಿದ ಸಂಗತಿ. ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಹಿಂದೆಂದೂ ಕಂಡುಬಾರದ ಧಾಳಿ, ಗ್ರಹಾಂ ಸ್ಟೇನ್ಸ್‌ರ ಭೀಕರ ಹತ್ಯೆಯಲ್ಲಿ ಪ್ರದರ್ಶನಗೊಂಡ ಅಸಹನೆ, ದ್ವೇಷ, ಸಂವಿಧಾನವನ್ನು ಮರುಪರಿಶೀಲಿಸುವ ಹೆಸರಲ್ಲಿ ಧರ್ಮನಿರಪೇಕ್ಷ ಅಂಶಗಳನ್ನೆಲ್ಲಾ ಕಿತ್ತುಹಾಕುವ ಪ್ರಯತ್ನ, ಉನ್ನತ ಶಿಕ್ಷಣದಲ್ಲಿ ಆರ್.ಎಸ್.ಎಸ್. ವ್ಯಕ್ತಿಗಳನ್ನು, ತತ್ವಗಳನ್ನು ತೂರುವ ಪ್ರಯತ್ನ ಹಾಗೂ ಕೋಮುವಾದ-ವಿರೋಧಿ ಬುದ್ಧಿಜೀವಿಗಳು, ಕಲಾವಿದರಿಗೆ ಬೆದರಿಕೆ ಇವೆಲ್ಲಾ ಇದಕ್ಕೆ ಉದಾಹರಣೆಗಳು.

ಹಿಂದುತ್ವದ ಮೇಲೆ ನಿಂತ ಸರ್ವಾಧಿಕಾರಶಾಹಿ ಬೇಕೆ?

ನರಪೇತಲ ಸರಕಾರ ನಡೆಸಿದರೂ ಈ ಬಿಜೆಪಿ ಸರ್ವಾಧಿಕಾರಿ ಕ್ರಮಗಳನ್ನು ಕೈಗೊಳ್ಳಲು ಸ್ವಲ್ಪವೂ ಹೇಸಲಿಲ್ಲ ಎಂಬುದು ಗಮನಾರ್ಹ ಸಂಗತಿ. ಚುನಾಯಿತ ಬಿಹಾರ ರಾಜ್ಯ ಸರಕಾರವನ್ನು ವಜಾ ಮಾಡಲು ಒಂದಲ್ಲ ಎರಡು ಬಾರಿ ಕರಾಳ 356ನೇ ಕಲಮಿನ ಬಳಕೆ, ಸಂಸತ್ತನ್ನು ಬದಿಗೊತ್ತಲು ಸುಗ್ರೀವಾಜ್ಞೆಗಳ ಬಳಕೆ(ಉದಾಹರಣೆಗೆ ಪ್ರಸಾರ ಭಾರತಿ ಸುಗ್ರೀವಾಜ್ಞೆ), ನೌಕಾ ಸೇನಾಧ್ಯಕ್ಷ ಅಡ್ಮಿರಲ್ ಭಾಗವತ್‌ರನ್ನು ವಜಾ ಮಾಡುವ ಅಭೂತಪೂರ್ವ ಕ್ರಮವನ್ನು ಸಂಸತ್ತಿನಲ್ಲಿ ಚರ್ಚಿಸಲು ನಕಾರ ಇವನ್ನೆಲ್ಲಾ ನೋಡಿದರೆ ***"ಬಿಜೆಪಿ ಸರಕಾರದಲ್ಲಿ ಮುಂದುವರೆಯಲು ಬಿಡುವುದೆಂದರೆ ಅದರರ್ಥ ಹಿಂದುತ್ವವನ್ನಾಧರಿಸಿದ ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯ ಉದಯಕ್ಕೆ ಅವಕಾಶ ನೀಡಿದಂತೆಯೇ ಸರಿ"*** ಎಂದು ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಎಚ್ಚರಿಸಿದೆ.

"ಸ್ವದೇಶಿ ಯ ಅಳಿದುಳಿದ ಸೋಗನ್ನೆಲ್ಲಾ ಕಳಚಿ ಹಾಕಿ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶದ ಆರ್ಥಿಕದ ಎಲ್ಲಾ ವಲಯಗಳನ್ನು ನಾಚಿಕೆಯಿಲ್ಲದೆ ಈ ಸರಕಾರ ತೆರೆದುಕೊಟ್ಟಿತು. ಈ ಕ್ರಮಗಳ ಫಲವೆಂದರೆ ಭಾರತೀಯ ಕಂಪನಿಗಳನ್ನೆಲ್ಲಾ ಈ ವಿದೇಶಿ ಕಂಪನಿಗಳೇ ವಹಿಸಿಕೊಂಡಿವೆ. ಇನ್ನು ಖಾಸಗೀಕರಣವಂತೂ ಬಿಜೆಪಿಯ ತಾರಕಮಂತ್ರ. ಇದರಿಂದಾಗಿ ಸಾರ್ವಜನಿಕ ವಲಯ ಹಿಂದೆಂದೂ ಕಾಣದ ಧಾಳಿಯನ್ನು ಎದುರಿಸಿದೆ. ದೇಶಿ-ವಿದೇಶಿ ಎನ್ನದೆ ಬಂಡವಾಳಶಾಹಿಗಳಿಗೆ ದೇಶದ ಈ ಅಮೂಲ್ಯ ಆಸ್ತಿಗಳನ್ನು ಅತೀ ಅಗ್ಗ ಬೆಲೆಯಲ್ಲಿ ಮಾರಾಟ ಮಾಡಿದ್ದು, ಲಾಭದಲ್ಲಿರುವ ಘಟಕಗಳೂ ಸರಕಾರದಿಂದ ಮತ್ತು ಇತರ ಘಟಕಗಳಿಂದ ಶೇರು ಖರೀದಿಸುವಂತೆ ಮಾಡಿ ಅದಕ್ಕೆ ದೊಡ್ಡ ಗಂಡಾಂತರ ತಂದಿರುವುದು ಈ ಸರಕಾರದ 'ಸಾಧನೆ' ಗಳಲ್ಲೊಂದು!

ಜನಗಳ ಮೇಲೆ ಮತ್ತಷ್ಟು ಹೊರೆಹಾಕಿದ ದುಷ್ಟ ಸರಕಾರ

ಇನ್ನೊಂದೆಡೆ ಖಾಸಗಿ ವ್ಯಾಪಾರಸ್ಥರಿಗೆ ಲಾಭ ಮಾಡಿಕೊಡಲು ರೇಶನ್ ವ್ಯವಸ್ಥೆಯನ್ನು ಕಳಚಿಹಾಕಿ, ಈ ಮೂಲಕ ನಗರ-ಗ್ರಾಮೀಣ ಪ್ರದೇಶಗಳ ಬಡ ಜನರನ್ನು ಕಾಳ ಸಂತೆ ಕೋರರ, ಲಾಭ ಕೋರರ ಬಾಯಿಗೆ ಕೊಟ್ಟದ್ದು ಈ ಸರಕಾರದ ಮತ್ತೊಂದು 'ಸಾಧನೆ' . ಈರುಳ್ಳಿ ಹಗರಣ, ದಿಲ್ಲಿಯಲ್ಲಿ ಬಿಜೆಪಿ ರಾಜ್ಯ ಸರಕಾರದಡಿ ಸಾಸಿವೆ ಎಣ್ಣೆ ಕಲಬೆರಕೆಯಿಂದ ಸಾವುಗಳು ಜನ ಮರೆಯಲಾರದಂತದ್ದು. ರೇಶನ್ ವಸ್ತುಗಳ ಬೆಲೆಯೇರಿಕೆ, ರೈಲ್ವೇ, ಅಂಚೆ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಯೂರಿಯಾ - ಎಲ್ಲವುಗಳ ಬೆಲೆಯೇರಿಕೆ ಮಾಡಿ ಜನಗಳ ಮೇಲೆ ಅಸಹನೀಯ ಹೊರೆ ಹಾಕಿದ ದುಷ್ಟ ಸರಕಾರ ಇದು.

ಸ್ವದೇಶಿ ಮಂತ್ರದ ಈ ಸರಕಾರ ಪೇಟೆಂಟ್ ಕಾನೂನುಗಳಲ್ಲಿ ತಿದ್ದುಪಡಿ ತರಬೇಕೆಂಬ ವಿದೇಶಿ ಒತ್ತಡಗಳಿಗೆ ಯಾವುದೇ ಸಂಕೋಚವಿಲ್ಲದೆ ತಲೆಬಾಗಿ ದೇಶದ ರೈತರ ಹಿತಾಸಕ್ತಿಗಳಿಗೆ ಭಾರೀ ಧಕೆ ತಂದದ್ದು, ಹಲವು ಕೃಷಿಉತ್ಪನ್ನಗಳ ಮುಕ್ತ ಆಮದಿಗೆ ಅವಕಾಶ ಕಲ್ಪಿಸಿ, ಮಾನ್ಸಂಟೋದಂತಹ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತೀಯ ರೈತರ ಶೋಷಣೆಗೆ ಮುಕ್ತ ಅವಕಾಶ ಕೊಟ್ಟದ್ದು ಈ 13 ತಿಂಗಳ ದುರಾಡಳಿತದಲ್ಲಿ ರೈತಾಪಿ ಜನಗಳಿಗಾದ ಅತ್ಯಂತ ಕೆಟ್ಟ ಅನುಭವ.

ಕೃಷಿಕೂಲಿಕಾರರಿಗೆ ಕನಿಷ್ಟ ಜೀವನ ಭದ್ರತೆ ಒದಗಿಸುವ ಕೇಂದ್ರಿಯ ಶಾಸನದ ವಿಷಯದಲ್ಲಂತೂ ಹಿಂದಿನ ಎಲ್ಲಾ ಸರಕಾರವನ್ನು ಮೀರಿಸಿ, ಆ ಶಾಸನವನ್ನು ಪರಿಶೀಲಿಸಲು ಕೂಡ ನಿರಾಕರಿಸಿ ಈ ಮೂಲಕ ಕೃಷಿಕೂಲಿಕಾರರ ಬಗೆಗಿರುವ ತನ್ನ ತಿರಸ್ಕಾರವನ್ನು ಸ್ಪಷ್ಟವಾಗಿ ಸಾರಿರುವ ದುಷ್ಟ ಸರಕಾರ ಇದು.


"ಒಟ್ಟಿನಲ್ಲಿ ವಾಜಪೇಯಿ ಸರಕಾರದ ದಾಖಲೆಯೆಂದರೆ ದೊಡ್ಡ ಬಂಡವಾಳದಾರರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಸಿರಿವಂತರಿಗೆ ಯಾವುದೇ ನಾಚಿಕೆಯಿಲ್ಲದೆ ತಲೆಬಾಗಿ ಸೇವೆ, ಅತ್ತ ಅವಶ್ಯಕ ವಸ್ತುಗಳ ಬೆಲೆಯೇರಿಕೆ, ಉದ್ಯೋಗಾವಕಾಶ ನಿರ್ಮಾಣದಲ್ಲಿ ವಿಫಲತೆ ಹಾಗೂ ಭೂ ಮಾಲಿಕ-ವ್ಯಾಪಾರಿ ಕೂಟಕ್ಕೆ ಬಡರೈತರನ್ನು ಸುಲಿಯಲು ಅವಕಾಶ ಒದಗಿಸುವ ಮೂಲಕ ಬಡವರನ್ನು ನಿರ್ದಯವಾಗಿ ಹಿಂಡಿ-ಹಿಪ್ಪೆ ಮಾಡಿರುವುದು" ಎಂದು ಸಿಪಿಐ(ಎಂ) ಪ್ರಣಾಳಿಕೆ ಬಿಜೆಪಿ ಸರಕಾರದ ಆಳ್ವಿಕೆಯನ್ನು ಸಾರಾಂಶ ರೂಪದಲ್ಲಿ ವರ್ಣಿಸಿದೆ.

ಭ್ರಷ್ಟಾಚಾರದಲ್ಲೂ ಒಂದು ಕೈ ಮೇಲೆ

ಇನ್ನು ಭ್ರಷ್ಟಾಚಾರದಲ್ಲೂ ಈ ಸರಕಾರದ ಸಾಧನೆ ಅಪಾರ! ಸ್ವತಂತ್ರ ಭಾರತದಲ್ಲಿ ಅತ್ಯಂತ ದೊಡ್ಡ ಭ್ರಷ್ಟಾಚಾರ ಹಗರಣದೊಂದಿಗೆ ತನ್ನ ಕಾರ್ಯಕಾಲವನ್ನು ಮುಗಿಸಿದ ಹೆಗ್ಗಳಿಕೆ ಈ ಸರಕಾರದ್ದು! ನೇರವಾಗಿ ಪ್ರಧಾನ ಮಂತ್ರಿಗಳ ನೇತೃತ್ವದಲ್ಲೇ ದೇಶದ ಬೊಕ್ಕಸಕ್ಕೆ 50 ಸಾವಿರ ಕೋಟಿ ರೂಪಾಯಿಗಳ ಭಾರೀ ಹಾನಿ ತಂದ ಈ ಹಗರಣದ ಬಗ್ಗೆ ನೀವು ಈಗಾಗಲೇ 'ಐಕ್ಯರಂಗ' ದಲ್ಲಿ ಓದಿರುವಿರಿ. ಆದರೆ ಬಿಜೆಪಿ ಸರಕಾರದಡಿ ನಡೆದ ಹಗರಣ ಇದೊಂದೇ ಅಲ್ಲ. ಹಣಕಾಸು ಮಂತ್ರಿಗಳ ಮಾಜಿ ಸಲಹೆಗಾರ ಆರ್.ಎಸ್.ಎಸ್. ನವರೇ ಆದ ಮೋಹನ್ ಗುರುಸ್ವಾಮಿಯವರು ಹೊರಗೆಡ... ಸಂಗತಿಗಳು ಉನ್ನತ ಸ್ಥಾನದಲ್ಲಿನ ಜನ ಅನೀತಿಯುತ ಮಾರ್ಗ ಹಿಡಿದು ದ... ಬಂಡವಾಳಿಗರಿಗೆ ಅನುಕೂಲ ಕಲ್ಪಿಸಿಕೊಟ್ಟರು... ನಾಚಿಕೆಗೇಡಿನ ಸಂಗತಿಯನ್ನು ಬಯಲಿಗೆಳ... ವಿದ್ಯುತ್, ಟೆಲಿಕಾಂ, ಪೆಟ್ರೋಲಿಯಂ ಮ... ಪ್ರಮುಖ ವಲಯಗಳಲ್ಲಿ ಪ್ರಮುಖ ಪ್ರಾಜೆಕ್... ಅನುಮೋದನೆ ನೀಡಿದ ರೀತಿ, ಬಹುರಾ... ಕಂಪನಿಗಳು - ದೊಡ್ಡ ಬಂಡವಾಳಿಗರು ಮತ್ತು ಸರಕಾರದ ನಡುವಿನ ಶಾಮೀಲಿನತ್ತ ಬೊಟ್ಟು ಮಾ... ಇವುಗಳ ಬಗ್ಗೆ ಗಂಭೀರ ತನಿಖೆ ಅಗತ್ಯ ... ಸಿಪಿಐ(ಎಂ) ಪ್ರಣಾಳಿಕೆ ಹೇಳಿದೆ.

ಸಾಮ್ರಾಜ್ಯಶಾಹಿಗಳ ದಾಸ?

ಅಂತರ್ರಾಷ್ಟ್ರೀಯ ರಂಗದಲ್ಲಿ ಅಲಿಪ್ತವಾ... ಸ್ವತಂತ್ರ ನಿರ್ಣಯ ಕೈಗೊಳ್ಳುವುದು - ದೀರ್ಘಕಾಲದಿಂದ ಭಾರತ ಅನುಸರಿಸಿಕೊಂಡು ವಿದೇಶಾಂಗ ನೀತಿಯ ಮೂಲಾಧಾರ. ಇದ... ಅಂತರ್ರಾಷ್ಟ್ರೀಯ ಮನ್ನಣೆಯನ್ನು ನಮ್ಮ ದೇಶ ಗ... ಆದರೆ 13 ತಿಂಗಳ ಅಲ್ಪ ಅವಧಿಯಲ್ಲೇ ಬ... ನೇತೃತ್ವದ ಸರಕಾರ ಇದನ್ನೆಲ್ಲಾ ತಲೆಕೆಳಗೆ ಮಾ... ಪೋಖ್ರಾನ್ ಅಣು ಪರೀಕ್ಷೆ ಮಾಡಿ ಈ ರಂಗ... ದೀರ್ಘಕಾಲದ ದೇಶದ ಶಾಂತಿಪ್ರಿಯ ಧೋರಣೆ... ಬುಡಮೇಲು ಮಾಡಿದ ನಂತರ ಅಂತರ್ರಾಷ್ಟ್ರೀಯ... ದೇಶ ಏಕಾಂಗಿಯಾದಾಗ ಇದೇ ಸರಕಾರ ಅಮ... ಒತ್ತಡಗಳಿಗೆ ಬಲಿಯಾಗಲಾರಂಭಿಸಿತು. ತಾನೊ... ಪರಮಾಣು ಶಸ್ತ್ರ ಸಂಪನ್ನ ದೇಶ ... ಸರ್ಟಿಫಿಕೇಟನ್ನು ಪಡೆಯಲು ಎಂಟು ತಿಂಗಳ... ಅಮೆರಿಕಾದ ವಿದೇಶಾಂಗ ಇಲಾಖೆಯ ಅಧ... ಟಾಲ್ಬೋಟ್‌ರೊಡನೆ ಬಿಜೆಪಿ ಸರಕಾರದ ವಿದೇ... ಮಂತ್ರಿ ಜಸ್ವಂತ್ ಸಿಂಗ್ ನಡೆಸಿದ ಗುಪ್ತ ಮಾ... ಭಾರತದ ರಾಜತಾಂತ್ರಿಕ ಇತಿಹಾಸದಲ್ಲೇ ಹಿಂದೆ... ಕಾಣದ ನಾಚಿಕೆಗೇಡಿನ ಸಂಗತಿ. ನಮ್ಮ ವಿದೇ... ನೀತಿ ಸಾಮ್ರಾಜ್ಯಶಾಹಿ-ಪರ ವಾಲಿರುವುದು ಎದ್ದು ಕಾಣುವ ಸಂಗತಿ. ದೇಶ ಸತತ... ವಿರೋಧಿಸಿಕೊಂಡು ಬಂದಿರುವ ಸಿಟಿಬಿಟಿ ಒಪ್ಪ... ಸಹಿ ಹಾಕಲೂ ಈ ಸರಕಾರ ಸಿದ್ಧವಾಗಿದೆ. ಇನ್ನೊ... ನಮ್ಮ ನೆರೆ ದೇಶ ಚೀಣಾದೊಂದಿಗೆ ಸುಧಾರಿಸ... ಸಂಬಂಧಗಳನ್ನು ಹಾಳು ಮಾಡಿದ್ದು ಈ ಸರಕಾ... ಇನ್ನೊಂದು 'ಸಾಧನೆ' !



"ನೀತಿಗೆಟ್ಟ ರಾಜಕೀಯ, ಅಧಿಕಾರದಲ್ಲುಳಿಯಲು ಸಣ್ಣ... ಪಕ್ಷಗಳೊಂದಿಗೆ ಸಮಯಸಾಧಕ ರಾಜಿ, ಕೈಗಾರಿಕಾ ಹಿಂಜ... ಮತ್ತು ಆರ್ಥಿಕ ಸ್ಥಗಿತತೆ, ದೇಶಿ-ವಿದೇಶಿ ದೊ... ಬಂಡವಾಳಶಾಹಿಗಳಿಗೆ ಉದಾರ ಭಕ್ಷೀಸುಗಳು, ನಿರಂ... ಬೆಲೆಯೇರಿಕೆ ಮತ್ತು ಹೆಚ್ಚುತ್ತಿರುವ ಅನಾರೋ... ಸರ್ವಾಧಿಕಾರಶಾಹಿ ಮತ್ತು ಪ್ರಭುತ್ವದ ಅಂಗಗಳ... ಆರ್.ಎಸ್.ಎಸ್. ತೂರಿಕೆ, ಅಲ್ಪ ಸಂಖ್ಯಾತರ ಮೇ... ಅಭೂತಪೂರ್ವ ಧಾಳಿಗಳು ಹಾಗೂ ವಿದೇಶಾಂಗ ನೀ... ಮತ್ತು ದೇಶದ ಭದ್ರತೆ ಕುರಿತಂತೆ ಗಂಡಾಂತರ... ನಿಲುವುಗಳು ಇವು ವಾಜಪೇಯಿ ಸರಕಾರದ ದಾಖಲೆ...

ಶ ಆರಂಭದಿಂದಲೇ ಎಚ್ಚರಿಕೆ ನೀಡಿಕೊಂಡು ದನ್ನು ನಿಸ್ಸಂದಿಗ್ಧವಾಗಿ ಸಾಬೀತು ಮಾಡಿದೆ. ಬೇಕಾದರೆ ಮುಂಬರುವ ಚುನಾವಣೆಗಳಲ್ಲಿ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ

ಲ್ಲಿ ಬಿಜೆಪಿ ಮತ್ತು ಅದರ ಮಿತ್ರರ 13 ತಿಂಗಳ ಸಿಪಿಐ(ಎಂ) ಜನರ ಗಮನ ಸೆಳೆಯಬಯಸುವ

ಕಾರ್ಗಿಲ್‌ನ ಘಟನೆಗಳನ್ನು ವಾಜಪೇಯಿ ಮತ್ತಿತರ ಅವರ ಮುಖಂಡರುಗಳು ಚುನಾವಣಾ ಭಾಷಣಗಳಲ್ಲಿ ನಿರ್ಭಿಡೆಯಿಂದ ತಮ್ಮ ಸಾಧನೆಯೆಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ಬಾಂಬ್‌ನ ಪರೀಕ್ಷಾ ಸ್ಫೋಟ ನಡೆಸಿ ತಾನು ಭಾರತವನ್ನು ಪರಮಾಣು ಸಂಪನ್ನ ಬಲಾಢ್ಯ ದೇಶವಾಗಿ ಮಾಡಿದ್ದೇವೆ ಎಂದು ಹಾರಾಡುತ್ತಾ ಲಾಹೋರ್ ಬಸ್ ಪ್ರಯಾಣದ ಗುಂಗಿನಲ್ಲೇ ಮೈಮರೆತಿದ್ದಾಗ ನಡೆದ ಕಾರ್ಗಿಲ್ ಅತಿಕ್ರಮಣ ವಾಸ್ತವವಾಗಿ ಈ ಸರಕಾರ ದೇಶದ ಭದ್ರತೆಗೆ ಸಂಬಂಧಪಟ್ಟಂತೆ ಎಷ್ಟು ಅಸಮರ್ಥ ಸರಕಾರ ಎಂಬುದನ್ನು ತೋರಿಸಿಕೊಟ್ಟ ಘಟನೆ. ಈ ಬಗ್ಗೆ 'ಐಕ್ಯರಂಗ' ದಲ್ಲಿ ಈಗಾಗಲೇ ನೀವು ಓದಿದ್ದೀರಿ. ದೇಶ ಈ ಸರಕಾರದ ಅಸಮರ್ಥತೆಗೆ, ನಿರ್ಲಕ್ಷ್ಯಕ್ಕೆ ಭಾರಿ ಬೆಲೆ ತೆರಬೇಕಾಗಿ ಬಂತು. **"ನಮ್ಮ ದೇಶದ ಭದ್ರತೆ ಹಾಗೂ ವಿದೇಶಾಂಗ ನೀತಿಯನ್ನು ಕುರಿತಂತೆ ವಾಜಪೇಯಿ ಸರಕಾರ ತಳೆದ ಮಂದದೃಷ್ಟಿಯ ನಿಲುವುಗಳನ್ನು ಬದಲಿಸಬೇಕಾದ ಅಗತ್ಯವನ್ನು ಕಾರ್ಗಿಲ್ ಎತ್ತಿ ತೋರಿದೆ"** ಎಂದು ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಎಚ್ಚರಿಸಿದೆ.

ಭರವಸೆಗಳನ್ನೆಲ್ಲಾ ಮರೆತ ಸರ್ಕಾರ

ತನ್ನ ಬಚ್ಚಿಟ್ಟ ಅಜೆಂಡಾಗಳನ್ನು ಜಾರಿ ಮಾಡುವ ತವಕದಲ್ಲಿ ಬಿಜೆಪಿಗೆ ಕಳೆದ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತದಾರರಿಗೆ ಕೊಟ್ಟ ಪ್ರಾಥಮಿಕ ಭರವಸೆಗಳನ್ನು ಈಡೇರಿಸಲು ಸಮಯವೇ ಸಿಗಲಿಲ್ಲ, ಪಾಪ! ಉದಾಹರಣೆಗೆ,

★ ಒಟ್ಟು ರಾಷ್ಟ್ರೀಯ ಉತ್ಪನ್ನ 8-9 ಶೇಕಡಾ ದರದಲ್ಲಿ ಹೆಚ್ಚುವಂತೆ ಮಾಡಲಾಗುವುದು ಎಂಬ ಭರವಸೆ ಏನಾಯಿತು?

★ ವರ್ಷಕ್ಕೆ ಒಂದು ಕೋಟಿಯಂತೆ (ಹತ್ತು ವರ್ಷಗಳಲ್ಲಿ ಹತ್ತು) ಕೋಟಿ ಉದ್ಯೋಗವಕಾಶ ನಿರ್ಮಿಸುವ ಭರವಸೆ ಎಲ್ಲಿಗೆ ಹೋಯಿತು?

ಪ್ರತಿವರ್ಷ 20 ಲಕ್ಷ ಹೆಚ್ಚುವರಿ ವಸತಿಯ ಭರವಸೆ ಏನಾಯಿತು?

★ ಮಹಿಳೆಯರಿಗೆ ಸಂಸತ್ತಿನಲ್ಲಿ ಶಾಸನ ಸಭೆಗಳಲ್ಲಿ 33 ಶೇಕಡಾ ಮೀಸಲಾತಿಯ ಭರವಸೆ ಏನಾಯಿತು?

★ ಭ್ರಷ್ಟಾಚಾರದ ತಡೆಗೆಂದು ತರಬೇಕಾಗಿದ್ದ ಲೋಕಪಾಲ ಮಸೂದೆ ಎಲ್ಲಿದೆ?

★ ಚುನಾವಣಾ ಸುಧಾರಣೆಗಳ, ರಾಷ್ಟ್ರೀಯ ನ್ಯಾಯಾಂಗ ಆಯೋಗದ ಭರವಸೆ ಎಲ್ಲಿಗೆ ಹೋಯಿತು?

ಕಾಂಗ್ರೆಸ್ಸಿನ ಆಳ್ವಿಕೆಯಿಂದ ಬೇಸತ್ತ ಜನಗಳ ಕಣ್ಣಿಗೆ ಮಣ್ಣೆರಚಲು ಕೊಟ್ಟ ಹುಸಿ ಭರವಸೆಗಳಿವು. ಆದ್ದರಿಂದಲೇ ಸಹಜವಾಗಿಯೇ ಬಿಜೆಪಿ ಇವನ್ನೆಲ್ಲಾ ಮರೆತುಬಿಡದೆ ಇನ್ನೇನಾಗಲು ಸಾಧ್ಯ?

ಒಟ್ಟಿನಲ್ಲಿ ***"ನೀತಿಗೆಟ್ಟ ರಾಜಕೀಯ, ಅಧಿಕಾರದಲ್ಲುಳಿಯಲು ಸಣ್ಣಪುಟ್ಟ ಪಕ್ಷಗಳೊಂದಿಗೆ ಸಮಯಸಾಧಕ ರಾಜಿ, ಕೈಗಾರಿಕಾ ಹಿಂಜರಿತ ಮತ್ತು ಆರ್ಥಿಕ ಸ್ಥಗಿತತೆ, ದೇಶಿ-ವಿದೇಶಿ ದೊಡ್ಡ ಬಂಡವಾಳಶಾಹಿಗಳಿಗೆ ಉದಾರ ಭಕ್ಷೀಸುಗಳು, ನಿರಂತರ ಬೆಲೆಯೇರಿಕೆ ಮತ್ತು ಹೆಚ್ಚುತ್ತಿರುವ ಅನಾರೋಗ್ಯ, ಸರ್ವಾಧಿಕಾರಶಾಹಿ ಮತ್ತು ಪ್ರಭುತ್ವದ ಅಂಗಗಳಲ್ಲಿ ಆರ್.ಎಸ್.ಎಸ್. ತೂರಿಕೆ, ಅಲ್ಪ ಸಂಖ್ಯಾತರ ಮೇಲೆ ಅಭೂತಪೂರ್ವ ಧಾಳಿಗಳು ಹಾಗೂ ವಿದೇಶಾಂಗ ನೀತಿ ಮತ್ತು ದೇಶದ ಭದ್ರತೆ ಕುರಿತಂತೆ ಗಂಡಾಂತರಕಾರಿ ನಿಲುವುಗಳು ಇವು ವಾಜಪೇಯಿ ಸರಕಾರದ ದಾಖಲೆ"*** ಎಂದು ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಈ ದುಷ್ಟ ಸರಕಾರದ ವಿನಾಶಕಾರಿ ಆಳ್ವಿಕೆಯನ್ನು ಒಂದೇ ಮಾತಿನಲ್ಲಿ ವರ್ಣಿಸಿದೆ.

ಕಾಂಗ್ರೆಸ್ ಖಂಡಿತಾ ಪರ್ಯಾಯವಲ್ಲ

'ಇಂತಹ ಸಂದರ್ಭದಲ್ಲಿ ಜನಗಳ ಮುಂದಿರುವ ಆಯ್ಕೆ ಇಷ್ಟೇ - ಬಿಜೆಪಿ ನೇತೃತ್ವದ ಕೂಟವನ್ನು ಆರಿಸುವುದು' ಅಥವಾ ಒಂದು ಕಾಂಗ್ರೆಸ್ ಪರ್ಯಾಯವನ್ನು ಆರಿಸುವುದು ಎಂಬ ವಾದವನ್ನು ಸಿಪಿಐ(ಎಂ) ಖಡಾಖಂಡಿತವಾಗಿ ತಿರಸ್ಕರಿಸಿದೆ.

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಒಂದು ಚೈತನ್ಯಶಾಲೀ ಬಹುಪಕ್ಷೀಯ ಪ್ರಜಾಪ್ರಭುತ್ವ ಬೇಕು. ಕಾಂಗ್ರೆಸ್‌ನ ಮೂಲಭೂತ ಧೋರಣೆಗಳು ಒಂದು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕೊಡಲಾರವು. 1991ರಲ್ಲಿ ಆರಂಭಿಸಿದ ಆರ್ಥಿಕ ನೀತಿಗಳನ್ನು, ದೇಶದ ಕೋಟ್ಯಾಂತರ ಶ್ರಮಜೀವಿಗಳಿಗೆ ಮಾರಕವೆಂದು ಸ್ಪಷ್ಟವಾಗಿ ಕಂಡುಬಂದ ಆ ನೀತಿಗಳನ್ನು ಕಾಂಗ್ರೆಸ್ ಈಗಲೂ ಪ್ರತಿಪಾದಿಸುತ್ತಿದೆ. ಕೋಮುವಾದದ ಪಿಡುಗಿನ ವಿರುದ್ಧ ಹೋರಾಟದಲ್ಲಿ ಎಲ್ಲಾ ಧರ್ಮನಿರಪೇಕ್ಷ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸುವ ರಾಜಕೀಯ ಮತ್ತು ಸೈದ್ಧಾಂತಿಕ ಇಚ್ಛಾಶಕ್ತಿ ಅದರ ಬಳಿಯಿಲ್ಲ. ತನ್ನ ಆಳ್ವಿಕೆಯಲ್ಲಿ ಎದ್ದು ಕಾಣುತ್ತಿದ್ದ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವ ಯಾವುದೇ ದೃಢ ನಿರ್ಧಾರವನ್ನು ಅದು ತೋರಿಲ್ಲ. ಹೀಗಿರುವಾಗ ಅದು ಎಂತಹ ಪರ್ಯಾಯವನ್ನು ಕೊಡಬಲ್ಲದು?

ಆರ್ಥಿಕ ಪ್ರಶ್ನೆಗಳಲ್ಲಂತೂ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಯಾವುದೇ ಮೂಲಭೂತ ವ್ಯತ್ಯಾಸಗಳಿಲ್ಲ. ಖಾಸಗೀಕರಣ, ಇನ್ನಷ್ಟು ಉದಾರೀಕರಣ, ವಿಮಾ ಖಾಸಗೀಕರಣ, ಪೇಟೆಂಟ್ ಮಸೂದೆ ಇವು ಯಾವುದರಲ್ಲೂ ಬಿಜೆಪಿಯ ವಿನಾಶಕಾರಿ ನೀತಿಗಳಿಗೆ ಕಾಂಗ್ರೆಸ್‌ನ ಬಳಿ ಯಾವುದೇ ಪರ್ಯಾಯವಿಲ್ಲ.

ಸಿಪಿಐ(ಎಂ) ಮತ್ತು ಎಡಶಕ್ತಿಗಳನ್ನು ಬಲಪಡಿಸಿ

ಇಂತಹ ಪರ್ಯಾಯವಿರುವುದು, ಅದಕ್ಕಾಗಿ ನಿರಂತರ ಹೋರಾಟ ನಡೆಸಿಕೊಂಡು ಬಂದಿರುವ ಶಕ್ತಿಗಳೆಂದರೆ ಎಡ ಶಕ್ತಿಗಳು ಮಾತ್ರ. ಕೋಮುವಾದವನ್ನು ದೃಢವಾಗಿ ಎದುರಿಸಿಕೊಂಡು ಬಂದು, ಧರ್ಮನಿರಪೇಕ್ಷತೆಯ ರಕ್ಷಣೆಗೆ ದುಡಿಯುವ ಜನಗಳ ಹಿತಾಶಕ್ತಿಗಳ ರಕ್ಷಣೆಗೆ ಟೊಂಕ ಕಟ್ಟಿ ನಿಂತವರೆಂದರೆ ಎಡಶಕ್ತಿಗಳು ಮಾತ್ರ. ಆದ್ದರಿಂದ ಧರ್ಮನಿರಪೇಕ್ಷ ಪ್ರಜಾಪ್ರಭುತ್ವದ ಭವಿಷ್ಯಕ್ಕೆ, ರಾಷ್ಟ್ರೀಯ ಐಕ್ಯತೆಗೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಹೋರಾಟವನ್ನು ಮುಂದೊಯ್ಯಲು ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲ ಹೆಚ್ಚಬೇಕಾದ್ದು ಅತ್ಯಗತ್ಯ. ಎಡಪಂಥೀಯರ ಪರಿಣಾಮಕಾರಿ ಮಧ್ಯಪ್ರವೇಶದಿಂದ ಮಾತ್ರವೇ ಒಂದು ಪರಿಣಾಮಕಾರಿ ಮೂರನೇ ಪರ್ಯಾಯದತ್ತ ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಧರ್ಮನಿರಪೇಕ್ಷ ಶಕ್ತಿಗಳು ಶ್ರಮಿಸಲು ಸಾಧ್ಯವಾಗುತ್ತದೆ ಎಂದು ಸಿಪಿಐ(ಎಂ) ಪ್ರಣಾಳಿಕೆ ಒತ್ತಿ ಹೇಳಿದೆ.

ನಮ್ಮ ಮುಂದಿರುವ ಮಹತ್ವಪೂರ್ಣ ಆಯ್ಕೆ

ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಎಡ ನೇತೃತ್ವದ ಸರಕಾರಗಳು ಪ್ರಗತಿಪರ ಪರ್ಯಾಯ ಹೇಗಿರುತ್ತದೆ ಎಂಬುದನ್ನು ದೇಶದ ಮುಂದೆ ಮೂರ್ತರೂಪದಲ್ಲಿ ಇಟ್ಟಿವೆ. ಎಡ ಮತ್ತು ಪ್ರಜಾಪ್ರಭುತ್ವಶಕ್ತಿಗಳನ್ನು ಬಲಪಡಿಸಿದರೆ ಇವನ್ನು ರಾಷ್ಟ್ರಮಟ್ಟದಲ್ಲಿಯೂ ಜಾರಿಗೆ ತರಲು ಸಾಧ್ಯ.

"ಈ ಚುನಾವಣೆ 21 ನೇ ಶತಮಾನದ ಹೊಸ್ತಿಲಲ್ಲಿ ಭಾರತಕ್ಕೆ ಮುಂದಿನ ದಿಕ್ಕು ತೋರುವ ಒಂದು ಸರಕಾರವನ್ನು ತರುತ್ತದೆ. ನಮ್ಮ ಮುಂದಿರುವ ಆಯ್ಕೆ ಸ್ಪಷ್ಟ - ನಾವು ಭಾರತವನ್ನು ಒಂದು ಧರ್ಮನಿರಪೇಕ್ಷ ಗಣತಂತ್ರವಾಗಿ, ಎಲ್ಲಾ ನಾಗರಿಕರನ್ನು ಪ್ರತಿಯೊಂದು ದೃಷ್ಟಿಯಿಂದಲೂ ಸಮಾನರಾಗಿ ಕಾಣುವ ಒಂದು ಗಣತಂತ್ರವನ್ನು ಬಲಪಡಿಸಬಯಸುತ್ತೇವೆಯೇ ಅಥವಾ ಸಂಕುಚಿತ ಮತೀಯ ದ್ವೇಷದ, ತಿಕ್ಕಾಟದ ಕೆಸರಿನಲ್ಲಿ ಭಾರತ ಹೂತುಹೋಗಬೇಕೆಂದು ಬಯಸುತ್ತೇವೆಯೇ" ಎಂದು ಸ್ಪಷ್ಟ ಮಾತುಗಳಲ್ಲಿ ಎಚ್ಚರಿಸಿರುವ ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸಿ, ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಬಲಪಡಿಸಿ, ಒಂದು ಜಾತ್ಯಾತೀತ ಸರಕಾರಕ್ಕಾಗಿ ಎಡ, ಪ್ರಜಾಪ್ರಭುತ್ವವಾದಿ ಮತ್ತು ಧರ್ಮನಿರಪೇಕ್ಷ ಶಕ್ತಿಗಳನ್ನು ಬೆಂಬಲಿಸಿ ಎಂದು ಕರೆ ನೀಡಿವೆ. ○

ಈ ಸಾವಿರ ಹೆಡೆಯ ವಿಷಸರ್ಪವನ್ನು ಕೊಲ್ಲಬೇಕಾಗಿದೆ

ಸುರ್ಜಿತ್



ಇತಿಹಾಸವನ್ನು ಮರೆಯುವವರು ಅದನ್ನು ಪುನರಾವರ್ತಿಸುವ ಶಿಕ್ಷೆ ಅನುಭವಿಸಬೇಕಾಗುತ್ತದಂತೆ. ಬ್ರಿಟಿಷರ ಒಡೆದಾಳುವ ನೀತಿಯ ತಾಳಕ್ಕೆ ತಕ್ಕಂತೆ ಕುಣಿದು, ಅದರಿಂದಾಗಿ ದೇಶ ವಿಭಜನೆಯಲ್ಲಿ ಪಾಲುದಾರರಾಗಿ, ಮಹಾತ್ಮಗಾಂಧಿಯವರನ್ನು ಅದೇ ಕಾರಣಕ್ಕಾಗಿ ಕೊಂದ ಶಕ್ತಿಗಳು ಮತ್ತೆ ಅಧಿಕಾರದಲ್ಲಿ ಮುಂದುವರೆಯಲು ಶತಪ್ರಯತ್ನ ನಡೆಸಿದ್ದಾರೆ. ಇತಿಹಾಸದಿಂದ ಪಾಠ ಕಲಿತು ಈ ಕೋಮುವಾದವೆಂಬ ಸಾವಿರ ಹೆಡೆಯ ವಿಷಸರ್ಪವನ್ನು ಸಾಯಿಸಲು ದೇಶ ಮುಂದಾಗಬೇಕಿದೆ, ಮುಂಬರುವ ಚುನಾವಣೆಗಳಲ್ಲಿ ಎಡ ಮತ್ತು ಧರ್ಮನಿರಪೇಕ್ಷ ಶಕ್ತಿಗಳು ಈ ಬಿಜೆಪಿ ನಮ್ಮ ದೇಶದ ಐಕ್ಯತೆಗೆ ಮತ್ತು ಕೋಮುಸೌಹಾರ್ದತೆಗೆ, ನಾವೊಂದು ನಾಗರೀಕ ದೇಶವಾಗಿ ಉಳಿಯುವುದಕ್ಕೆ, ನಮ್ಮ ಬಹುಸಂಸ್ಕೃತಿ ಸ್ವರೂಪಕ್ಕೆ, ನಮ್ಮ ದೇಶದ ಭದ್ರತೆಗೆ ಹಾಗೂ ಅಭಿವೃದ್ಧಿಶೀಲ ದೇಶಗಳ ಸಮುದಾಯದಲ್ಲಿ ನಮ್ಮ ದೇಶ ಹೊಂದಿರುವ ಸ್ಥಾನಕ್ಕೆ ಕೂಡಾ ಬಿಜೆಪಿ ಒಡ್ಡಿರುವ ಬೆದರಿಕೆಗಳನ್ನು ಅರಿಯಬೇಕಾಗಿದೆ. ಮುಂಬರುವ ಚುನಾವಣೆಗಳ ನಿರ್ಣಾಯಕ ಮಹತ್ವ ಇರುವುದು ಇಲ್ಲೇ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್.

ಬ್ರಿಟನ್ ವಸಹತುಶಾಹೀ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ಅರ್ಧ ಶತಮಾನದ ನಂತರವೂ ಭಾರತ ದೇಶ ಆ ವಸಹತುಶಾಹೀ ಯಜಮಾನರುಗಳು ಹಾಲೆರೆದು ಪೋಷಿಸಿದ, ಹೋರಾಟನಿರತ ಜನಗಳ ಐಕ್ಯತೆಯನ್ನು ಒಡೆದು ಕೊನೆಗೆ ದೇಶವನ್ನೇ ವಿಭಜಿಸಿದ, ನಂತರ ಮಹಾತ್ಮ ಗಾಂಧಿಜಿಯನ್ನೇ ಬಲಿತೆಗೆದುಕೊಂಡ ಕೋಮುವಾದದ ವಿಷಸರ್ಪವನ್ನು ಮತ್ತೆ ಎದುರಿಸಬೇಕಾಗಿ ಬಂದಿದೆ. ಒಂದೇ ವ್ಯತ್ಯಾಸವೆದರೆ ಈಗ ಈ ಅಸ್ತ್ರವನ್ನು ಬಳಸುತ್ತಿರುವವರು ಬ್ರಿಟಿಶರಲ್ಲ, ಬಿಜೆಪಿ - ಅಧಿಕಾರದಲ್ಲಿ ಮುಂದುವರೆಯಲಿದ್ದಾರೆ.

ದೇಶದ ಐಕ್ಯತೆಗೆ ಮಾತ್ರವಲ್ಲ, ನಾವೊಂದು ನಾಗರಿಕ, ಬಹು ಸಂಸ್ಕೃತಿಯ, ಪ್ರಜಾಸತ್ತಾತ್ಮಕ ದೇಶವಾಗಿ ಉಳಿಯಬೇಕಾದರೆ ಅದಕ್ಕೆ ಕೋಮುವಾದ ಒಂದು ದೊಡ್ಡ ಬೆದರಿಕೆಯಾಗುತ್ತದೆ ಎಂದು ಮನಗಂಡೇ ನಮ್ಮ ಸಂವಿಧಾನ ಕರ್ತೃಗಳು ಜಾತ್ಯಾತೀತತೆ ನಮ್ಮ ಪ್ರಜಾಸತ್ತಾತ್ಮಕ ರಾಜಕೀಯದ ಒಂದು 'ಮೂಲ ಚೌಕಟ್ಟು' ಎಂದರು. ಇದನ್ನು ಹಲವು ದಶಕಗಳ ನಂತರ ಸುಪ್ರಿಂ ಕೋರ್ಟ್ ಪುನರುಚ್ಚರಿಸಿತು.

ಭಾರತದ ಐಕ್ಯತೆಯ ಈ ಸ್ತಂಭಕ್ಕೇ ಈಗ ಮತ್ತೆ ಬೆದರಿಕೆ ಬಂದಿದೆ- ಮಹಾತ್ಮ ಗಾಂಧಿಯವರ ಜೀವ ನುಂಗಿದ ಅದೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ.

ಮಹಾತ್ಮರ ಹತ್ಯೆಯಿಂದ ಇಡೀ ದೇಶದಲ್ಲಿ ಆರ್.ಎಸ್.ಎಸ್. ಬಗ್ಗೆ ಹರಡಿದ ದ್ವೇಷದ ಹಿನ್ನೆಲೆಯಲ್ಲಿ ಅದರ ಮೇಲೆ ನಿಷೇಧ ಹೇರಲಾಯಿತು. ಈ ನಿಷೇಧದಿಂದ ತಪ್ಪಿಸಿಕೊಳ್ಳಲು ಆರ್.ಎಸ್.ಎಸ್. ತಾನೊಂದು ರಾಜಕೀಯೇತರವಾದ ಸಾಂಸ್ಕೃತಿಕ ಸಂಘಟನೆಯಾಗಿ ಉಳಿಯುವುದಾಗಿ ಭರವಸೆ ನೀಡಿತು. ಅಂದಿನಿಂದ ಅದು ತಾನೊಂದು ಸಾಂಸ್ಕೃತಿಕ ಸಂಘಟನೆಯೆಂದು ಮತ್ತೆ-ಮತ್ತೆ ಹೇಳಿಕೊಳ್ಳುತ್ತಿದೆ. ಆದರೆ ಇದು ಮುಗ್ಧರನ್ನು ವಂಚಿಸುವ ಒಂದು ತಂತ್ರವಷ್ಟೇ ಎಂದು ಈಗ ಎಲ್ಲರಿಗೂ ತಿಳಿದಿದೆ. ನಿಷೇಧ ತೆಗೆದ ಸಮಯದಲ್ಲಿ ಆರ್.ಎಸ್.ಎಸ್. ಒಂದು ರಾಜಕೀಯ ಸಂಘಟನೆಯನ್ನು ರಚಿಸಿತು. ಆಗ 'ಜನಸಂಘ' ಎಂಬ ಹೆಸರಿನಲ್ಲಿ ಆರಂಭಿಸಿದ ಆ ಪಕ್ಷ ಮೂರು ದಶಕಗಳ ನಂತರ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಎಂದು ಮರುಹುಟ್ಟು ಪಡೆಯಿತು. ಆರ್.ಎಸ್.ಎಸ್. ನಿಯಂತ್ರಣದ ಈ ಪಕ್ಷವೇ ಈಗ ಆಳುವ ಕೂಟದ ನೇತೃತ್ವ ವಹಿಸಿದ್ದು ಈ ಲೋಕಸಭಾ ಚುನಾವಣೆಗಳ ನಂತರ ಮತ್ತೆ ಅಧಿಕಾರಕ್ಕೆ ಬರಲು ಯತ್ನಿಸುತ್ತಿದೆ.

ಈ ಆರ್.ಎಸ್.ಎಸ್. ಹಲವಾರು ಸಂಘಟನೆಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ನಾವು ಅರಿಯದಿದ್ದರೆ ಅದಕ್ಕಿಂತ ಪ್ರಮಾದ ಬೇರೆ ಇಲ್ಲ. ವಿ.ಹೆಚ್.ಪಿ. ಭಜರಂಗದಳ ಮತ್ತು ಹಿಂದೂ ಜಾಗರಣ ಮಂಚ್, ವನವಾಸಿ ಕಲ್ಯಾಣ ಪರಿಷತ್, ಹಿಂದೂ ಮುನ್ನಣಿ ಇನ್ನೂ ಏನೇನೋ. ಇದರಿಂದಾಗಿಯೇ ಆರ್.ಎಸ್.ಎಸ್.ಗೆ ಹಲವು ಹೆಡೆಗಳ ವಿಷಸರ್ಪದ ಸ್ವರೂಪ ಬಂದಿದೆ. ಇವುಗಳಲ್ಲಿ ಒಂದೊಂದೂ ಬೇರೆ ಬೇರೆ ನಾಲಿಗೆಯಲ್ಲಿ ಮಾತನಾಡುತ್ತವೆ. ಕೆಲವೊಮ್ಮೆ ಪರಸ್ಪರ ವಿರುದ್ಧವಾಗಿಯೂ ಮಾತನಾಡುತ್ತವೆ. ಫ್ಯಾಸಿಸ್ಟ್ ಸಂಘಟನೆಗಳೆಲ್ಲಾ ಹೀಗೆಯೇ ಕೆಲಸಮಾಡುವುದು ಎಂಬುದನ್ನು ಮರೆಯಬಾರದು.

ಅಧಿಕಾರ ಲಾಲಸಿಗಳಿಗೆ ಕಾಣದ ನಗ್ನ ಸತ್ಯ

ಬಿಜೆಪಿಯ ಚುನಾವಣಾ ಪ್ರಣಾಳಿಕೆಯನ್ನು ಮೇಲು ಮೇಲಿಗೆ ನೋಡಿದರೂ ಇತ್ತೀಚಿನವರೆಗೆ ಎದ್ದು ಕಾಣುತ್ತಿದ್ದ ಸಂಗತಿಯೆಂದರೆ ಕೆಲವು ವಿವಾದಾತ್ಮಕ ಸಂಗತಿಗಳು - ದೇವಸ್ಥಾನ ಕಟ್ಟುವುದು, 370ನೇ ಕಲಮಿನ ರದ್ಧತಿ, ಸಮರೂಪದ ನಾಗರಿಕ ಸಂಹಿತೆ ಇತ್ಯಾದಿ. 1998ರ ಚುನಾವಣೆಯಲ್ಲಿ ಮಾತ್ರ ಇದು ಕಾಣಲಿಲ್ಲ. ನಂತರ ಬಿಜೆಪಿ ಮತ್ತು ಇತರ 12 ಪಕ್ಷಗಳು ಅಂಗೀಕರಿಸಿದ ರಾಷ್ಟ್ರೀಯ ಅಜೆಂಡಾದಲ್ಲೂ ಕಾಣಲಿಲ್ಲ. ಏಕೆಂದರೆ ಬೇರೆ ಪಕ್ಷಗಳೊಡನೆ ಮೈತ್ರಿ ಮಾಡಿಕೊಳ್ಳದೆ ಅಧಿಕಾರ ಗಿಟ್ಟಿಸುವುದು ಅಸಾಧ್ಯ ಎಂದು ಮನಗಂಡ ಬಿಜೆಪಿ ಮತ್ತು ಅದರ ರಿಮೋಟ್ ಕಂಟ್ರೋಲ್ ಆರ್.ಎಸ್.ಎಸ್. ಈ ಸಂಗತಿಗಳನ್ನು ಕೈಬಿಡಬೇಕಾಗಿ ಬಂತು.

ಆದರೆ ಇದೊಂದು ರಾಜಕೀಯ ಸ್ಟಂಟ್ ಎಂದು ಬೇಗನೇ ಎಲ್ಲರ ಅರಿವಿಗೆ ಬಂತು. ಅಡ್ವಾನಿ ಮತ್ತಿತರ ಬಿಜೆಪಿ ಘಟಾನುಘಟಿಗಳೇ ಸ್ವಂತ ಬಹುಮತ ಬರುವವರೆಗೆ ಇವನ್ನೆಲ್ಲಾ ಮುಂದೂಡಿದ್ದೇವೆ ಎಂದು ಒಪ್ಪಿಕೊಳ್ಳಬೇಕಾಗಿ ಬಂತು. ಇದು ದೇಶದ ಎಲ್ಲಾ ವಿಚಾರಶೀಲರ ಕಣ್ಣು ತೆರೆಸಿದೆ. ಬಿಜೆಪಿಯ ಜಾತ್ಯತೀತ ಎಂದು ಹೇಳಿಕ್ಕೊಳ್ಳುವ ಪಕ್ಷಗಳ ಕಣ್ಣನ್ನು ಮಾತ್ರ ತೆರೆಸಿಲ್ಲ. ಅಧಿಕಾರ ಲಾಲಸೆಯಿರುವ ಅವರಿಗೆ ಈ ನಗ್ನ ಸತ್ಯ ಕಾಣುತ್ತಿಲ್ಲವಷ್ಟೆ.

ಇದು ಬಿಜೆಪಿ-ಆರ್.ಎಸ್.ಎಸ್.ಗೆ ಕೇವಲ ಅಧಿಕಾರ ಹಂಚಿಕೊಳ್ಳುವ ಪ್ರಶ್ನೆಯೂ ಅಲ್ಲ. ಅವಕ್ಕಿಂತ ಹೆಚ್ಚಾಗಿ ಅವರಿಗೆ ಬೇಕಾದ್ದ ತಮ್ಮ ಕಬಂಧ ಬಾಹುಗಳನ್ನು ಎಲ್ಲೆಡೆಗೆ ಚಾಚಿ ಕೊನೆಗೆ ತಾನೇ ಏಕಾಂಗಿಯಾಗಿ ಅಧಿಕಾರ ಪಡೆದು ತಮ್ಮ "ಬಚ್ಚಿಟ್ಟ ಅಜೆಂಡಾ"ವನ್ನು ರಾಜಾರೋಷವಾಗಿ ಜಾರಿಗೆ ತರುವುದು.

ಈ ಗುರಿ ಸಾಧನೆಗೆ ಅದು ಇತರ ಪಕ್ಷಗಳನ್ನು ಛಿದ್ರಗೊಳಿಸುವ ಪ್ರಯತ್ನವನ್ನೂ ನಡೆಸಿದೆ. ಹಿಂದಿನ ಮಿತ್ರ ಬನ್ಸಿಲಾಲರ ಹೆಚ್.ವಿ.ಪಿ.ಯನ್ನು ಕಸದ

ಪುಟ 8 ಕ್ಕೆ

ಗ್ರಾಮೀಣ ಜನತೆಗೆ ಬಿಜೆಪಿ ಸರಕಾರ ನೀಡಿದ್ದೇನು?

ಸಂಕಟ, ಅಭದ್ರತೆ, ಆತ್ಮಹತ್ಯೆ

● ವಿಶ್ವ ವ್ಯಾಪಾರ ಸಂಸ್ಥೆಯ ಆದೇಶದಂತೆ ಆಹಾರ ಸಬ್ಸಿಡಿ ಕಡಿತ ಮಾಡಿ ರೇಶನ್ ವ್ಯವಸ್ಥೆ ಇನ್ನಷ್ಟು ಮೊಟಕು. ಅತ್ತ ಆಹಾರಧಾನ್ಯಗಳಲ್ಲಿ ಮುಕ್ತ ವ್ಯಾಪಾರಕ್ಕೆ ಅವಕಾಶ ನೀಡಿ ಲಾಭಕೋರರಿಗೆ ಪ್ರಯೋಜನ!

● ಆಹಾರ ಧಾನ್ಯಗಳ ತಲಾ ದೈನಂದಿನ ಬಳಕೆ 437 ಗ್ರಾಂನಿಂದ 450.9 ಗ್ರಾಂಗಿಳಿಯಿತು. ಬೇಳೆಕಾಳುಗಳ ತಲಾ ದೈನಂದಿನ ಬಳಕೆ 38.4 ಗ್ರಾಂ.ಗಳಿಂದ 35.2 ಗ್ರಾಂಗಳಿಗಿಯಿತು - ಒಂದೇ ವರ್ಷದಲ್ಲಿ!

● ಬಿಜೆಪಿ ಸರಕಾರ 30 ಲಕ್ಷ ಟನ್ ಗೋಧಿಯನ್ನು ಟನ್‌ಗೆ 120 ಡಾಲರುಗಳ ದರದಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಮಾಡುವ ನಿರ್ಧಾರ ಕೈಗೊಂಡಿತು. ಈ ಗೋಧಿಯ ಉತ್ಪಾದನಾ ಮತ್ತು ಸಾಗಣೆ ಖರ್ಚೇ ಟನ್ನಿಗೆ 190 ಡಾಲರುಗಳು. ಈ ನಷ್ಟವನ್ನು ಭರಿಸುವವರು ಗ್ರಾಮೀಣ ಜನಗಳೇ - ಕೇವಲ ವಿಶ್ವ ವ್ಯಾಪಾರ ಸಂಘಟನೆಯನ್ನು ಒಲಿಸಲಿಕ್ಕಾಗಿ ಈ ಕ್ರಮ. ಪ್ರಖ್ಯಾತ ಕೃಷಿ ತಜ್ಞ ಡಾ. ಎಂ.ಎಸ್. ಸ್ವಾಮಿನಾಥನ್ ಇಂತಹ ಧೋರಣೆ ಅನುಸರಿಸಬೇಡಿ ಎಂದು ವಾಜಪೇಯಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದರು.

ಗ್ರಾಮೀಣ ಜನಸಮೂಹಗಳು ವಾಜ ಪೇಯಿ ಸರಕಾರ ಹರಿಯಬಿಟ್ಟ ನೀತಿಗಳು ಉಂಟು ಮಾಡಿದ ಸಂಕಟ, ಅಭದ್ರತೆ ಹಾಗೂ ಆತ್ಮಹತ್ಯ ಗಳಿಂದಾಗಿ ಒಂದು ಪರ್ಯಾಯಕ್ಕಾಗಿ ಹತಾಶೆಯಿಂದ ನೋಡುತ್ತಿದ್ದಾರೆ. ಬಿಜೆಪಿ ಮತ್ತು ಕೋಮುವಾದಿ ಕೂಟ ಕೋಮು ಭಾವನೆಗಳನ್ನು ಬಡಿದೆಬ್ಬಿಸಿ ಅವರ ಗಮನವನ್ನು ತಮ್ಮ ಸಮಸ್ಯೆಗಳ ಪರಿಹಾರದಿಂದ ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿದೆ. ಇಂತಹ ಕೋಮುವಾದಿ ಕೂಟವನ್ನು ಮುಂಬರುವ ಚುನಾವಣೆ ಗಳಲ್ಲಿ ಸೋಲಿಸುವುದೇ ಗ್ರಾಮೀಣ ಜನಗಳ ಮುಂದಿರುವ ಏಕೈಕ ದಾರಿ.

● ಈರುಳ್ಳಿ ಕೆ.ಜಿ.ಗೆ 60 ರಿಂದ 120 ರೂ. ವರೆಗೆ ಮಾರಾಟವಾಗುತ್ತಿದ್ದಾಗ ಅದನ್ನು ಬೆಳೆದವರಿಗೆ ದೊರತದ್ದು 5 ರೂ. ಗಿಂತಲೂ ಕಮ್ಮಿ!

● ದೇಶದ 40% ಜನ ಹಸಿವಿನಿಂದ ಕಂಗಾಲಾಗಿದ್ದಾರೆ. ಆದರೆ ಆಹಾರ ಧಾನ್ಯಗಳ ದಾಸ್ತಾನು ತುಂಬಿತುಳುಕುತ್ತಿದೆ ಎಂದು ಸರ್ಕಾರವೇ ಕೊಚ್ಚಿಕೊಳ್ಳುತ್ತಿದೆ.

● ಬಜೆಟ್‌ನ ಮೊದಲು ಗೋಧಿ, ಅಕ್ಕಿ, ಸಕ್ಕರೆ, ಪೆಟ್ರೋಲಿಯಂ ಪದಾರ್ಥಗಳ ಬೆಲೆಯೇರಿಸಿ ಗ್ರಾಮೀಣ ಜನಗಳಿಂದ 3200 ಕೋಟಿ ರೂ.ಗಳ ಲೂಟಿ! ನಂತರ ರೈಲ್ವೆ ಮತ್ತು ಅಂಚೆದರಗಳ ಹೆಚ್ಚಳ

● ಸಕ್ಕರೆಯ ಭಾರೀ ದಾಸ್ತಾನು ಇದ್ದರೂ ಭಾರೀ ಪ್ರಮಾಣದಲ್ಲಿ ಆಮದು. ಇದರಿಂದ ಕಬ್ಬು ಬೆಳೆಯುವ ರೈತರಿಗೆ ಲಾಭಕರ ಬೆಲೆಯಿಂದ ವಂಚನೆ.

● ಹೊಸ ಆಮದುರಫ್ತು ನೀತಿಯಲ್ಲಿ 894 ಐಟಂಗಳನ್ನು ಮುಕ್ತ ಆಮದು ಪಟ್ಟಿಯಲ್ಲಿ ಹಾಗೂ 419ನ್ನು ವಿಶೇಷ ಆಮದು ಪಟ್ಟಿಯಲ್ಲಿ ಸೇರಿಸಲಾಯಿತು. ಇದರಿಂದ ರಫ್ತು ಹೆಚ್ಚಿ ರೈತರಿಗೇ ಪ್ರಯೋಜನ ಎಂಬ ಸರಕಾರದ ಸಮರ್ಥನೆ, ಹುಸಿಯಾಗಿದೆ. ಏಕೆಂದರೆ ಈ ನೀತಿಯಿಂದಾಗಿ ***ಕಳೆದೆರಡು ವರ್ಷಗಳಲ್ಲಿ ರಫ್ತು ಇಳಿದಿದೆ, ಮುಖ್ಯವಾಗಿ ಬಾಸ್ಮತಿ ಅಕ್ಕಿ, ಹೂವು ಉದ್ದಿಮೆ, ಮಶ್ರೂಮ್ ಮತ್ತು ಸಾಗರ ಉತ್ಪನ್ನಗಳಿಗೆ ಭಾರೀ ಏಟು ಬಿದ್ದಿದೆ*** ಎಂದು ರಫ್ತು ಸಂಘಟನಗಳ ಒಕ್ಕೂಟವೇ ಹೇಳಿದೆ.

● ಕೃಷಿ ಮಾರುಕಟ್ಟೆಯಲ್ಲಿ ಸರಕಾರದ ಮಧ್ಯಪ್ರವೇಶವನ್ನು ನಿಲ್ಲಿಸಿದ್ದರಿಂದ ರೈತರು ನೀತಿಬಾಹಿರ ವ್ಯಾಪಾರಿಗಳ, ಕಾಳಸಂತೆಕೋರರ ಮರ್ಜಿಯಲ್ಲಿ ದೇಶಾದ್ಯಂತ ಮುಖ್ಯವಾಗಿ ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ತಾನ, ಹರ್ಯಾಣ ಮತ್ತು ಪಂಜಾಬಿನಲ್ಲಿ ಹತ್ತಿ, ಚಹಾ, ರಬ್ಬರು ಇತ್ಯಾದಿ ***ವಾಣಿಜ್ಯ ಬೆಳೆಗಾರರಲ್ಲಿ ಎರಡೂವರೆ ಸಾವಿರ ಮಂದಿ ಆತ್ಮಹತ್ಯೆ ಮಾಡಿಕೊಂಡರು.***

● 1998-99 ರಲ್ಲಿ ಯೋಜನಾ ಬಾಬ್ತಿನಲ್ಲಿ ಗ್ರಾಮೀಣ ಜನಗಳಿಗೆ ಬದುಕಲು ಒಂದು ಅವಕಾಶವಾದರೂ ಕೊಡುವ ಅಭಿವೃದ್ಧಿ ಚಟುವಟಿಕೆಗಳಿಗೆ ಒಟ್ಟಾರೆಯಾಗಿ 15.9% ಕಡಿತಮಾಡಲಾಯಿತು. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ 28.1% ಕಡಿತ, ವಿದ್ಯುತ್‌ಗಾಗಿ ಕೊಡುವ ಹಣದಲ್ಲಿ 20.3% ಕಡಿತ, ಸಾರಿಗೆಯಲ್ಲಿ 7.7% ಕಡಿತ, ನೀರಾವರಿ ಮತ್ತು ನೆರೆ ಹತೋಟಿ ಬಾಬ್ತಿನಲ್ಲಿ 7.7% ಹಾಗೂ ಗ್ರಾಮೀಣ ಅಭಿವೃದ್ಧಿ ಬಾಬ್ತಿನಲ್ಲಿ 5.5ಅ ಕಡಿತ. **ಸಣ್ಣ ಉತ್ಪಾದಕರನ್ನು ನಾಶ ಮಾಡಿ ಸಗಟು ವ್ಯಾಪಾರಿಗಳು, ಕಾಳಸಂತೆಕೋರರಿಗೆ ನೆರವಾಗುವುದೇ ಬಿಜೆಪಿಯ ಧೋರಣೆಯಿದ್ದಂತಿದೆ.**

● 1997-98 ರಲ್ಲಿ ಗ್ರಾಮೀಣ ಸಾಲದ ಪ್ರಮಾಣ 1% ದಷ್ಟು ಇಳಿಯಿತು. ಈಗ ರಿಝರ್ವ್ ಬ್ಯಾಂಕ್ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಥವಾ ನಬಾರ್ಡ್‌ನಲ್ಲಿನ ತನ್ನ ಶೇರನ್ನು ಮಾರಾಟ ಮಾಡಿ ಈ ನಬಾರ್ಡನ್ನು ಖಾಸಗೀಕರಿಸುವ ಒಂದು ಯೋಜನೆಯನ್ನು ಈ ಸರಕಾರ ಮುಂದಿಟ್ಟಿದೆ. ಇದು ಮುಖ್ಯವಾಗಿ ತಟ್ಟುವುದು ಐ.ಆರ್. ಡಿ.ಪಿ. ಯೋಜನೆಗಳನ್ನು. ***ಈ ರೀತಿ ಬಿಜೆಪಿ ರೈತರನ್ನು ಮತ್ತೆ ಲೇವಾದೇವಿಗಾರರ ಕಪಿಮುಷ್ಟಿಗೆ ತಳ್ಳುತ್ತಿದೆ.*** ಇತ್ತೀಚಿನ ಪಂಜಾಬಿನಲ್ಲಿನ ಒಂದು ಅಧ್ಯಯನದ ಪ್ರಕಾರ ರೈತರು ತಮ್ಮ ಬೆಳೆಗಳನ್ನು ಅರ್ಧ ಬೆಲೆಗೆ ಮಾರಬೇಕಾಗಿ ಬಂದಿದೆ. ಕೃಷಿಸಾಲ ಗಳಲ್ಲಿ 19000 ಕೋಟಿ ರೂ.ಗಳು ಮಾತ್ರ ಬ್ಯಾಂಕ್ ಇತ್ಯಾದಿ ಗಳಿಂದ ಬರುತ್ತಿದ್ದು 38000 ಕೋಟಿ ರೂ.ಗಳು ಖಾಸಗಿ ಲೇವಾದೇವಿಗಾರರಿಂದ ಬಂದಿದೆ - 40% ದವರೆಗೂ ಬಡ್ಡಿದರದಲ್ಲಿ.

● ಬಿಜೆಪಿ ಕೂಡಾ ಭೂಮಿತಿ ಶಾಸನಗಳನ್ನು ಜಾರಿಗೆ ತಂದು ಹೆಚ್ಚುವರಿ ಭೂಮಿಯನ್ನು ಭೂಹೀನರಲ್ಲಿ ಹಂಚುವ ಭರವಸೆ ನೀಡಿತ್ತು. ಆದರೆ ಮಾಡಿದ್ದು ತದ್ವಿರುದ್ಧ. ಕೃಷಿ ವಲಯದಲ್ಲಿ 600 ಕೂ ಹೆಚ್ಚು ವಿದೇಶಿ ಹಣ ಹೂಡಿಕೆ ಪ್ರಸ್ತಾವಗಳಿಗೆ ಮಂಜೂರಾತಿ ನೀಡಿ ಸಾವಿರಾರು ಎಕ್ರೆ ಜಮೀನು ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಹೋಗುತ್ತಿದೆ. ***ಭೂಹೀನರು ಜಮೀನು ಪಡೆಯುವ ಬದಲು ಭೂಮಿಯಿದ್ದ ರೈತರೇ ಅವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಿ ಅಥವಾ ಗೇಣಿಗೆ ಕೊಟ್ಟು ಭೂಹೀನ ಕೃಷಿ ಕಾರ್ಮಿಕರಾಗುತ್ತಿದ್ದಾರೆ.***

● ಹಿಂದಿನ ಸರ್ಕಾರಗಳು ಕೃಷಿಕೂಲಿಕಾರರ ಸಮಗ್ರ ಮಸೂದೆಯನ್ನು ಸಂಸತ್ತಿನಲ್ಲಿಡುವ ಭರವಸೆ ಭೂಮಾಲಕ ವಿರೋಧದಿಂದಾಗಿ ಪಾಸು ಮಾಡಿಸಿಕೊಳ್ಳುತ್ತಿರಲಿಲ್ಲ. ಆದರೆ ಬಿಜೆಪಿ ಸರಕಾರ ಈ ಮಸೂದೆಗೆ ತನ್ನ ವಿರೋಧವನ್ನೇ ತೋರಿಸಿ ಅದನ್ನು ಮೂಲೆಗೆ ಹಾಕಿ ಗ್ರಾಮೀಣ ಕಡು ಬಡವರ ಬಗ್ಗೆ ತನ್ನ ತಿರಸ್ಕಾರವನ್ನು ಪ್ರದರ್ಶಿಸಿದೆ.

● ರೈತರ ಬೆಳೆ ಹಾಗೂ ಪಶುಗಳಿಗೆ ಸಮಗ್ರ ವಿಮೆಯ ಭರವಸೆ ನೀಡಿದ ಸರಕಾರ 13 ತಿಂಗಳ ನಂತರ ಲೋಕಸಭೆಯಲ್ಲಿ ವಿಶ್ವಾಸಮತ ಕಳಕೊಂಡ ನಂತರ ಚುನಾವಣೆ ಘೋಷಿಸಿದ ಒಂದು ಸ್ಕೀಮನ್ನು ನಂತರ ಮುಂದಿಟ್ಟಿತು. ಅಂದರೆ ಅದನ್ನು ಜಾರಿಗೆ ತರಬೇಕಾದ್ದು ಮುಂದಿನ ಸರ್ಕಾರ! ಅದರಲ್ಲೂ ರೈತರಿಗೆ ಹೊಸ ಪ್ರಯೋಜನಗಳಿಲ್ಲ. ಪ್ರೀಮಿಯಂ ದರ ಹೆಚ್ಚಿಸಲಾಗಿದೆ, ಜಾರಿಯ ಜವಾಬ್ದಾರಿಯನ್ನು ರಾಜ್ಯ ಸರಕಾರಗಳಿಗೆ ವಹಿಸಲಾಗಿದೆ.

● ಪೇಟೆಂಟ್ ವಿಷಯದಲ್ಲಿ ತನ್ನ ಹಿಂದಿನ ವಿರೋಧಿ ನಿಲುವು ಬಿಟ್ಟು, ತಿಪ್ಪರಲಾಗ ಹಾಕಿ, ಕಾನೂನು ಆಯೋಗದ ಅಭಿಪ್ರಾಯವನ್ನು ಬದಿಗೊತ್ತಿ ವಿದೇಶಿ ಕಂಪನಿಗಳಿಗೆ ಲಾಭಕೊಡುವ ವಿಶ್ವ ವ್ಯಾಪಾರ ಸಂಘಟನೆಯ ದಾರಿಯನ್ನು ಅನುಸರಿಸಿದೆ.

● ***ಗಾಯದ ಮೇಲೆ ಬರೆಯೆಂಬಂತೆ ಟರ್ಮಿನೇಟರ್ ಬೀಜಗಳ ಹೊಸ ತಂತ್ರಜ್ಞಾನಕ್ಕೆ ಅವಕಾಶ ನೀಡಿ ರೈತ ಪ್ರತಿವರ್ಷ ಬೀಜಕ್ಕಾಗಿ ವಿದೇಶಿ ಕಂಪನಿಗಳನ್ನೇ ಅವಲಂಬಿಸುವಂತೆ ಮಾಡಿರುವ ಸರ್ಕಾರ ಇದು.*** ಅಮೇರಿಕದ ಮಾನ್ಸಂಟೋ ಕಂಪನಿ ಈಗಾಗಲೇ ಭಾರತದ ಹೈಬ್ರಿಡ್ ಬೀಜಗಳ ಕಂಪನಿ ಮಹಿಕೋವನ್ನು ಖರೀದಿಸಿದೆ!

ಒಟ್ಟಿನಲ್ಲಿ ಗ್ರಾಮೀಣ ಜನಸಮೂಹಗಳು ವಾಜ ಪೇಯಿ ಸರಕಾರ ಹರಿಯಬಿಟ್ಟ ನೀತಿಗಳು ಉಂಟು ಮಾಡಿದ ಸಂಕಟ, ಅಭದ್ರತೆ ಹಾಗೂ ಆತ್ಮಹತ್ಯ ಗಳಿಂದಾಗಿ ಒಂದು ಪರ್ಯಾಯಕ್ಕಾಗಿ ಹತಾಶೆಯಿಂದ ನೋಡುತ್ತಿದ್ದಾರೆ. ಬಿಜೆಪಿ ಮತ್ತು ಕೋಮುವಾದಿ ಕೂಟ ಕೋಮು ಭಾವನೆಗಳನ್ನು ಬಡಿದೆಬ್ಬಿಸಿ ಅವರ ಗಮನವನ್ನು ತಮ್ಮ ಸಮಸ್ಯೆಗಳ ಪರಿಹಾರದಿಂದ ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿದೆ. ಇಂತಹ ಕೋಮುವಾದಿ ಕೂಟವನ್ನು ಮುಂಬರುವ ಚುನಾವಣೆ ಗಳಲ್ಲಿ ಸೋಲಿಸುವುದೇ ಗ್ರಾಮೀಣ ಜನಗಳ ಮುಂದಿರುವ ಏಕೈಕ ದಾರಿ.

......ವಿಷ ಸರ್ಪವನ್ನು ಕೊಲ್ಲಬೇಕಾಗಿದೆ

ಪುಟ 7 ರಿಂದ

ಬುಟ್ಟಿಗೆ ಎಸೆದು ಚೌತಾಲರಿಗೆ ಬೆಂಬಲಕೊಟ್ಟಿತು. ತಾನು ಎತ್ತುತ್ತಾ ಬಂದ 'ಪರಕೀಯರು' ಎಂಬ ಪ್ರಶ್ನೆಯನ್ನು ಶರದ್ ಪವಾರ್ ಕೂಡಾ ಪ್ರತಿಧ್ವನಿಸುವಂತೆ ಮಾಡಿತು. ಜಾರ್ಜ್ ಫರ್ನಾಂಡೀಸ್, ಹೆಗ್ಡೆ ಜತೆ ಕೂಡಿ ಜನತಾದಳ ಒಡೆಯುವಂತೆ ಮಾಡಿತು. ತನ್ನ ಹಿಂದಿನ ಮಿತ್ರ ಪಕ್ಷ ಎಐಎಡಿಎಂಕೆ ನೇತೃತ್ವದ ರಂಗವನ್ನು ಛಿದ್ರಗೊಳಿಸಲು ಯತ್ನಿಸಿತು ಎಂದು ಈ ಮೊದಲೇ ಹೇಳಿದ ಆ ಪಕ್ಷದ ಪ್ರಧಾನ ಕಾರ್ಯದರ್ಶಿ ಜಯಲಲಿತಾರ ಆರೋಪ ಬುಡವಿಲ್ಲದ್ದೇನಲ್ಲ.

ಮತ್ತೆ ಮತ್ತೆ ಬಯಲಾಗಿದೆ ನಿಜ ದುಷ್ಟ ರೂಪ

ಬಿಜೆಪಿ ಅಧಿಕಾರ ಗಿಟ್ಟಿಸಿದರೆ ಏನಾಗಬಹುದು ಎಂಬುದರ ಸೂಚನೆ ಈಗಾಗಲೇ ಸಿಕ್ಕಿದೆ. ಮುಸ್ಲಿಂ-ವಿರೋಧಿ ಹತ್ಯಾಕಾಂಡಗಳಂತೂ ಮುಂದುವರೆದಿವೆ. ಅಹ್ಮದಾಬಾದ್ ಗಲಭೆಗಳು ಇದಕ್ಕೆ ಇತ್ತೀಚಿನ ಉದಾಹರಣೆ. ಇದಕ್ಕೆ ಪೂರಕವಾಗಿ ಕಳೆದ ಒಂದು ವರ್ಷದಲ್ಲಿ ದೇಶ ಒಂದು ಅತಿ ಸಣ್ಣ ಅಲ್ಪಸಂಖ್ಯಾತ ಗುಂಪಾದ ಕ್ರಿಶ್ಚಿಯನ್ನರ ಮೇಲೂ ಬರ್ಬರ ಧಾಳಿಗಳ ಸರಣಿಯನ್ನೇ ಕಂಡಿದೆ. ಬಿಜೆಪಿ ಈ ಧಾಳಿಗಳನ್ನು, ಅತ್ಯಾಚಾರಗಳನ್ನು ಖಂಡಿಸಿಲ್ಲ ಮಾತ್ರವಲ್ಲ, ಅದನ್ನೆಸಗಿದವರನ್ನು ರಕ್ಷಿಸಲು, ಆ ಅಪರಾಧಗಳನ್ನು ಮುಚ್ಚಿಹಾಕಲೂ ಪ್ರಯತ್ನಿಸಿವೆ. ಒರಿಸ್ಸಾದ ಸ್ಟೇನ್ಸ್ ಹತ್ಯೆ ಪ್ರಕರಣ ಇದಕ್ಕೊಂದು ಉದಾಹರಣೆ.

ನಂತರ ಪಠ್ಯ ಪುಸ್ತಕಗಳನ್ನು ಬದಲಿಸಿ, ಚಾರಿತ್ರಿಕ ಸಂಗತಿಗಳನ್ನು ವಿರೂಪಗೊಳಿಸಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ಸಂಶೋಧನಾ ಸಂಸ್ಥೆಗಳಲ್ಲಿ ಆರ್.ಎಸ್.ಎಸ್. ಮಂದಿಯನ್ನು ತುರುಕಿಸಿ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಕೋಮುಗ್ರಸ್ತಗೊಳಿಸುವ ಪ್ರಯತ್ನ ನಡೆಯಿತು.

ಬಾಳಾಠಾಕ್ರೆ ದೇಶದ ಸಂವಿಧಾನವನ್ನು ಜನತಾ ಪ್ರಾತಿನಿಧ್ಯ ಶಾಸನವನ್ನು ಉಲ್ಲಂಘಿಸಿದ್ದಕ್ಕೆ ಆತನ ಮತದಾನದ ಹಕ್ಕನ್ನು ಆರು ವರ್ಷಗಳ ಕಾಲ ರದ್ದು ಮಾಡುವ ನಿರ್ಣಯ ಬಂದಾಗ ಬಿಜೆಪಿಯ ನಿಜ ಸ್ವರೂಪ ಇನ್ನಷ್ಟು ಸ್ಪಷ್ಟವಾಯಿತು. ಹಲವು ಪಕ್ಷಗಳು ಈ ನಿರ್ಣಯವನ್ನು ಸ್ವಾಗತಿಸಿದವು. ಆದರೆ ಬಿಜೆಪಿ ತುಟಿಪಿಟಕ್ಕೆನ್ನಲಿಲ್ಲ. ಅಷ್ಟೇ ಅಲ್ಲ, ಈ ಕ್ರಮ ಕೈಗೊಳ್ಳಬೇಕೆಂಬ ಚುನಾವಣಾ ಆಯೋಗದ ಶಿಫಾರಸಿನ ಬಗ್ಗೆ ಎಂಟು ತಿಂಗಳ ಕಾಲ ಸುಮ್ಮನೆ ಕೂತಿತು. ಇದರಿಂದ ಠಾಕ್ರೆಗೆ ಸಲ್ಲಬೇಕಾಗಿದ್ದ 6 ವರ್ಷಗಳ ಈ ಶಿಕ್ಷೆ 17 ತಿಂಗಳಿಗೆ ಇಳಿಯಬೇಕಾಯಿತು. ಈ ಮೂಲಕ ತನ್ನ ಮಿತ್ರರು ಯಾರು ಎಂದು ಅದು ತೋರಿಸಿಕೊಂಡಿತು.

ಬಿಜೆಪಿ ದಾರಿಯೂ ಸುಗಮವೇನಲ್ಲ

ಆದರೂ ಸಂಪೂರ್ಣ ಅಧಿಕಾರ ಪಡೆಯುವ ಬಿಜೆಪಿ ದಾರಿ ಅಷ್ಟೊಂದು ಸುಗಮವಲ್ಲ. ಅದಕ್ಕೆ ಹಲವು ಕಾರಣಗಳಿವೆ. ಎಲ್ಲಕ್ಕೂ ಮೊದಲ ಕಾರಣವೆಂದರೆ ಈ ದೇಶದಲ್ಲಿ ಸೌಹಾರ್ದ ಮತ್ತು ಜಾತ್ಯಾತೀತತೆಯ ಒಂದು ದೀರ್ಘ ಪರಂಪರೆಯಿದೆ. ಜನಗಳ ನಡುವೆ ಅದು ಬಲವಾಗಿ ಬೇರು ಬಿಟ್ಟಿದೆ. ಆ ಪರಂಪರೆಯನ್ನು ಧ್ವಂಸ ಮಾಡುವುದು ಅಷ್ಟು ಸುಲಭವಲ್ಲ.

ಅಲ್ಲದೆ ಸಧ್ಯದಲ್ಲಿ ಕೂಡಾ ಬಿಜೆಪಿ ನೇತೃತ್ವದ ಕೂಟ ತೀವ್ರ ಅಲ್ಲೋಲ-ಕಲ್ಲೋಲ ಎದುರಿಸುತ್ತಿದೆ. ಅದನ್ನು ಶಾಶ್ವತವಾಗಿ ಪರಿಹರಿಸುವುದಂತೂ ಆ ಪಕ್ಷಕ್ಕೆ ಸುಲಭದ ಕೆಲಸವಲ್ಲ. ಏಕೆಂದರೆ ಬಿಜೆಪಿಯ ಮಿತ್ರ ಪಕ್ಷಗಳಿಗೆ ತಮ್ಮ ಕಾರ್ಯಕರ್ತರ ನಡುವೆ ಈ ದೊಡ್ಡಣ್ಣನೊಂದಿಗೆ ತಮ್ಮ ಮೈತ್ರಿಯನ್ನು ಸಮರ್ಥಿಸಿಕೊಳ್ಳಲು ಬಹಳ ಕಷ್ಟವಾಗುತ್ತಿದೆ. ಸುಮಾರಾಗಿ ಪ್ರತಿಯೊಂದು ರಾಜ್ಯದಲ್ಲೂ ಈ ಮಿತ್ರಪಕ್ಷಗಳಿಗೆ ತಮ್ಮ ಜನಬೆಂಬಲ ಕಡಿತಗೊಳ್ಳುವ ಭಯವಿದೆ. ಬಿಜೆಪಿಯೊಂದಿಗೆ ಮೈತ್ರಿ ವರವೋ ಶಾಪವೋ ಎಂದು ಅವರು ಯೋಚಿಸುವಂತಾಗಿದೆ. ಆಂಧ್ರಪ್ರದೇಶದಲ್ಲಿ ತೆಲುಗುದೇಶಂ ಪಕ್ಷದ ಮುಜುಗರ ಇದಕ್ಕೊಂದು ಉತ್ತಮ ಉದಾಹರಣೆ. ಬಿಜೆಪಿ ಸರಕಾರದ ಧೋರಣೆಗಳಿಂದ ಅಸಂತೃಪ್ತಿ ಹೆಚ್ಚಿದಾಗ ಇದು ಮಾಯವಾಗುವ ಬದಲು ಇನ್ನಷ್ಟು ಹೆಚ್ಚುತ್ತದೆ.

ಈ ಮಿತ್ರಪಕ್ಷಗಳು ಕೇಳುವ ಹೆಚ್ಚು ಸೀಟುಗಳ ಬೇಡಿಕೆಯನ್ನು ಪೂರೈಸುವುದು ಬಿಜೆಪಿಗೆ ಒಂದು ಹಂತದ ನಂತರ ಸಾಧ್ಯವಿಲ್ಲ, ಏಕೆಂದರೆ ತನ್ನ ಪ್ರಾಬಲ್ಯ ಮೆರೆಸಲು ಅದಕ್ಕೆ ಹೆಚ್ಚೆಚ್ಚು ಸೀಟುಗಳು ಬೇಕು. ಪಶ್ಚಿಮ ಬಂಗಾಳದಲ್ಲಿ ಬಾಂಕುರಾ ಕ್ಷೇತ್ರ ಕುರಿತಂತೆ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಕಿತ್ತಾಟಕ್ಕೆ ಇದೇ ಕಾರಣ. ಉತ್ತರ ಪ್ರದೇಶದಲ್ಲೂ, ಲೋಕತಾಂತ್ರಿಕ ಕಾಂಗ್ರೆಸ್ ಮತ್ತು ಜೆ.ಬಿ.ಎಸ್.ಪಿ. ಯ ಇಂತಹ ಬೇಡಿಕೆಗಳು ಬಿಜೆಪಿ ಮುಖಂಡರ ನಿದ್ದೆಗೆಡಿಸಿವೆ. ಇವೆಲ್ಲಾ ಕಷ್ಟಗಳನ್ನು ಹೇಗೋ ಮೀರಿಸಿ ನಿಂತರೂ ಇಂದಲ್ಲ ನಾಳೆ ಇಂತಹ ಭಿನ್ನಾಭಿಪ್ರಾಯಗಳು ತಮ್ಮ ಬಲಿ ಪಡೆದೇ ಪಡೆಯುತ್ತವೆ.

ಅತ್ತ ಆಂತರಿಕವಾಗಿಯೂ ಮುಖಂಡರ ಅಧಿಕಾರ ದಾಹದಿಂದಾಗಿ ಕಿತ್ತಾಟಗಳು ಬಿಜೆಪಿಯನ್ನು ಬಾಧಿಸುತ್ತಿವೆ. ಇದು ಎಲ್ಲರಿಗೂ ಸ್ಪಷ್ಟ. ಗುಜರಾತಿನಲ್ಲಿ ವಿ.ಹೆಚ್.ಪಿ. ಅಲ್ಲಿಯ ಮುಖ್ಯಮಂತ್ರಿ ಕೇಶೂಭಾಯಿ ಪಟೇಲ್ ವಿರುದ್ಧ ಚಾಟಿ ಬೀಸುತ್ತಿದೆ.

ಈಗ ಎನ್.ಡಿ.ಎ. ಯೊಳಗೆ ಜನತಾದಳ ಬಣದ ಪ್ರವೇಶ ಬಿಜೆಪಿ ಮುಖಂಡರಿಗೆ ಮತ್ತೊಂದು ತಲೆನೋವು ತಂದಿದೆ. ಕರ್ನಾಟಕ, ಬಿಹಾರದಲ್ಲಿ ಬಿಜೆಪಿ ಘಟಕಗಳ ಬಲವಾದ ವಿರೋಧ ಒಂದೆಡೆಯಾದರೆ 'ಹಿಂದಿನ ಸಮಾಜವಾದಿ ಶಕ್ತಿಗಳ' ಕ್ರೋಢೀಕರಣದ ಹೆಸರಲ್ಲಿ ಜನತಾದಳವನ್ನು ಒಡೆಯುವ ವಂಚಕ ಕೃತ್ಯ ನಡೆಸಿದವರು ಅದಕ್ಕೆ ತಕ್ಕ ಪ್ರತಿಫಲ ಪಡೆಯದೆ ಸುಮ್ಮನಿರುವಂತಿಲ್ಲ. ಸಮತಾಪಾರ್ಟಿ, ಲೋಕಶಕ್ತಿಯ ವಿಲೀನ ಎನ್.ಡಿ.ಎ. ದೊಳಗೆ ತಮ್ಮ ಚೌಕಾಶಿ ಸಾಮರ್ಥ್ಯ ಹೆಚ್ಚಿಸಿಕೊಳ್ಳಲಿಕ್ಕಾಗಿಯೇ. ಇದು ಬಿಜೆಪಿಗೆ ಹೇಗೆ ತಾನೇ ರುಚಿಸೀತು?

ಕಾರ್ಗಿಲ್ ಬಂಡವಾಳ

ಆದ್ದರಿಂದಲೇ ಬಿಜೆಪಿ ಕಾರ್ಗಿಲ್ ಕದನವನ್ನೇ ಬಂಡವಾಳವಾಗಿಸಿಕೊಳ್ಳಲು ಶ್ರಮಿಸುತ್ತಿದೆ. ಇಲ್ಲೂ ಆ ಪಕ್ಷದ ನಿಜವಾದ ತತ್ವವೇನು ಎಂಬುದು ಜನಗಳಿಗೆ ಗೊತ್ತಿಲ್ಲದಿಲ್ಲ. ಕಾರ್ಗಿಲ್ ವಿಜಯಕ್ಕೆ ಭಾರತೀಯ ಸಶಸ್ತ್ರ ಪಡೆಗಳ ಶೌರ್ಯ, ಸಾಹಸ, ದೃಢ ನಿರ್ಧಾರವೇ ಕಾರಣ ಎಂದು ಜನರಿಗೆ ಚೆನ್ನಾಗಿ ಗೊತ್ತು. ಬಿಜೆಪಿಗೆ ಇದರ ಕೀರ್ತಿ ಸಲ್ಲುವಂತಿಲ್ಲ. ಏಕೆಂದರೆ, ವಾಸ್ತವವಾಗಿ ದೇಶದ ಭದ್ರತೆಯನ್ನು ಕಾಪಾಡುವಲ್ಲಿ ಅದರ ಅಸಮರ್ಥತೆಯೂ ಇಲ್ಲಿ ಸಾಬೀತಾಗಿದೆ.

ಸ್ಥಿರತೆ ಕೊಡುತ್ತೇನೆಂದ ಅದರ ಹೇಳಿಕೆಗಳು ಬರೀ ಟೊಳ್ಳು ಎಂದು ಬಯಲಾಗಿದೆ. ಹರ್ಯಾಣದಲ್ಲಿ ಬನ್ಸಿಲಾಲ್ ಸರಕಾರವನ್ನು ಅಸ್ಥಿರಗೊಳಿಸಿದ್ದು ಬಿಜೆಪಿಯೇ. ತನಗೆ ಬೇಕಾದ್ದು ವಸೂಲಿಯಾಗದಿದ್ದರೆ ಚೌತಾಲಾ ಸರಕಾರವನ್ನು ಅದು ಅಸ್ಥಿರಗೊಳಿಸುವುದಿಲ್ಲ ಎಂದು ಹೇಳಲಾಗದು.

ಇನ್ನು ಸ್ಥಿರತೆಯೆಂಬುದು ಬಿಜೆಪಿ ಹೇಳ ಬಯಸುವಂತೆ ಕೇವಲ ಸಂಖ್ಯಾಬಲವಲ್ಲ. ಈ ಹಿಂದೆಯೂ ಕೇಂದ್ರದಲ್ಲಿಯೂ, ರಾಜ್ಯದಲ್ಲಿಯೂ ಭಾರೀ ಸಂಖ್ಯಾಬಲ ಇದ್ದ ಸರಕಾರಗಳು ಸ್ಥಿರತೆ ಕೊಡುವಲ್ಲಿ ವಿಫಲವಾದ ಹಲವು ಉದಾಹರಣೆಗಳಿವೆ. ಸ್ಥಿರತೆ ಇರುವುದು ಧೋರಣೆಗಳಲ್ಲಿ. ಜನಗಳು ಎದುರಿಸುವ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಅನಕ್ಷರತೆ, ಶಿಕ್ಷಣ, ವಸತಿ, ಸಾಕಷ್ಟು ಆರೋಗ್ಯ ಹಾಗೂ ಕುಡಿಯುವ ನೀರಿನ ಅಭಾವ ಇತ್ಯಾದಿಗಳನ್ನು ಪರಿಹರಿಸುವತ್ತ ರೂಪಿಸುವ ಧೋರಣೆಗಳಿಂದ ಮಾತ್ರವೇ ಸ್ಥಿರತೆ ಸಾಧ್ಯ. ಈ ದೃಷ್ಟಿಯಿಂದ ನೋಡಿದಾಗಲಂತೂ ಬಿಜೆಪಿ ಧೋರಣೆಗಳು ತಮ್ಮ ದಿವಾಳಿಕೋರತನವನ್ನು ದೃಢಪಡಿಸಿವೆ, ಅಸಂತೃಪ್ತಿಯನ್ನು ಉಂಟುಮಾಡಿ ಆ ಮೂಲಕ ಅಸ್ಥಿರತೆಯನ್ನು ಹುಟ್ಟು ಹಾಕಿವೆ. ಏಕೆಂದರೆ ಬಿಜೆಪಿಯ ಈ ಧೋರಣೆಗಳು ಜನಸಾಮಾನ್ಯರನ್ನು ಸುಲಿದು ದೇಶೀ-ವಿದೇಶಿ ಉಳ್ಳವರಿಗೇ ಇನ್ನಷ್ಟು ಪ್ರಯೋಜನ



ಪುಟ 9 ಕ್ಕೆ

ಉಳ್ಳಾಲ ಕ್ಷೇತ್ರ

ಅಬ್ಬಕ್ಕ ರಾಣಿಯ ಸಮರಶೀಲ ನಾಡಿನಲ್ಲಿ.......

ಪೋರ್ಚುಗೀಸ್ ಸಾಮ್ರಾಜ್ಯಶಾಹಿಗಳ ವಿರುದ್ಧ ಸೆಟೆದು ನಿಂತು ಕಾದಾಡಿದ ವೀರವನಿತೆ ರಾಣಿ ಅಬ್ಬಕ ದೇವಿಯ ನಾಡು ಉಳ್ಳಾಲವು ತನ್ನ ಒಡಲಿನೊಳಗೆ ಸಮರಶೀಲತೆಯ ಪರಂಪರೆಯನ್ನು ಹುದುಗಿಸಿಕೊಂಡಿದೆ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಮುಂದುವರಿಕೆಯಾಗಿ ಸಮರಶೀಲ ರೈತಾಪಿ ವರ್ಗ ಹೋರಾಟ, ದುಡಿಯುವ ವರ್ಗದ ಚಳುವಳಿಯನ್ನು ವಿಕಸನಗೊಳಿಸಿಕೊಂಡು ಬಂದ ಉಳ್ಳಾಲ ಪ್ರದೇಶದ ಈ ಬಾರಿಯ ಚುನಾವಣ ಹೋರಾಟವು ಹಲವು ರೀತಿಗಳಲ್ಲಿ ವೈಶಿಷ್ಟ್ಯಮಯವೆನಿಸಿದೆ.

ಪ್ರತಿಷ್ಠಿತ ಮಂಗಳೂರು ವಿಧಾನಸಭಾ ಕ್ಷೇತ್ರಕ್ಕೆ ಅಂಟಿಕೊಂಡಿರುವ ಉಳ್ಳಾಲಕ್ಷೇತ್ರವೂ ಅಷ್ಟೇ ಮಹತ್ವದ್ದೆನಿಸಿದೆ. ವಾಸ್ತವದಲ್ಲಿ ಮಂಗಳೂರಿಗೆ ಆ ಹೆಸರು ಬರಲು ಕಾರಣವಾದ ಮಂಗಳಾದೇವಿ ದೇವಸ್ಥಾನವಿರುವುದು ಉಳ್ಳಾಲ ಕ್ಷೇತ್ರದಲ್ಲಿ. ಬಹಳ ಹಿಂದೆ ಮಂಗಳೂರು ಎಂದೇ ಕರೆಯಲ್ಪಡುತ್ತಿದ್ದ ಉಳ್ಳಾಲ ಕ್ಷೇತ್ರವು ಮಂಗಳೂರು ನಗರದ 10 ವಾರ್ಡುಗಳನ್ನು ತನ್ನ ಮಡಿಲಿನಲ್ಲಿರಿಸಿಕೊಂಡಿದೆ. ನೇತ್ರಾವತಿ ಸೇತುವೆಯು ಈ ನಗರ ಭಾಗವನ್ನು ಉಳ್ಳಾಲದ ಇನ್ನೊಂದು ಭಾಗಕ್ಕೆ ಸಂಪರ್ಕಿಸುತ್ತದೆ.

ಈ ಹಿಂದೆ ರೈತ-ಕಾರ್ಮಿಕರ ಬಾಹುಳ್ಯವಿರುವ ಕ್ಷೇತ್ರವೆಂದೇ ಗುರುತಿಸಲ್ಪಡುತ್ತಿದ್ದ ಉಳ್ಳಾಲ ಇಂದು ಬಹಳಷ್ಟು ಬದಲಾವಣೆ ಕಂಡಿದೆ. ರೈತರು, ಬೀಡಿ ಕಾರ್ಮಿಕರು, ಹೆಂಚು ಮಜೂರರು ಗಣನೀಯ ಸಂಖ್ಯೆಯಲ್ಲಿ ಇಂದೂ ಇದ್ದಾರೆ. ಜತೆಗೆ ಉಳ್ಳಾಲ ಒಂದು ಶೈಕ್ಷಣಿಕ ಕೇಂದ್ರವಾಗಿಯೂ ಬುದ್ಧಿಜೀವಿಗಳ, ವಿಚಾರವಂತರ ಊರು ಎಂಬ ಹೆಸರನ್ನು ಸಂಪಾದಿಸುತ್ತಿದೆ. ಇಂದು ಮಂಗಳೂರು ವಿಶ್ವವಿದ್ಯಾನಿಲಯ, ನಿಟ್ಟೆಸಂಸ್ಥೆಯ ವೈದ್ಯಕೀಯ ಕಾಲೇಜು, ಟಿಪ್ಪು ಸುಲ್ತಾನ್ ಹೆಸರಿನ ಕಾಲೇಜು... ಇತ್ಯಾದಿ ವಿದ್ಯಾಸಂಸ್ಥೆಗಳು ಉಳ್ಳಾಲದ ತೆಕ್ಕೆಯೊಳಗೆ ಸೇರಿಕೊಂಡಿವೆ. ಪ್ರಕೃತಿ ರಮಣೀಯ ಸೋಮೇಶ್ವರ ಬೀಚ್ ಇಲ್ಲಿದೆ. ಕೋಮುಸೌಹಾರ್ದದ ಪ್ರತೀಕವಾಗಿ ಮೆರೆಯುತ್ತಿರುವ ಜುಮಾ ಮಸೀದಿಯೆಂಬ ಧಾರ್ಮಿಕ ಕ್ಷೇತ್ರವೂ ಇಲ್ಲಿದೆ. ಇಲ್ಲಿ ನಡೆಯುವ ಉರುಸ್‌ಗೆ ರಾಷ್ಟ್ರೀಯ, ಅಂತರಾಷ್ಟ್ರೀಯವಾಗಿಯೂ ಧಾರ್ಮಿಕ ಶ್ರದ್ಧಾಳುಗಳು ಧಾವಿಸುತ್ತಾರೆ.


ಅಬ್ಬಕ್ಕ ರಾಣಿಯ ಸಮರಶೀಲ ಪರಂಪರೆಯಲ್ಲೇ ಹೆಜ್ಜೆಯಿಡುತ್ತಾ ಬಂದ ಈ ನಾಡಿನ ಇತಿಹಾಸದ ತುಂಬಾ ಅನ್ಯಾಯಕ್ಕೆದುರಾಗಿ, ದಬ್ಬಾಳಿಕೆಗೆದುರಾಗಿ, ಶೋಷಣೆಗೆದುರಾಗಿ ಮೈನವಿರೇಳಿಸುವ ಹೋರಾಟದ ಪುಟಗಳೇ ತುಂಬಿವೆ. ಭೂಮಾಲಿಕರ ದರ್ಪ, ದೌರ್ಜನ್ಯದ ವಿರುದ್ಧ ರೈತರ ಹೋರಾಟಗಳು, ಗೇಣಿ ರೈತರು ಬೆಳೆಸಿದ ಬೆಳೆಗಳನ್ನು ಭೂಮಾಲಿಕರು ಗೂಂಡಾಗಳ ಮೂಲಕ ಕಟಾವು ಮಾಡುವಾಗ ಅವರನ್ನು ದೈಹಿಕವಾಗಿ ಎದುರಿಸಿ ಹೋರಾಡಿದ ಘಟನೆಗಳು ಉಳ್ಳಾಲದ ನಾಡಿನಲ್ಲಿ ಅಗಣಿತವಾಗಿ ನಡೆದಿವೆ. ಇಲ್ಲಿ ಭೂಸುಧಾರಣೆಗಾಗಿ ನಡೆದ ಹೋರಾಟಗಳು ಚರಿತ್ರೆಯುದ್ದಕ್ಕೂ ಹೆಜ್ಜೆಗುರುತು ಮೂಡಿಸಿವೆ. ಉಳ್ಳಾಲದ ಬೀಡಿ ಕಾರ್ಮಿಕರ ಸಂಘಟನೆ, ಚಳುವಳಿ, ಹೋರಾಟ ಮನೆಮಾತು. ಅಬ್ಬಕ್ಕ ರಾಣಿಯ ಧೀರತೆಯನ್ನೇ ಅನುಸರಿಸಿರುವ ಉಳ್ಳಾಲ ಪ್ರದೇಶದ ಮಹಿಳೆಯರು ಬೀಡಿಕಾರ್ಮಿಕರ ಚುಳುವಳಿಯಲ್ಲಿ ಯಮುದ್ದೋಪಾದಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೆಂಚು ಮಜೂರರೂ ಶೌರ್ಯದಲ್ಲಿ ಹಿಂದೆ ಬಿದ್ದವರಲ್ಲ. ತಮ್ಮ ಚಳುವಳಿಯನ್ನು ನಾಶಪಡಿಸಲು ಬಂದ ಗೂಂಡಾಗಳ ವಿರುದ್ಧ ಹಿಂಜರಿಯದೆ ದೈಹಿಕ ಹೋರಾಟವನ್ನು ನಡೆಸಿ ನೇಣುಗಂಬದವರೆಗೆ ಹೋಗಿ ಬಂದಂತಹ ದೀರ ನಾಯಕರನ್ನು ಕಂಡ ಪ್ರದೇಶವಿದು.

ಕೇರಳ ರಾಜ್ಯದ ಉತ್ತರ ತುದಿಯಲ್ಲಿರುವ ತಪಾವಾಡಿ ಗಡಿ ಪ್ರದೇಶದಿಂದ ಆರಂಭಗೊಳ್ಳುವ ಉಳ್ಳಾಲಕ್ಕೆ ಕೇರಳದ ಕಮ್ಯುನಿಸ್ಟ್ ಆಂದೋಲನದ ಗಾಳಿ ಸಹಜವಾಗಿ ಹರಡಿದೆ. ಮಹಾನ್ ಕ್ರಾಂತಿಕಾರ ಎಕೆಜಿಯಿಂದ ಹಿಡಿದು ಇ.ಕೆ. ನಾಯನಾರ್ ಸೇರಿದಂತೆ ಹಲವಾರು ಕೇರಳ ನಾಯಕರು ಇಲ್ಲಿ ಚಳುವಳಿಯೊಂದಿಗೆ ಸಂಪರ್ಕ ವಿರಿಸಿಕೊಂಡದ್ದೂ ಇದೆ. ರೈತರ ಮುಂದಾಳು ಎ. ಕೃಷ್ಣಸೆಟ್ಟಿ ಉಳ್ಳಾಲದಲ್ಲಿ ಮನೆಮಾತಾಗಿದ್ದರು. ಒಕ್ಕಲೆಬ್ಬಿಸುವುದರ ವಿರುದ್ಧ, ಅಸ್ಪೃಶ್ಯತೆ ವಿರುದ್ಧ ನಿರ್ದಾಕ್ಷಿಣ್ಯವಾಗಿ ಹೋರಾಡಿದ ಶೆಟ್ಟರೆಂದರೆ ಅಂದು ಭೂಮಾಲಿಕರಿಗೆ ಮೈನಡುಕ. 1962ರಲ್ಲಿ ಉಳ್ಳಾಲ ಜನತೆ ತಮ್ಮ ಪ್ರೀತಿಯ ನಾಯಕನನ್ನು (ಆಗ ಮಂಗಳೂರು 2 ಕ್ಷೇತ್ರ) ವಿಧಾನಸಭೆಗೆ ಕಳುಹಿಸಿದ್ದರು. ರಾಜ್ಯದ ಕಮ್ಯುನಿಸ್ಟ್ ಆಂದೋಲನದ ಮತ್ತೊಬ್ಬ ನೆಚ್ಚಿನ ಮುಂದಾಳು - ಮಾಸ್ಟ್ಯ ಎಂದೇ ಜನಜನಿತ-ಪಿ. ರಾಮಚಂದ್ರ ರಾಯರನ್ನೂ 1983ರಲ್ಲಿ ಶಾಸನಸಭೆಗೆ ಕಳುಹಿಸಿದ ಹಿರಿಮೆ ಈ ಕ್ಷೇತ್ರದ್ದು.

ಉಳ್ಳಾಲದಲ್ಲಿ ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಕೋಮು ಸೌಹಾರ್ದತೆಯಿಂದ ಬಾಳಿದ ನಾಡಿದು. ದೇಶದ ಇತರೆಡೆ ಕೋಮುಗಲಭೆಗಳು ನಡೆದಾಗಲೂ ಹಿಂದು-ಮುಸ್ಲಿಂ ಜನರು ಕೈಕೈ ಜೋಡಿಸಿ ಐಕ್ಯತೆಯನ್ನು ಮೆರೆದ ನಾಡಿದು. ಚುನಾವಣೆಯಲ್ಲೂ ಇಲ್ಲಿಯ ಜನರು ಜಾತಿ, ಮತದ ಹೆಸರಿನಲ್ಲಿ ಐಕ್ಯತೆಯನ್ನು ಮುರಿಯುವ ಕೋಮುವಾದಿಗಳನ್ನು ಸಾರಾಸಗಟಾಗಿ ತಿರಸ ರಿಸಿರುವ ಹಿನ್ನೆಲೆಯಿದೆ. ಸಮರಶೀಲತೆಯ, ಕೋಮುಸೌಹಾರ್ಧತೆಗೆ ಹೆಸರಾದ ಈ ನಾಡಿಗೆ ಬೆಂಕಿಹಚ್ಚುವ ಕೆಲಸವನ್ನು ಬಾಬರೀ ಮಸೀದಿ ವಿವಾದ ಸಂದರ್ಭದಲ್ಲಿ ಕೋಮುವಾದಿಗಳು ಮಾಡಿದರು. ಕ್ಷೇತ್ರದ ತುಂಬಾ ಕೋಮುವಾದದ ವಿಷಬೀಜ ಬಿತ್ತಿ ಜನತೆಯ ಐಕ್ಯತೆಯನ್ನು ಮುರಿಯುವ ಯತ್ನದಲ್ಲಿ ಯಶಸ್ವಿಯಾದರು. 1994ರಲ್ಲಿ ಪ್ರಥಮ ಬಾರಿಗೆ ಕೋಮುವಾದಿ ಬಿಜೆಪಿಯ ಅಭ್ಯರ್ಥಿಯನ್ನು ಉಳ್ಳಾಲ ಜನತೆ ಆರಿಸಿತು. ಜಾತ್ಯಾತೀತ ಪಕ್ಷಗಳ ನಡುವೆ ಹೊಂದಾಣಿಕೆಯಿಲ್ಲದಿದ್ದುದೂ ಬಿಜೆಪಿಯ ಗೆಲುವಿಗೆ ಕಾರಣವಾಗಿತ್ತು. ಅಂತೂ ಅಬ್ಬಕ್ಕ ರಾಣಿ ಹುಟ್ಟಿದ ಸಮರಶೀಲ ಭೂಮಿಗೆ ಕಳಂಕ ತಂದ ಘಟನೆಯಿದು.

ಇದೀಗ ಐದು ವರ್ಷಗಳು ಸಂದುಹೋಗಿವೆ. ನೇತ್ರಾವತಿಯಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಕೋಮುವಾದಿಗಳ ಬಣ್ಣವೂ ಬಯಲಾಗಿ ಹೋಗಿದೆ. ತಮ್ಮ ನಾಡಿಗೆ ಹಚ್ಚಲಾದ ಕಳಂಕವನ್ನು ತೊಡೆದು ಹಾಕಲು ಇದೀಗ ಉಳ್ಳಾಲದ ಜನತೆ ಚುನಾವಣೆಯೆಂಬ ರಣಾಂಗಣದಲ್ಲಿ ಅಣಿನೆರೆಯುತಿದ್ದಾರೆ.

ಉಳ್ಳಾಲ ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಬಿ.ಮಾಧವ



ಕರ್ನಾಟಕ ರಾಜ್ಯದ ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿರುವ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಕಾರ್ಮಿಕ ಚಳುವಳಿಯ ಅಗ್ರಗಣ್ಯ ನಾಯಕ ಬಿ. ಮಾಧವರವರು ಈ ಬಾರಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವುದು ಇಡೀ ರಾಜ್ಯದ ಜನತೆಯ ಕುತೂಹಲವನ್ನು ಕೆರಳಿಸಿದೆ.

ಕಳೆದ ಮೂವತ್ತೈದು ವರ್ಷಗಳಿಂದ ನಿರಂತರವಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ವರ್ಗದ ಚಳುವಳಿಗಳಲ್ಲಿ ತೊಡಗಿಸಿಕೊಂಡು ನೇತೃತ್ವ ನೀಡುತ್ತಾ ಬಂದಿರುವ ಧೀಮಂತ ನಾಯಕ. ಬಿ. ಮಾಧವರದ್ದು ದುಡಿಯುವ ಜನಸಮುದಾಯಕ್ಕೆ ಚಿರಪರಿಚಿತ ಹೆಸರು.

ಓರ್ವ ಎಲ್‌ಐಸಿ ನೌಕರನಾಗಿ ವೃತ್ತಿ ಜೀವನ ಆರಂಭಿಸಿದ ಬಿ. ಮಾಧವರು ಕೂಡಲೇ ನೌಕರ ಚಳುವಳಿಯತ್ತ ಆಕರ್ಷಿತರಾದರು. ವಿಮಾನೌಕರರ ಅತ್ಯಂತ ಪ್ರಜ್ಞಾವಂತ ಸಮರಶೀಲ ಸಂಘಟನೆಯಾದ ಅಖಿಲ ಭಾರತ ವಿಮಾ ನೌಕರರ ಸಂಘ (ಎಐಐಇಎ)ದ ನಾಯಕತ್ವವನ್ನು ಎಳೆಯ ಹರೆಯದಲ್ಲೇ ವಹಿಸಿಕೊಂಡ ಬಿ. ಮಾಧವರ ನೇತೃತ್ವದಲ್ಲಿ ಎಲ್ಐಸಿ ಉಡುಪಿ ವಿಭಾಗದಲ್ಲಿ ಅನೇಕ ಸಮರಶೀಲ ಹೋರಾಟಗಳು ನಡೆದವು. ವಿಮಾನೌಕರರ ಸಂಘಟನೆಯಲ್ಲಿ ಅಖಿಲ ಭಾರತ ಮಟ್ಟದ ವರೆಗೆ ವಿವಿಧ ಜವಾಬ್ದಾರಿ ವಹಿಸಿರುವ ಮಾಧವರು ರಾಷ್ಟ್ರವ್ಯಾಪಿಯಾಗಿ ವಿಮಾನೌಕರರ ಪ್ರೀತಿಗೆ ಪಾತ್ರರಾಗಿದ್ದಾರೆ. ಮಧ್ಯಮ ವರ್ಗದ ನೌಕರರಿಗೆ ನೇತೃತ್ವ ನೀಡುತ್ತಿರುವ ಸಮಯದಲ್ಲೇ ಜಿಲ್ಲೆಯ ಬೀಡಿ, ಹಂಚು ಮತ್ತಿತರ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಮತ್ತು ಅಸಂಘಟಿತ ಕಾರ್ಮಿಕ ವರ್ಗ ಅನುಭವಿಸುತ್ತಿರುವ ಶೋಷಣೆಗಳನ್ನು ಕಣ್ಣಾರೆ ಕಂಡ ಬಿ. ಮಾಧವರು ಆ ಕಾರ್ಮಿಕ ಸಮುದಾಯವನ್ನೂ ಸಂಘಟಿಸುವ ಪಣತೊಟ್ಟು ಆ ಚಳುವಳಿಗೂ ತನ್ನನ್ನು ಸಮರ್ಪಿಸಿಕೊಂಡವರು. ಕೆಲವು ವರ್ಷಗಳ ಹಿಂದೆ ಎಲ್‌ಐಸಿಯ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದು ದುಡಿಯುವ ವರ್ಗದ ಚಳುವಳಿಗೆ ಜೀವನವನ್ನು ಮೀಸಲಿಟ್ಟರು.

ಕಾರ್ಮಿಕ ಮತ್ತಿತರ ಶೋಷಿತ ಜನ ಸಮುದಾಯದ ವಿಮೋಚನೆ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದಿಂದ ಮಾತ್ರ ಸಾಧ್ಯವೆಂದು ಅಚಲವಾಗಿ ನಂಬಿರುವ ಬಿ. ಮಾಧವ ಇಂದು ಆ ಪಕ್ಷದ ಪೂರ್ಣಕಾಲದ ಕಾರ್ಯಕರ್ತನಾಗಿ ಪಕ್ಷದ ರಾಜ್ಯ ಸಮಿತಿಯ ಸೆಕ್ರೆಟೇರಿಯೆಟ್ ಸದಸ್ಯರಾಗಿದ್ದಾರೆ.

ಪ್ರಸ್ತುತ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಯಾದ ಸಿಐಟಿಯು ಜಿಲ್ಲಾಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿರುವ ಬಿ. ಮಾಧವರು ರಾಜ್ಯಸಮಿತಿಯ ಉಪಾಧ್ಯಕ್ಷರೂ, ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದಾರೆ.

ದ.ಕ. ಜಿಲ್ಲೆಯ ಕಾರ್ಮಿಕ ವರ್ಗದ ಚಳುವಳಿಯ ಮುಂಚೂಣಿಯಲ್ಲಿ ಕಳೆದ 55 ವರ್ಷಗಳ ಭವ್ಯ ಇತಿಹಾಸವಿರುವ ಸೌತ್ ಕೆನರಾ ಟ್ಯಾಲ್‌ವರ್ಕರ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿಯಾಗಿರುವ ಬಿ. ಮಾಧವರು ಜಿಲ್ಲೆಯ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನ ಅಧ್ಯಕ್ಷರೂ ಆಗಿದ್ದಾರೆ. ದ.ಕ. ಜಿಲ್ಲೆಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಸಂಚಾಲಕರೂ ಆಗಿರುವ ಬಿ. ಮಾಧವರು ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನ, ಮಹಿಳಾ ಚಳುವಳಿಯಲ್ಲೂ ಅತ್ಯಂತ ಪರಿಚಿತರು.

ಎಂ.ಎ. ಮತ್ತು ಎಲ್‌ಎಲ್‌ಬಿ ಪದವೀಧರರಾಗಿದ್ದು ಅತ್ಯಂತ ಸುಶಿಕ್ಷಿತರಾಗಿರುವ ಬಿ. ಮಾಧವರು ಅತ್ಯುತ್ತಮ ವಾಗ್ಮಿ, ಲೇಖಕ ಮತ್ತು ಭಾಷಾಂತರಕಾರ. ಕಾರ್ಮಿಕ ಸಮುದಾಯ, ಜನಪರ ಚಳುವಳಿಯ ಪ್ರಶ್ನೆಗಳ ಕುರಿತು ಅಸಂಖ್ಯ ಲೇಖನಗಳನ್ನು ಬರೆದಿರುವ ಬಿ. ಮಾಧವರು ಇಎಂಎಸ್, ಎಕೆಜಿಯಂತಹ ಮಹಾನಾಯಕರ ಅನೇಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಾರ್ಮಿಕ ಸಮುದಾಯಕ್ಕೆ ಮಾತ್ರವಲ್ಲದೆ ಸಾಂಸ್ಕೃತಿಕ ಚಳುವಳಿಯಲ್ಲೂ ಸಕ್ರಿಯವಾಗಿ ದುಡಿದಿರುವ ಬಿ. ಮಾಧವರು ರಾಜ್ಯಮಟ್ಟದ ಸಮುದಾಯ ಸಾಂಸ್ಕೃತಿಕ ತಂಡದ ಸ್ಥಾಪಕ ಉಪಾಧ್ಯಕ್ಷರಾಗಿದ್ದರು. ಮಾತ್ರವಲ್ಲ ಮಂಗಳೂರಿನ ಸಮಾಜ ವಿಜ್ಞಾನ ವೇದಿಕೆಯ ಅಧ್ಯಕ್ಷರೂ ಆಗಿದ್ದಾರೆ.

ಕಾರ್ಮಿಕ ವರ್ಗದ ಚಳುವಳಿ ಮತ್ತು ವೈಜ್ಞಾನಿಕ ಸಮಾಜವಾದದ ಕುರಿತು ಆಳವಾದ ಅಧ್ಯಯನ ನಡೆಸಿರುವ ಅವರು, 1988ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಶೈಕ್ಷಣಿಕ ಪ್ರವಾಸಕ್ಕಾಗಿ ಹೋದ ಸಿಐಟಿಯು ತಂಡದ ಸದಸ್ಯರಾಗಿದ್ದರು. ಕಾರ್ಮಿಕ ಸಂಘಟನೆಗಳು ಮತ್ತು ಸಿಪಿಐ(ಎಂ) ಕಾರ್ಯಕರ್ತರಿಗೆ ಒಂದು ಕಡೆ ನೇತೃತ್ವ ನೀಡುತ್ತಾ ಇನ್ನೊಂದು ಕಡೆ ಸೈದ್ಧಾಂತಿಕ ಶಿಕ್ಷಣ, ತರಗತಿ ನೀಡುತ್ತಿರುವ ನುರಿತ ಶಿಕ್ಷರೂ ಆಗಿದ್ದಾರೆ ಬಿ. ಮಾಧವ.

ಇಂತಹ ಧೀಮಂತ ನಾಯಕ ಉಳ್ಳಾಲ

......ವಿಷ ಸರ್ಪವನ್ನು ಕೊಲ್ಲಬೇಕಾಗಿದೆ

ಪುಟ 8 ರಿಂದ

ಒದಗಿಸಲು ಧಾವಿಸಿದವಷ್ಟೇ. ಸಿಪಿಐ(ಎಂ) 'ಈ ಸಹಸ್ರಮಾನದ ಅತಿದೊಡ್ಡ ಹಗರಣ' ಎಂದು ವರ್ಣಿಸಿರುವ ಇತ್ತೀಚಿನ ಟೆಲಿಕಾಂ ಹಗರಣ ಇದಕ್ಕೊಂದು ಉದಾಹರಣೆ.

ಬಿಜೆಪಿಗೆ ಒಗ್ಗದ ಐಕ್ಯತೆಯ ಎರಡು ಸ್ತಂಭಗಳು

ಧರ್ಮನಿರಪೇಕ್ಷತೆ ಮತ್ತು ಒಕ್ಕೂಟತತ್ವ ಭಾರತದ ಐಕ್ಯತೆಯ ಎರಡು ಸ್ತಂಭಗಳು. ಇವಿಲ್ಲದೆ ಸ್ಥಿರತೆಯೆಂಬುದು ಅಸಾಧ್ಯ. ಭಾರತ ವಿವಿಧ ಧರ್ಮಗಳು, ಮತ-ಸಂಪ್ರದಾಯಗಳ, ಭಾಷೆ- ಉಪಭಾಷೆಗಳ, ವೇಷ-ಭೂಷಣಗಳ, ಆಚಾರ-ವಿಚಾರಗಳ ಒಂದು ದೇಶ. ಈ ಭಾರೀ ಭಿನ್ನತೆಗಳ ನಡುವೆಯೂ ಭಾರತದ ಐಕ್ಯತೆಯನ್ನು ಪಡೆದಿದ್ದರೆ ಅದು ಧರ್ಮನಿರಪೇಕ್ಷತೆಯ ಸಂದರ್ಭದಿಂದಾಗಿಯೇ. ಇದು ಇಲ್ಲಿ ಹಲವು ಸಂಸ್ಕೃತಿಗಳು ಪರಸ್ಪರ ಬೆರೆತು ಸಮೃದ್ಧಗೊಳ್ಳಲು ಅವಕಾಶ ನೀಡಿದೆ. ಆದರೆ ಬಿಜೆಪಿಗೆ ಈ ಧರ್ಮನಿರಪೇಕ್ಷತೆಯ ಹಂದರವೆಂದರೇ ಆಗದು. ನಿಜ ಸಂಗತಿಯೆಂದರೆ ಯಾವುದೇ ದೇಶ ತನ್ನ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ನೈಜ ಆಕಾಂಕ್ಷೆಗಳನ್ನು ಕಾಪಾಡದೆ ಸ್ಥಿರತೆ ಪಡೆಯಲು ಸಾಧ್ಯವಿಲ್ಲ. ಹಿಂದಿನ ಪೂರ್ವ ಪಾಕಿಸ್ತಾನ, ಈಗಿನ ಬಾಂಗ್ಲಾದೇಶ ಇದಕ್ಕೆ ಒಂದು ಉದಾಹರಣೆ. ಭಾರತ ಕೂಡಾ ಸ್ಥಿರತೆ ಹಾಗೂ ಐಕ್ಯತೆಯಿಂದಿರಬೇಕಾದರೆ ತನ್ನ ಧರ್ಮನಿರಪೇಕ್ಷತೆಯನ್ನು, ಕೋಮು ಸೌಹಾರ್ದವನ್ನು ಕಣ್ಣಿನ ಬೊಂಬೆಗಳಂತೆ ಜೋಪಾನವಾಗಿರಿಸಿ ಕೊಳ್ಳಬೇಕು. ಆದರೆ ಬಿಜೆಪಿ ಅಧಿಕಾರ ಪಡೆದರೆ ಇದು ಸಾಧ್ಯವೇ ಇಲ್ಲ. ಭಾರತದ ಐಕ್ಯತೆಯನ್ನು ಕಾಪಾಡಲು ಸ್ಥಿರತೆ ಒದಗಿಸುವ ಸಾಮರ್ಥ್ಯವಂತೂ ಬಿಜೆಪಿಗೆ ಇಲ್ಲವೇ ಇಲ್ಲ.

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಯ ಇಂತಹ ದಾವೆಗಳನ್ನೆಲ್ಲಾ ಜನ ಪರಿಶೀಲಿಸಿ ತಿರಸ್ಕರಿಸುತ್ತಾರೆ. ಆದರೆ ಎಡ ಮತ್ತು ಧರ್ಮನಿರಪೇಕ್ಷ ಪಕ್ಷಗಳು ಇದರಲ್ಲಿ ಒಂದು ಮಹತ್ವದ ಪಾತ್ರ ವಹಿಸಬೇಕಾಗುತ್ತದೆ. ಏಕೆಂದರೆ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸುವ ಕೆಲಸ ತಂತಾನೇ ಆಗುವಂತದ್ದಲ್ಲ. ಬಿಜೆಪಿ ನಮ್ಮ ದೇಶದ ಐಕ್ಯತೆಗೆ ಮತ್ತು ಕೋಮುಸೌಹಾರ್ದಕ್ಕೆ, ನಾವೊಂದು ನಾಗರಿಕ ದೇಶವಾಗಿ ಉಳಿಯುವುದಕ್ಕೆ, ನಮ್ಮ ಬಹುಸಾಂಸ್ಕೃತಿಕ ಸ್ವರೂಪಕ್ಕೆ, ನಮ್ಮ ದೇಶದ ಭದ್ರತೆ ಹಾಗೂ ಅಭಿವೃದ್ಧಿಶೀಲ ದೇಶಗಳ ಸಮೂಹದಲ್ಲಿ ನಮ್ಮ ದೇಶ ಹೊಂದಿರುವ ಸ್ಥಾನಕ್ಕೆ ಒಡ್ಡಿರುವ ಬೆದರಿಕೆಗಳನ್ನು ಎಲ್ಲಾ ಧರ್ಮನಿರಪೇಕ್ಷ ಪಕ್ಷಗಳು ಅರಿಯಬೇಕಾಗಿದೆ. ಮುಂಬರುವ ಚುನಾವಣೆಗಳ ನಿರ್ಣಾಯಕ ಮಹತ್ವ ಇರುವುದು ಇಲ್ಲೇ.

ದಾರಾಸಿಂಗ್ ಮತ್ತು ಭಜರಂಗ ದಳ ಬಿಜೆಪಿ ನಂಟು

ಸ್ಟೈನ್ಸ್ ಮತ್ತು ಅವರ ಮಕಳನ್ನು ಜೀವಂತ ಸುಟ್ಟ ದಾರಾ ಸಿಂಗ್ ಹಾಗೂ ಭಜರಂಗ ದಳ / ಬಿಜೆಪಿ ನಡುವಿನ ನಂಟನ್ನು ತೋರುವ 11 ಕೇಸುಗಳನ್ನು ಪ್ರಾಥಮಿಕ ತನಿಖಾ ತಂಡ ಪಟ್ಟಿ ಮಾಡಿದೆ. ಭಜರಂಗದೊಡನೆ ಸಂಪರ್ಕ ತೋರುವ ಕೇಸುಗಳು

ಎಫ್.ಐ.ಆರ್. ನಂ	ಪೋಲಿಸು ಠಾಣೆ	ಜಿಲ್ಲೆ
80/99	ಪಾಟ್ನಾ	ಕೆಯೊಂಜಾರ್
83/97	,,	,,
19/98	,,	,,
46/98	ಸದರ್	ಕೆಯೊಂಜಾರ್
91/98	ಕಾರಂಜಿಯಾ	ಮಯೂರ ಭಂಜ್
123/98	,,	,,
1/99	ಪಾಟ್ನಾ	ಕೆಯೊಂಜಾರ್
ಬಿಜೆಪಿಯೊಂದಿಗೆ ಆತನ ಸಂಪರ್ಕವನ್ನು ಹೊರಗೆಡಹುವ ಕೇಸುಗಳು		
71/96	ಪಾಟ್ನಾ	ಕೆಯೊಂಜಾರ್
19/98	ಪಾಟ್ನಾ	ಕೆಯೊಂಜಾರ್
34/98	ಥಾಕುರ್‌ಮುಂಡಾ	ಮಯೂರುಬಂಜ್
46/98	ಸದರ್	ಕೆಯೊಂಜಾರ್ ,,

ಔಟ್‌ಲುಕ್ ಪತ್ರಿಕೆಯಿಂದ

ಹೊಸಪೇಟೆಗೆ ಮತ್ತೆ ವಕ್ಕರಿಸಿಕೊಳ್ಳುತ್ತಿರುವ ಶಂಕರಗೌಡರು

ಮೂರನೇ ಶಕ್ತಿಯಾಗಿ ಸಿಪಿಐ (ಎಂ) ಬೆಳವಣಿಗೆ

ಬಳ್ಳಾರಿ ಜಿಲ್ಲೆಯ ಮಧ್ಯಭಾಗದಲ್ಲಿರುವ ಹೊಸಪೇಟೆಯು ಐತಿಹಾಸಿಕವಾಗಿ ಹಾಗೂ ರಾಜಕೀಯವಾಗಿ ಜಿಲ್ಲೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಕಾಯ್ದುಕೊಂಡುಬಂದಿದೆ. ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ರಾಜಧಾನಿಯಾದ ಹಂಪೆಯು ಹೊಸಪೇಟೆ ತಾಲೂಕಿನಲ್ಲಿದೆ ಎನ್ನುವ ಕಾರಣಕ್ಕಾಗಿ ಈ ತಾಲೂಕು 'ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆ. ಹೊಸಪೇಟೆ ತಾಲೂಕು ಸಹ ರಾಜಕೀಯವಾಗಿ ಜಿಲ್ಲೆಯು ಕಾಂಗ್ರೆಸ್ ಭದ್ರ ಕೋಟೆಯಾಗಿರುವ ಹಿನ್ನಲೆಯಲ್ಲಿ ಕಾಂಗ್ರೆಸ್‌ನ ಪಾಲಾಗಿತ್ತಾದರೂ ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ಹೆಚ್ಚುತ್ತಿರುವ ಕೋಮುಗಲಭೆಗಳು ಹಾಗೂ ಭಾವನೆಗಳ ಹಿನ್ನೆಲೆಯಲ್ಲಿ ಹೊಸಪೇಟೆಯೂ ಸಹ ಕೋಮುವಾದಿ ಪಕ್ಷದ ತೆಕ್ಕೆಗೆ ಒಳಗಾಗುತ್ತಿರುವುದು ವಿಷಾದಕರ.

ಕಾಂಗ್ರೆಸ್, ಬಿ.ಜೆ.ಪಿ. ಹಾಗೂ ಜನತಾದಳ ಪಕ್ಷಗಳು ಇಲ್ಲಿನ ಪ್ರಮುಖ ರಾಜಕೀಯ ಪಕ್ಷಗಳಾಗಿವೆ. ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷವು ತನ್ನದೇ ಆದ ಮತದಾರರನ್ನು ಹೊಂದಿದ್ದರೂ ಸಹ ಗುಂಪುಗಾರಿಕೆಯಿಂದ ಬಳಲುತ್ತಿರುವ ಪಕ್ಷವು ಇದೀಗ ಟಿಕೆಟ್ ಪಡೆಯುವ ಹಿನ್ನೆಲೆಯಲ್ಲಿ ಹಲವಾರು ಗುಂಪುಗಳಾಗಿ ಮಾರ್ಪಟ್ಟಿದೆ. ಇದರಲ್ಲಿ ರತನ್‌ಸಿಂಗ್, ಅಬ್ದುಲ್ ವಹಾಬ್, ಹಾಗೂ ಕಂಪ್ಲಿಯ ಸೂರ್ಯನಾರಾಯಣರಾವ್ ಇವರುಗಳು ಈಗಾಗಲೇ ಟಿಕೇಟ್‌ಗಾಗಿ ಪಕ್ಷದ ಬಾಗಿಲನ್ನು ತಟ್ಟಿದ್ದಾರೆ.

ಬಿ.ಜೆ.ಪಿ. ಪಕ್ಷವು ತಾಲೂಕಿನಲ್ಲಿ ಸಂಘಟನಾತ್ಮಕವಾಗಿ ಬಲಿಷ್ಠವಾಗಿಲ್ಲದಿದ್ದರೂ ಹೊಸಪೇಟೆಯಲ್ಲಿ ನಡೆದ ಕೋಮುಗಲಭೆಯ ಹಿನ್ನಲೆಯಲ್ಲಿ ಹಾಗೂ ಈ ಹಿಂದೆ ಕಾಂಗ್ರೇಸ್‌ಪಕ್ಷದಿಂದ ಶಾಸಕರಾಗಿದ್ದ ಶಂಕರಗೌಡರು ರೈತ ಮುಖಂಡರೆಂದು ಪೋಜುಕೊಡುವುದರ ಜೊತೆಗೆ ಬಿ.ಜೆ.ಪಿ. ಸೇರಿದುದರ ಪರಿಣಾಮವಾಗಿ ಅವರು ಬಿ.ಜೆ.ಪಿ. ಶಾಸಕರಾಗಿದ್ದಾರೆ. ಶಂಕರಗೌಡರು ಶಾಸಕರಾಗಿದ್ದುಕೊಂಡು ಹಾಗೂ ರೈತ ಮುಖಂಡರೆಂದು ಹೇಳಿಕೊಂಡು ಮಾಡಿರುವ ಘನ ಕಾರ್ಯಗಳಿಗೆ ಇತ್ತೀಚೆಗೆ ಅವರನ್ನು ರೈತ ಸಂಘದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದ್ದುದೇ ಸಾಕ್ಷಿಯಾಗಿದೆ. ಹೊಸಪೇಟೆಯ ತಾಲೂಕಿನ ಪ್ರಮುಖ ವಾಣಿಜ್ಯ ಬೆಳೆಗಾರರಾದ ಕಬ್ಬು ಬೆಳೆಗಾರರಿಗೆ ಶಂಕರಗೌಡರು ಮಾಡಿರುವ ಮೊದಲನೇ ದ್ರೋಹವೆಂದರೆ, ಕಬ್ಬು ಬೆಳೆಗೆ ಬೆಲೆ ನಿಗದಿ ಪಡಿಸುವ ವಿಷಯದಲ್ಲಿ ರಾಜ್ಯದಲ್ಲಿ ಅತೀ ಹೆಚ್ಚು ಉತ್ಪತ್ತಿಯಾಗಿರುವ ಕಬ್ಬು ಬೆಳೆಗೆ (ಒಂದು ಟನ್‌ಗೆ ಕೇವಲ 790-00 ರೂ. ಮಾತ್ರ) ಬೆಲೆ ಇದ್ದು, ಇದು ರಾಜ್ಯದಲ್ಲೇ ಕಬ್ಬಿಗೆ ನಿಗದಿಪಡಿಸಿರುವ ಬೆಲೆಗಳಲ್ಲಿ ಅತ್ಯಂತ ಕಡಿಮೆ ಬೆಲೆಯಾಗಿದೆ. ಹಾಗೂ ರೈತರಿಗೆ ಕೊಡಬೇಕಾದ ಕಳೆದ ವರ್ಷದ ಬಾಕಿ ಟನ್‌ಗೆ 70-00 ಇನ್ನೂ ಹಾಗೇ ಇದೆ. ರೈತರು ಈ ಬಾಕಿಯನ್ನು ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕೇಳಿದರೆ, ಶಂಕರಗೌಡರು ರೈತ ಮುಖಂಡರಾಗಿದ್ದು ಅವರನ್ನು ಕೇಳಿರಿ ಎಂದಾಗ, ಗೌಡರು 'ಸುಧಾರಿಸಿಕೊಳ್ಳುವಂತೆ' ಸಾಂತ್ವನ ಹೇಳಿದ್ದು. ಇಷ್ಟೆಲ್ಲಾ ಸಾಲದೆಂಬಂತೆ ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರಿಗೆ ಮರುಪಾವತಿ ಮಾಡುವ ನೆಪದಲ್ಲಿ ಬ್ಯಾಂಕ್‌ಗಳಿಂದ ಸಾಲತಂದು ರೈತರಿಗೆ ಸಾಲ ಮರುಪಾವತಿ ಮಾಡದೇ ದ್ರೋಹ ಮಾಡಿದ್ದರೂ ಸಹ ಶಂಕರಗೌಡರು ರೈತರ ಪರವಾಗಿ ಚಕಾರವೆತ್ತಿರುವುದಿಲ್ಲ. ಈ ಎಲ್ಲಾ ವಿಷಯಗಳಿಗೆ ಪ್ರಮುಖ ಕಾರಣವೆಂದರೆ ಶಂಕರಗೌಡರು ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಶಾಮೀಲಾಗಿರುವುದು. ಇದು ಕೇವಲ ಮೇಲ್ನೋಟದ ಸತ್ಯ ಮಾತ್ರವಲ್ಲ ಹೊಸಪೇಟೆಯ ಸಾಮಾನ್ಯ ಕಬ್ಬು ಬೆಳೆಗಾರರೂ ಪ್ರತಿನಿತ್ಯ ಮಾತನಾಡಿಕೊಳ್ಳುವ ವಿಷಯವಾಗಿದೆ. ಕಂಪ್ಲಿಯ ಸಕ್ಕರೆ ಕಾರ್ಖಾನೆ ಕಾರ್ಮಿಕರ ವಿಷಯದಲ್ಲಿ ಸಹಾ ಶಂಕರಗೌಡರ ಪಾಲುಗಾರಿಕೆ ಇದ್ದೇ ಇದೆ. ಇವರ 'ಕಮೀಷನ್ ರಾಜಕಾರಣ' ಮಾತ್ರ ಅಲ್ಲಿನ ಕಾರ್ಮಿಕರ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ.

ಇಷ್ಟೆಲ್ಲಾ ಅವಾಂತರಗಳ ನಡುವೆಯೂ ಶಂಕರಗೌಡರು ತಮ್ಮನ್ನು ರೈತ ನಾಯಕರೆಂದು ಕರೆದುಕೊಳ್ಳುವುದಕ್ಕೆ ಕಾರಣವೆಂದರೆ, ಅವರು ಶಾಸಕರಾಗಿರುವುದು ಹಾಗೂ ಹೊಸಪೇಟೆಯಲ್ಲಿ ಪರ್ಯಾಯವಾಗಿ ರೈತ ಸಮೂಹವು ಸಂಘಟನೆಯಾಗದೇ ಇರುವುದು.

ಹೊಸಪೇಟೆಯ ಅತ್ಯಂತ ನಿರುಪಯೋಗಿ ಶಾಸಕರೆಂದು ಇಲ್ಲಿನ ಜನತೆ ಹಾಗೂ ಸಂಘ-ಸಂಸ್ಥೆಗಳ ಮುಖಂಡರು ತಮ್ಮ ಅಸಮಾಧಾನ ವ್ಯಕ್ತಮಾಡಿರುವ ಸಂದರ್ಭದಲ್ಲಿ ಹಾಗೂ ಶಂಕರಗೌಡರ ರಾಜಕೀಯ ಭವಿಷ್ಯದ ಅವಸಾನದ ಅಂಚಿನಲ್ಲಿಯೇ ರಾಜ್ಯದ ರಾಜಕೀಯ ವಿದ್ಯಮಾನಗಳು ಅವರಿಗೆ ಚೇತನವನ್ನು ಮೂಡಿಸಿದ ಹಿನ್ನೆಲೆಯಲ್ಲಿ ಪುನಃ ಹೊಸಪೇಟೆಗೆ ವಕ್ಕರಿಸಲು ಶಂಕರಗೌಡರು ಸಜ್ಜಾಗುತ್ತಿದ್ದಾರೆ.

ಬಿ.ಜೆ.ಪಿ. ಜನತಾದಳ ಹಾಗೂ ಲೋಕಶಕ್ತಿಗಳ ಮೈತ್ರಿಯ ಪರಿಣಾಮವಾಗಿ ಜಿಲ್ಲೆಯಲ್ಲಿಯೂ ತೀವ್ರ ರಾಜಕೀಯ ಬದಲಾವಣೆಗಳಾಗಲಿವೆ. ಈ ದಿಶೆಯಲ್ಲಿ ಹೊಸಪೇಟೆಯ ಬಹುತೇಕ ಜನತಾ ದಳದ ನಾಯಕರುಗಳೆಲ್ಲಾ ಜಿಲ್ಲಾ ಉಸ್ತುವಾರಿ ಮಂತ್ರಿ ಎಂ.ಪಿ. ಪ್ರಕಾಶ್ ಹಿಂಬಾಲಕರಾಗಿರುವುದರಿಂದ ಹಾಗೂ ಪ್ರಕಾಶ್ ಈಗಾಗಲೇ ಪಟೇಲ್ ಬಣದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಮೂರನೇ ರಾಜಕೀಯ ಶಕ್ತಿಯಾಗಿ ಸಿ.ಪಿ.ಐ(ಎಂ) ಪಕ್ಷವು ಈಗಾಗಲೇ ತನ್ನನ್ನು ಗುರುತಿಸಿಕೊಂಡಿದೆ. ಆದರೆ ಪಕ್ಷವು ನೇರವಾಗಿ ಅಸ್ತಿತ್ವ ಪಡೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಪ್ರಗತಿಪರ ಸಾಮೂಹಿಕ ಸಂಘಟನೆಗಳ ಮೂಲಕ ಪಕ್ಷವು ತನ್ನ ಅಸ್ತಿತ್ವವನ್ನು ಪಡೆದುಕೊಂಡಿದೆ. ಇಲ್ಲಿ ಮೊದಲಿನಿಂದಲೂ ಜನಪರವಾಗಿ ಸಾಮೂಹಿಕ ಸಂಘಟನೆಗಳೆಂದರೆ, ವಿದ್ಯಾರ್ಥಿಯುವಜನ ಹಾಗೂ ಕಾರ್ಮಿಕ ಸಂಘಟನೆಗಳು. ಸುಮಾರು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಹೊಸಪೇಟೆ ಪ್ರದೇಶದಲ್ಲಿ ಸಂಘಟನೆಗಳ ಬಗ್ಗೆ ಜನರಲ್ಲಿ ಸದಭಿಪ್ರಾಯವಿದೆ. ಆದರೆ, ಸಂಘಟನೆಗಳ ಬಗ್ಗೆ ಜನರಲ್ಲಿ ಒಳ್ಳೆಯ ಸದಭಿಪ್ರಾಯವು ರಾಜಕೀಯವಾಗಿ ಪಕ್ಷಕ್ಕೆ ಫಲಕಾರಿಯಾಗಲಿ ಎಂಬುದು ದುಡಿಯುವ ಜನರ ಎಡ ಪಂಥೀಯ ರಾಜಕೀಯದ ಅಭಿಮಾನಿಗಳ ಆಶಯವಾಗಿದೆ.

ಹೊಸಪೇಟೆಯ ದೈನಂದಿನ ಜನಜೀವನದಲ್ಲಿ ಸಾಮೂಹಿಕ ಸಂಘಟನೆಗಳು ಹಾಸುಹೊಕ್ಕಾಗಿ ಬೆರೆತಿರುವ ದಿಶೆಯಲ್ಲಿ ರಾಜಕೀಯವಾಗಿ ಮೂರನೇ ಶಕ್ತಿಯಾದ ಸಿಪಿಐ(ಎಂ) ಪಕ್ಷವು ಈ ಪ್ರಗತಿಪರ ಸಾಮೂಹಿಕ ಸಂಘಟನೆಗಳ ಶಕ್ತಿಯನ್ನು ರಾಜಕೀಯವಾಗಿ ಕ್ರೋಢೀಕರಿಸಲು ಇದೊಂದು ಸದವಕಾಶ ಎಂದು ಬಹುತೇಕ ಪಕ್ಷದ ಹಾಗೂ ಸಂಘಟನೆಗಳ ಸದಸ್ಯರು, ಹಿತೈಷಿಗಳು ಹಾಗೂ ಅಭಿಮಾನಿಗಳು ತುಂಬು ಹೃದಯದಿಂದ ಹೇಳುತ್ತಾರೆ. ಆದರೆ ಇದರ ಸಾಧ್ಯಾಸಾಧ್ಯತೆಗಳನ್ನು ಮಾತ್ರ ಮುಂಬರುವ ಚುನಾವಣೆಯೇ ನಿರ್ಧರಿಸುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಹಾಗೂ ಚುನಾವಣೆ ಸಂದರ್ಭದಲ್ಲಿ ಮುಂಬರುವ ದಿನಗಳಲ್ಲಿ ಏನೆಲ್ಲಾ ರಾಜಕೀಯ ಏರುಪೇರುಗಳಾಗುತ್ತವೆಯಾದ್ದರಿಂದ ಸ್ಪರ್ಧಾಕಣದಲ್ಲಿ ಇರುವ ಅಭ್ಯರ್ಥಿಗಳು, ವಿವಿಧ ರಾಜಕೀಯ ಪಕ್ಷಗಳಲ್ಲಿರುವ ಬಂಡಾಯದ ಗುಂಪುಗಳ ಅತೃಪ್ತಿ, ಅಸಮಧಾನ ಇವೆಲ್ಲವುಗಳು ಚುನಾವಣೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿರುವುದರಿಂದ ಜನತೆ ಇಂತಹ ಸಂದರ್ಭದಲ್ಲಿ ಕಾಂಗ್ರೇಸ್ ಹಾಗೂ ಬಿ.ಜೆ.ಪಿಗೆ ಪರ್ಯಾಯವಾದ ಮೂರನೇ ರಾಜಕೀಯ ಶಕ್ತಿಯಾದ ಸಿ.ಪಿ.ಐ(ಎಂ) ಪಕ್ಷದ ಮೇಲೆ ಖಂಡಿತಾ ವಿಶ್ವಾಸವನ್ನಿಡುತ್ತಾರೆಂಬುದರಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿದೆ.

ಹೊಸಪೇಟೆಯ ಅತ್ಯಂತ ನಿರುಪಯೋಗಿ ಶಾಸಕರೆಂದು ಇಲ್ಲಿನ ಜನತೆ ಹಾಗೂ ಸಂಘ-ಸಂಸ್ಥೆಗಳ ಮುಖಂಡರು ತಮ್ಮ ಅಸಮಾಧಾನ ವ್ಯಕ್ತಮಾಡಿರುವ ಸಂದರ್ಭದಲ್ಲಿ ಹಾಗೂ ಶಂಕರಗೌಡರ ರಾಜಕೀಯ ಭವಿಷ್ಯದ ಅವಸಾನದ ಅಂಚಿನಲ್ಲಿಯೇ ರಾಜ್ಯದ ರಾಜಕೀಯ ವಿದ್ಯಮಾನಗಳು ಅವರಿಗೆ ಚೇತನವನ್ನು ಮೂಡಿಸಿದ ಹಿನ್ನೆಲೆಯಲ್ಲಿ ಪುನಃ ಹೊಸಪೇಟೆಗೆ ವಕ್ಕರಿಸಲು ಶಂಕರಗೌಡರು ಸಜ್ಜಾಗುತ್ತಿದ್ದಾರೆ.

ಎ. ಕರುಣಾನಿಧಿ.

ಬದುಕುವ ಹಕ್ಕಿನ ಭರವಸೆ ನೀಡುವವರಿಗೆ ನಿಮ್ಮ ಮತ

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರ ತನ್ನ ಬತ್ತಳಿಕೆಯಿಂದ ಬಚ್ಚಿಟ್ಟ ಅಜಂಡಗಳಿಂದ ಒಂದೊಂದೇ ಅಂಶ ಹೊರ ಕೊಡವಿದಂತೆ ಕುಪಿತ ಗೊಂಡು ತನ್ನ ಅಂಗ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿ ಪತನಗೊಂಡ ಅಂಶವೇ 13 ನೇ ಲೋಕಸಭಾ ಚುನಾವಣೆ.

ದೇಶದ ಜನತೆ ಹೊಸ ಸಂಸತ್ತಿನ ಆಯ್ಕೆಯ ಸಂಘರ್ಷದಲ್ಲಿರುವಾಗ, ಬೆಂಗಳೂರಿನ ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಜನವಾದಿ ಮಹಿಳಾ ಸಂಘಟನೆಯು ಕೆ.ಆರ್. ಪುರದಲ್ಲಿ ಆಗಸ್ಟ್ 18 ರಂದು ಮಹಿಳಾ ಮತದಾರರ ಸಮಾವೇಶ ನಡೆಸಿ 'ಮಹಿಳೆಯರಿಗೆ ಬದುಕುವ ಹಕ್ಕಿನ ಭರವಸೆ ನೀಡುವವರಿಗೆ ನಮ್ಮ ಮತ' ಎಂದು ನಿರ್ಣಯಿಸಿದೆ. ತಾಯಿಯಾಗಿ, ಮಗಳಾಗಿ, ಹೆಂಡತಿಯಾಗಿ, ಪುರುಷರಷ್ಟೇ ಸಮರ್ಥವಾಗಿ ಪ್ರಗತಿಯತ್ತ ಕೊಂಡೊಯ್ಯುವ ಮಹಿಳೆಯರಿಗೆ ಸಮಾನ ಅವಕಾಶ, ಸಮಾನ ಕೆಲಸಕ್ಕೆ ಸಮಾನ ವೇತನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಗಾಗಿ ಇಡೀ ಜನ ಸಮೂಹ ನೆಮ್ಮದಿಯ ಸೌಹಾರ್ದ ಬದುಕಿಗಾಗಿ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದ ಶಕ್ತಿಗಳಿಗೆ ಮತ ನೀಡಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬೃಂದಾಕಾರತ್ ಸಮಾವೇಶದಲ್ಲಿ ಕರೆ ನೀಡಿದರು.

ಆದರ್ಶ, ಶಿಸ್ತು, ಪ್ರಾಮಾಣಿಕತೆ ಇತ್ಯಾದಿ ಎಂದ ಬಿಜೆಪಿ ಅಧಿಕಾರಕ್ಕೇರಲು ದೇಶದಲ್ಲಿದ್ದ ಎಲ್ಲಾ ಭ್ರಷ್ಟಾಚಾರಿಗಳ ಜೊತೆ, ಗೂಂಡಾಗಳ ಜತೆ ಹೊಂದಾಣಿಕೆ ಮಾಡಿಕೊಂಡು ತನ್ನ 'ಶಿಸ್ತು' ಹಾಗೂ 'ಪ್ರಾಮಾಣಿಕತೆ'ಯನ್ನು ಜನತೆಯ ಮುಂದೆ ತೆರೆದಿದೆ.

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದಿನವೊಂದಕ್ಕೆ ಕೋಮು ಗಲಬೆಗೆ 2 ಮುಗ್ಧ ಜೀವಿಗಳು ಬಲಿಯಾಗುತ್ತಿದ್ದಾರೆಂದರು.

ಮಂದಿರ-ಮಸೀದಿಯ ಶಾಂತಿ ನಮ್ಮ ಹೃದಯಕ್ಕೆ ಬರಲಿ ಎಂದು ಜನ ಹೋಗುವ ಸ್ಥಳಕ್ಕೂ ಬೆಂಕಿ ಇಟ್ಟು ಕೋಮುವಾದಿಗಳು' ಅಧಿಕಾರದತ್ತ ಧಾವಿಸತೊಡಗಿವೆಯೆಂದ ಬೃಂದಾ ಮತೀಯ ಶಕ್ತಿಗಳನ್ನು ಹಿಮ್ಮೆಟ್ಟಿಸುವಂತೆ ಮನವಿ ಮಾಡಿದರು.

ಇಂದು ಬಿಜೆಪಿಯ ವಾಜಪೇಯಿ ಮತ್ತು ಅವರ ಮಿತ್ರಕೂಟವನ್ನು 'ಅಲಿಬಾಬ ಮತ್ತು 40 ಕಳ್ಳ' ರಿಗೆ ಹೋಲಿಸಿದ ಅವರು ಈ ಮೈತ್ರಿ ಕೂಟಕ್ಕೆ ಯಾವುದೇ ಸೈದ್ಧಾಂತಿಕ ನೀತಿ ನಿಯಮವೆಂಬುವುದಿಲ್ಲ ಎಂಬುದನ್ನು ಯಡಿಯೂರಪ್ಪ, ಪಟೇಲ್ ಕೂಡಿಕೆ ಉದಾಹರಣೆಯೊಂದಿಗೆ ವಿವರಿಸಿದರು.

ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಜನ ಸಾಮಾನ್ಯರಿಗೆ ಅಗತ್ಯವಾದ ಅಕ್ಕಿ, ಗೋಧಿ, ಎಣ್ಣೆ ಇತ್ಯಾದಿ ವಸ್ತುಗಳ ಬೆಲೆಯನ್ನು ನಿಯಂತ್ರದಲಿಡಲು ಸಾಧ್ಯವಿಲ್ಲ ಎಂದು ಅವರು ವಿವರಸಿದರು.

ಜಾತ್ಯತೀತ ರಾಷ್ಟ್ರಕ್ಕಾಗಿ, ಭಯಮುಕ್ತ ಸಮಾಜಕ್ಕಾಗಿ ಆರ್ಥಿಕ ಸಮಾನತೆಗಾಗಿ, ಮಹಿಳಾ ಮಿಸಲಾತಿಗಾಗಿ ಹಾಗೂ ಪ್ರಜಾಸತ್ತಾತ್ಮಕ ಆಡಳಿತಕ್ಕಾಗಿ ಸಿಪಿಐ(ಎಂ) ಪಕ್ಷಕ್ಕೆ ಮತ ನೀಡುವಂತೆ ಬೃಂದಾ ಕಾರತ್ ಕರೆ ನೀಡಿದರು.

ನೂರಾರು ಮಹಿಳಾ ಮತದಾರರು ಪಾಲ್ಗೊಂಡ ಈ ಸಮಾವೇಶದಲ್ಲಿ ರಾಜ್ಯಾಧ್ಯಕ್ಷರಾದ ಕೆ.ಎಸ್.ವಿಮಲ, ಜಿಲ್ಲಾ ಮುಖಂಡರಾದ ಗೌರಮ್ಮ ಮುಂತಾದವರ ಜೊತೆ ವರ್ತೂರ್ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಎಚ್.ಎನ್. ಗೋಪಾಲಗೌಡ

ಸಿಪಿಐ(ಎಂ) ಕಛೇರಿಗೆ ನುಗ್ಗಿದ ಪೋಲಿಸ್ ವರ್ತನೆ ಖಂಡಿಸಿ ಮೆರವಣಿಗೆ

ಪ್ರಜಾಸತ್ತಾತ್ಮಕ ಚಳುವಳಿಗೆ ಸದಾ ಲಾಠಿ ಮತ್ತು ಬಂದೂಕು ಗುರಿ ಹಿಡಿಯುವ ಕೋಲಾರ ಪೋಲಿಸ್ ಮೊನ್ನೆ ಗ್ರಾಮ ಗ್ರಾಮಪಂಚಾಯತ್ ನೌಕರರ ಮೇಲೆ ಲಾಠಿ ಪ್ರಹಾರದ ಮೂಲಕ ಹಲ್ಲೆ ನಡೆಸಿದ ಮೇಲೆ, ಪ್ರಜಾಪ್ರಭುತ್ವ ಚಳುವಳಿಯ ಕೇಂದ್ರ ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ ಕಛೇರಿಗೆ ನುಗ್ಗಿದ ಪೋಲಿಸರು ಅಲ್ಲಿದ್ದವರ ಮೇಲೆ ಮತ್ತೆ ಹಲ್ಲೆ ನಡೆಸಿದ್ದಾರೆ.

ಈ ಹಲ್ಲೆಯನ್ನು ಪ್ರತಿಭಟಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಪ್ರತಿಭಟಿಸಿ ಮೆರವಣಿಗೆ ನಡೆಸಿ. ಹಲ್ಲೆ ಮಾಡಿದ ಪೋಲಿಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ ಗೊಳಿಸುವಂತೆ ಜಿಲ್ಲಾದಿಕಾರಿಗಳಿಗೆ ಸಿಪಿಐ(ಎಂ) ನಿಯೋಗ ಮನವಿ ಸಲ್ಲಿಸಿತು. ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣ ರಾವ್ ಮಾತನಾಡಿ, ಕಚೇರಿಗೆ ನುಗ್ಗಿದ ಕೃತ್ಯವನ್ನು ಉಗ್ರವಾಗಿ ಖಂಡಿಸಿದರಲ್ಲದೆ, ತಪಿತಸ್ಥರ ಮೇಲೆ ಕ್ರಮ ಕೈಗೊಳ್ಳದಿದ್ದರೆ. ಚುನಾವಣೆನಂತರ ರಾಜ್ಯಾದ್ಯಾಂತ ಪ್ರತಿಭಟನೆ ನಡೆಸಲಾಗುವುದೆಂದರು. ಗ್ರಾಮ ಪಂಚಾಯತ ನೌಕರರ ಬೇಡಿಕೆಗಳನ್ನು ಜಿಲ್ಲಾಡಳಿತ ಕೂಡಲೇ ಈಡೆರಿಸುವಂತೆಯೂ ಆಗ್ರಹಿಸಿದರು.

ವಿನಾಕಾರಣ ಹಲ್ಲೆ ಮಾಡಿದ ಪೋಲಿಸ್ ಅಧಿಕಾರಿಗಳಾದ ಹುಸೇನ್, ನಾರಾಯಣಪ್ಪ ಹಾಗೂ ಸಂಪತ್ ಕುಮಾರ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಆಗ್ರಹಿಸಿದರು.


ರಾಜಕಾರಣಿಗಳ ಏಜೆಂಟರಂತೆ ವರ್ತಿಸುತ್ತಿರುವ ಪೋಲಿಸ್ ಅಧಿಕಾರಿಗಳ

ಬಿಹೆಚ್‌ಇಎಲ್ ನೌಕರರ ಸಂಘದ ಅಧ್ಯಕ್ಷರಾಗಿ ಕಾಂ. ಸೂರಿ ಮರು ಆಯ್ಕೆ

ಪ್ರಮುಖ ಸಾರ್ವಜನಿಕ ವಲಯದ ಉದ್ದಿಮೆ ಬಿ.ಹೆಚ್.ಇ.ಎಲ್.ನ ಬೆಂಗಳೂರಿನ ಇಲೆಕ್ಟ್ರಾನಿಕ್ಸ್ ಡಿವಿಜನ್ನಿನ ನೌಕರರ ಸಂಘದ ಚುನಾವಣೆಗಳಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್ ಅಧ್ಯಕ್ಷರಾಗಿ ಮರು ಆಯ್ಕೆ ಗೊಂಡಿದ್ದಾರೆ. ಅವರು ಮೈಕೆಲ್ ಫರ್ನಾಂಡೀಸ್‌ರವರನ್ನು ಸೋಲಿಸಿದರು. ಪ್ರಧಾನಕಾರ್ಯದರ್ಶಿಯಾಗಿ ವಿ.ವಿ.ಚಂದ್ರನ್, ಉಪಾಧ್ಯಕ್ಷರಾಗಿ ಡಿ.ವಿನಾಯಕಂ, ಸಹಾಯಕ ಕಾರ್ಯದರ್ಶಿಯಾಗಿ ಎಸ್.ವಿ.ಕೆ.ಉಡುಪ ಹಾಗೂ ಕೋಶಾಧಿಕಾರಿಯಾಗಿ ಎಸ್.ಸಿ.ಶೆಟ್ಟಿಗಾರ್ ಮರು ಆಯ್ಕೆಗೊಂಡಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

1946 ರ ಆಗಸ್ಟ್‌ನ ಅತ್ಯಂತ ಭೀಕರ ಭ್ರಾತೃಹತ್ಯೆಯಿಂದ 'ಕಲ್ಕತ್ತ ಉರಿಯುತ್ತಿದ್ದ' ದಿನಗಳು, ಅದರ ನಡುವೆ ಕೋಮುಸೌಹಾರ್ದ ಉಳಿಸಿಕೊಳ್ಳುವ, ಪುನರ್ವಸತಿಯ ಕೆಲಸಗಳ ಬಗ್ಗೆ ನೀವು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಆ ನಂತರದ ದಿನಗಳ ಬಗ್ಗೆ ಇಲ್ಲಿ ಓದಿ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ
ಕನ್ನಡಕ್ಕೆ: ವಿಶ್ವಕುಂದಾಪುರ

ಭಾಗ-13

ಕೋಮುವಾದದ ಹಿನ್ನೆಲೆಯಲ್ಲಿ ದೇಶ ವಿಭಜನೆ................

ಸರಿಯಾದ ರೀತಿಯಲ್ಲೇ ನಾವು ನಮ್ಮ ಕೆಲಸವನ್ನು ಆರಂಭಿಸಿದೆವು. ಸುಹ್ರವರ್ದಿ ನಿವಾಸದಲ್ಲಿ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಿದರು. ಭೂಪೇಶ್ ಗುಪ್ತ ಮತ್ತು ನಾನು ಕಮ್ಯುನಿಸ್ಟ್ ಪಕ್ಷವನ್ನು ಪ್ರತಿನಿಧಿಸಿದ್ದೆವು. ಕಾಂಗ್ರೆಸ್‌ನ ಕೆಲ ನಾಯಕರೂ ಬಂದಿದ್ದರು. ಸ್ವತಃ ಸುಹ್ರವರ್ದಿ ಮುಸ್ಲಿಂ ಲೀಗ್ ಪರವಾಗಿ ಮಾತನಾಡಿದರು. ಡಾ। ಶ್ಯಾಮಪ್ರಸಾದ್ ಮುಖರ್ಜಿ ಪ್ರತಿನಿಧಿಸಿದ್ದು ಹಿಂದೂ ಮಹಾಸಭಾವನ್ನು. ಸಿಖ್ ಸಮುದಾಯದ ಪ್ರತಿನಿಧಿಗಳೂ ಇದ್ದರು. ಸಮಾಲೋಚನೆ ನಡೆಯುತ್ತಿರುವಾಗಲೇ ಸುಹ್ರವರ್ದಿ ನನ್ನನ್ನು ಮತ್ತು ಭೂಪೇಶ್‌ರನ್ನು ತಮ್ಮ ಮಲಗುವ ಕೋಣೆಗೆ ಕರೆದುಕೊಂಡು ಹೋದರು. ಕಮ್ಯುನಿಸ್ಟರ ಜತೆಯಲ್ಲಿ ಒಂದೇ ಸಮಿತಿಯಲ್ಲಿ ಕೆಲಸ ಮಾಡಲು ಇಷ್ಟವಿಲ್ಲವೆಂದು ಶ್ಯಾಮಪ್ರಸಾದ್ ಮುಖರ್ಜಿ ತಿಳಿಸಿದರೆಂದು ಸುಹ್ರವರ್ದಿ ನಮಗೆ ಹೇಳಿದರು.

ಹೀಗಾಗಿ ಸರ್ವಪಕ್ಷ ಕೇಂದ್ರ ಸಮಿತಿಯ ಯೋಜನೆ ಯೋಜನೆಯಾಗಿಯೇ ಉಳಿಯಿತು. ಆದರೆ ಸ್ಥಳೀಯ ಘಟಕಗಳು ಅನೇಕ ವಸತಿ ಪ್ರದೇಶಗಳಲ್ಲಿ ಕೆಲಸ ಮುಂದುವರಿಸಿದವು. ಗಲಭೆಯಿಂದ ಉಧ್ವಸ್ತಗೊಂಡಿದ್ದ ನಗರಕ್ಕೆ ನೆಮ್ಮದಿ ಒದಗಿಸಿದವು. ವಿಶ್ವಾಸವನ್ನು ಮರಳಿಸ್ಥಾಪಿಸಲಾಯಿತು. ಜನರಲ್ಲಿ ಪರಸ್ಪರ ಮೈತ್ರಿ ಮತ್ತು ಸೌಹಾರ್ದತೆಯ ವಾತಾವರಣ ಕಂಡು ಬಂತು.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಬಹಳಷ್ಟು ಕಾರ್ಯಕರ್ತರು ಶಾಮೀಲಾಗಿ ಹೋರಾಡಿದರು. ಕಾಂಗ್ರೆಸ್‌ನ ಧೀರೇಂದ್ರನಾಥ ದತ್ತ ಸೆಪ್ಟೆಂಬರ್ 19 ರಂದು ಸುಹ್ರವರ್ದಿ ಸರಕಾರದ ವಿರುದ್ಧ ವಿಧಾನಸಭೆಯಲ್ಲಿ ಅವಿಶ್ವಾಸ ಗೊತ್ತುವಳಿ ಮಂಡಿಸಿದರು. ಅದರ ಮೇಲೆ ಧೀರ್ಘ ಚರ್ಚೆ ನಡೆಯಿತು. ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಮಾತಾಡಲು ನನಗೂ ಅವಕಾಶ ಸಿಕ್ಕಿತು. ಏನಿದ್ದರೂ ಸರ್ಕಾರದ ವಿರುದ್ಧ ಗೊತ್ತುವಳಿ 130-85 ಮತಗಳಿಂದ ಸೋತು ಹೋಯಿತು.

ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಪಕ್ಷಗಳು ಕೋಮು ಆಧಾರದಲ್ಲಿ ವಿಭಜನೆಯಾಗಿರುವುದು ಈ ಚರ್ಚೆಯ ವೇಳೆ ಸುಸ್ಪಷ್ಟವಾಯಿತು. ಗಲಭೆಗಳಿಗೆ ಸರ್ಕಾರ ಹೊಣೆ ಎಂದು ಕಾಂಗ್ರೆಸ್ ಭಾಷಣಕಾರರು ದೂಷಿಸಿದರು. ಆದರೆ ಹಿಂದೂ ಮೂಲಭೂತವಾದಿಗಳು ಹಿಂಸಾಕಾಂಡ ಆರಂಭಿಸಿದರು ಎಂದು ಮುಸ್ಲಿಂ ಲೀಗ್ ಸದಸ್ಯರು ಆಪಾದಿಸಿದರು. ಏನಿದ್ದರೂ ಯಾವುದೇ ನಿರ್ದಿಷ್ಟ ಸಮುದಾಯವನ್ನು ದೂಷಿಸದೆ ಸೌಹಾರ್ದವನ್ನು ಕಾಪಾಡಿಕೊಳ್ಳುವುದಕ್ಕೆ ಒತ್ತುನೀಡಿದ ಕೆಲವು ಸದಸ್ಯರು ಎರಡೂ ಪಕ್ಷಗಳಲ್ಲಿ ಇದ್ದರು ಎನ್ನುವುದು ಗಮನಾರ್ಹ. ಆಶ್ಚರ್ಯದ ವಿಷಯವೆಂದರೆ, ವಾಸ್ತವವಾಗಿ ನೈಜ ಅಪರಾಧಿಗಳಾದ ಬ್ರಿಟೀಷ್ ಸಾಮ್ರಾಜ್ಯಶಾಹಿಗಳನ್ನು ಯಾವ ನಾಯಕರೂ ತರಾಟೆಗೆ ತೆಗೆದುಕೊಳ್ಳಲಿಲ್ಲ. ಬ್ರಿಟಿಷ್ ಆಡಳಿತಗಾರರ ವಿರುದ್ಧ ನಾನು ಕಟುವಾದ ಟೀಕಾಪ್ರಹಾರ ಮಾಡಿದೆ. ಕೋಮುಸೌಹಾರ್ದತೆ ಮುಂದೆ ಈಗ ಬೇರೆಲ್ಲವೂ ನಗಣ್ಯ ಎಂದು ಪ್ರತಿಪಾದಿಸಿದೆ.

ತೇಭಾಗ ಚಳುವಳಿ

ಅವಿಭಜಿತ ಬಂಗಾಳದ ರೈತ ಚಳುವಳಿಯ ಇತಿಹಾಸದಲ್ಲಿ ತೇಭಾಗ ಚಳವಳಿ ಹೆಮ್ಮೆಯ ಕ್ಷಣಗಳಲ್ಲಿ ಒಂದು. ತೇಭಾಗ ಎಂದರೆ ಸರಳವಾಗಿ, ಬರಡಿಯಾಗಳು ಮತ್ತು ಅಧಿಯಾರ್‌ಗಳು ಬೆಳೆದ ಫಸಲಿನಲ್ಲಿ ಮೂರನೇ ಎರಡು ಭಾಗ ರೈತರಿಗೆ ಸಲ್ಲಬೇಕಿತ್ತು. ಈ ಬೇಡಿಕೆಗೆ ಮಾನ್ಯತೆ ದೊರಕಿಸುವ ಸಲುವಾಗಿ ಕಾನೂನನ್ನು ರೂಪಿಸಬೇಕಿತ್ತು.

ಭೂಮಿ ಮತ್ತು ಕಂದಾಯ ಆಯೋಗ 1940ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. 41ರಷ್ಟು ರೈತರು ಬರಡಿಯಾ ಮತ್ತು ಅಧಿಯಾರ್‌ಗಳೇ ಆಗಿದ್ದರು. ಒಂದು ಕರಡು ಮಸೂದೆಯನ್ನು ಸಿದ್ಧಪಡಿಸಿ ಪ್ರಸಾರ ಮಾಡಲಾಯಿತು. ಆದರೆ ಅದನ್ನು ಮೂಲೆಗುಂಪು ಮಾಡಲಾಯಿತು. ಹೀಗೇಕೆ ಮಾಡಲಾಯಿತು ಎಂದು ನಾನು ಸುಹ್ರವರ್ದಿ ಅವರನ್ನು ಪ್ರಶ್ನಿಸಿದೆ.

ಭೂಮಾಲಿಕರ ದಂಡು

ತಮ್ಮ ಪಕ್ಷದಲ್ಲಿ (ಮುಖ್ಯ ಲೀಗ್) ಇಷ್ಟೊಂದು ಭೂಮಾಲಿಕರು ಇದ್ದರೆನ್ನುವುದು ತಮಗೆ ಗೊತ್ತೇ ಇರಲಿಲ್ಲ ಎಂಬುದು ಸುಹ್ರವರ್ದಿಯವರ ಪ್ರತಿಕ್ರಿಯೆಯಾಗಿತ್ತು! ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ಮಸೂದೆಯನ್ನು ಈ ಜಮೀನ್ದಾರರು ನಿಷ್ಕ್ರಿಯಗೊಳಿಸಿದರು ಎಂದು ಸುಹ್ರವರ್ದಿ ಒಪ್ಪಿಕೊಂಡರು.

ರೈತರು ವರ್ಷಗಟ್ಟಲೆ ತಾಳ್ಮೆಯಿಂದ ಕಾದರು. ಮಸೂದೆ ಕೇವಲ ಕಾಗದದ ಮೇಲೆ ಉಳಿದಿದೆ ಎಂಬುದು ಮನವರಿಕೆಯಾದಾಗ ತೇಭಾಗ ಬೇಡಿಕೆಗೆ ಆಂದೋಲನದ ಸ್ವರೂಪ ನೀಡಬೇಕು ಎಂದವರು ನಿರ್ಧರಿಸಿದರು.

ಎರಡನೇ ಜಾಗತಿಕ ಯುದ್ಧದ ನಂತರ ರೈತರು ಸಕ್ರಿಯ ಚಳುವಳಿಗೆ ಇಳಿದರು. ಅನೇಕ ಜಿಲ್ಲೆಗಳಲ್ಲಿ ಚಳುವಳಿ ಆಗಲೇ ಸಣ್ಣ ಪುಟ್ಟ ಪ್ರಮಾಣದಲ್ಲಿ ಆರಂಭವಾಗಿತ್ತು. ಈ ತೊರೆಗಳು ಒಂದು ಸೇರಿ ಸಾಗರದ ರೂಪು ಪಡೆದಿದ್ದು 1947 ರಲ್ಲಿ. ಆರಂಭದಲ್ಲಿ ರಾಜ್ಯದಾದ್ಯಂತ ವಿಶೇಷವಾಗಿ ಉತ್ತರ ಬಂಗಾಳದಲ್ಲಿ ಅದು ಸಂಘಟಿತ ಆಂದೋಲನದ ರೂಪು ಪಡೆಯಿತು. ಮೈಮೇನ್‌ಸಿಂಗ್, ಜಲಪಾಯ್‌ಗುರಿ, ಜೆಸ್ಸೋರ್, ಖುಲ್ನಾ, ರಂಗಪುರ, ದಿನಾಜಾಪುರ ಮತ್ತು 24 ಪರಗಣ ಮೊದಲಾದ ಪ್ರದೇಶಗಳಲ್ಲಿ ಜಾಗೃತಿ ಬೆಳೆಯಿತು.

'ನಮಗೆ ತೇಭಾಗ ಬೇಕು. ನಾವು ಪ್ರಾಣವನ್ನಾದರೂ ತೆತ್ತೇವು; ನಮ್ಮ ಬೆಳೆಯನ್ನಲ್ಲ' ಎಂಬ ಘೋಷವಾಕ್ಯ ಸರ್ವತ್ರ ಅನುರಣಿಸಿತು!

ಕಾನೂನು ಮತ್ತು ಸುವ್ಯವಸ್ಥೆಯ ಹೆಸರಿನಲ್ಲಿ ಪೊಲೀಸರು ರೈತರ ಮೇಲೆ ದೌರ್ಜನ್ಯ ನಡೆಸಲು ಆರಂಭಿಸಿದರು. ಆಂದೋಲನಕಾರರ ಮೇಲೆ ಲಾಠಿಪ್ರಹಾರ ಮತ್ತು ಗೋಲಿಬಾರ್ ದಿನನಿತ್ಯದ ಮಾತಾಯಿತು.

1947ರ ಆರಂಭ ಭಾಗದಲ್ಲಿ ನಾನು ಮೈಮನ್‌ಸಿಂಗ್, ಖುಲ್ನಾ ಮತ್ತು ಜಲಪಾಯಗುರಿಯಲ್ಲಿ ವ್ಯಾಪಕ ಪ್ರವಾಸ ಮಾಡಿದೆ. ಪಕ್ಷಕ್ಕೆ ನಾನು ಒಪ್ಪಿಸಿದ ವರದಿ ಕಣ್ಣು ತೆರೆಸುವಂತಿತ್ತು. ಪೊಲೀಸರ ಅಪರಾಧನೀಯ ಗೋಳಿಬಾರಿನಲ್ಲಿ ಕನಿಷ್ಠ 70 ಸೈನಿಕರು ಸತ್ತರು. ಪೊಲೀಸರು ಲೂಟಿ ದೊಂಬಿಯಷ್ಟೆ ನಡೆಸಿದರು. ಅವರು ಮಹಿಳೆಯರನ್ನೂ ಬಿಡದೆ ದೌರ್ಜನ್ಯವೆಸಗಿದರು.

ಆದರೆ ಇಂಥ ದೌರ್ಜನ್ಯಗಳಿಂದ ಚಳುವಳಿಗಾರರು ಎದೆಗುಂದಲಿಲ್ಲ. ಪೋಲೀಸ್ ದಬ್ಬಾಳಿಕೆಯ ಜತೆಜತೆಗೇ ಚಳುವಳಿಯೂ ಬೆಳೆಯಿತು. 1947 ಮಾರ್ಚ್‌ನಲ್ಲಿ ವಿಧಾನಸಭೆಯಲ್ಲಿ ನಾನು ನಾಲ್ಕು ಬಾರಿ ಈ ವಿಷಯವನ್ನು ಪ್ರಸ್ತಾಪಿಸಿದೆ. ಚಳುವಳಿ ಬಗ್ಗೆ ನಾವು ಅನೇಕ ಕರಪತ್ರಗಳನ್ನು ವಿತರಿಸಿದೆವು. ಜಿಲ್ಲೆಗಳಿಂದ ವಿವರವಾದ ವರದಿಗಳು ಹರಿದು ಬರುತ್ತಿದ್ದವು. ಪ್ರವಾಸದ ವೇಳೆ ನಾನು ಕಣ್ಣಿಗೆ ಕಂಡ ಅನುಭವಗಳು ಭಾಷಣವನ್ನು ಸಿದ್ಧಪಡಿಸುವಲ್ಲಿ ನನಗೆ ನೆರವಾದವು...

ದೇಶ ಸ್ವತಂತ್ರವಾಗುವ ಹೊಸ್ತಿಲಲ್ಲಿ ಇತ್ತು. ಅದೇ ಹೊತ್ತಿಗೆ ಅದು ವಿಭಜನೆಗೊಳ್ಳುವ ಅನಿವಾರ್ಯ ಅಪಾಯವೂ........

1947 ಆಗಸ್ಟ್ 15ರಂದು ದೇಶವನ್ನು ವಿಭಜಿಸಲಾಯಿತು. ಭಾರತ ಮತ್ತು ಪಾಕಿಸ್ತಾನದಲ್ಲಿ ಎರಡು ಸರಕಾರಗಳು ರಚನೆಯಾದವು. ಮಹಮದ್ ಆಲಿ ಜಿನ್ನಾ ಪಾಕಿಸ್ತಾನದ ಗವರ್ನರ್ ಜನರಲ್ ಮತ್ತು ಲಿಯಾಖತ್ ಆಲಿ ಖಾನ್ ಪ್ರಧಾನಮಂತ್ರಿ ಆದರು. ಲಾರ್ಡ್ ಮೌಂಟ್ ಬ್ಯಾಟನ್ (ಸಂಕ್ಷಿಪ್ತ ಅವದಿಗೆ) ಭಾರತದ ಗವರ್ನರ್ ಜನರಲ್ ಆದರು. ಹಾಗೂ ಜವಹರಲಾಲ್ ನೆಹರೂ ಪ್ರಧಾನಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಉಪಪ್ರಧಾನಿ ಆದರು. 1950 ಜನವರಿ 26ರಂದು ಸಂವಿಧಾನವನ್ನು ಅಂಗೀಕರಿಸಲಾಯಿತು. 1952 ಮಾರ್ಚ್‌ನಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದವು.

(ಮುಂದುವರಿಯುವುದು)

ಆಗಸ್ಟ್ 15, 1999 - ಪಶ್ಚಿಮ ಬಂಗಾಳದ ಪ್ರಜಾಸತ್ತಾತ್ಮಕ ಆಂದೋಲನದಲ್ಲಿ ಇನ್ನೊಂದು ಚಿರಸ್ಮರಣೀಯ ದಿನ


ಎರಡು ಕೋಟಿ ಮನಸ್ಸುಗಳನ್ನು, ಹೃದಯಗಳನ್ನು ಬೆಸೆದ ನಾಲ್ಕು ಸಾವಿರ ಕಿಲೋಮೀಟರ್‌ಗಳ ಅದ್ಭುತ ಮಾನವ ಸರಪಳಿ



ಮಾನವ ಸರಪಳಿಯಲ್ಲಿ ಕೈ ಜೋಡಿಸಿದ ಜ್ಯೋತಿಬಸು ಮತ್ತು ಇತರ ಎಡರಂಗ ಮುಖಂಡರು

ಪಶ್ಚಿಮ ಬಂಗಾಳದ ಪ್ರಜಾಪ್ರಭುತ್ವವಾದಿ ಜನತೆ ಮತ್ತೊಮ್ಮೆ ತಮ್ಮ ಜನಶಕ್ತಿಯ ಬೃಹತ್ ಪ್ರದರ್ಶನ ನೀಡಿದ್ದಾರೆ. ಆಗಸ್ಟ್ 15 ರ ಈ ಬಾರಿಯ ಸ್ವಾತಂತ್ರ್ಯ ದಿನದಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಸರಿಯಾಗಿ ರಾಜ್ಯಾದ್ಯಂತ ಸುಮಾರು ಎರಡು ಕೋಟಿ ಜನ ಸುರಿಯುತ್ತಿರುವ ಮಳೆಯನ್ನು, ಕೆಲವು ಮಾನವ ಶಕ್ತಿಗಳ ಕಿರುಕುಳವನ್ನೂ ಲೆಕಿಸದೆ ಬಂಡವಾಳಶಾಹಿ ಪತ್ರಿಕೆಗಳ ಟ್ರಾಫಿಕ್ ಜಾಮ್ ನ ಬೊಬ್ಬೆಯನ್ನು ನಿರ್ಲಕ್ಷಿಸಿ ಐದು ನಿಮಿಷಗಳ ಕಾಲ ಕೈಕೈ ಹಿಡಿದು ಸುಮಾರು ನಾಲು ಸಾವಿರ ಕಿಲೋಮೀಟರ್‌ಗಳ ಮಾನವ ಸರಪಳಿ ರಚಿಸಿದರು. ಆ ಐದು ನಿಮಿಷಗಳ ಕಾಲ ಇಡೀ ಪಶ್ಚಿಮಬಂಗಾಳದಲ್ಲಿ ಎಲ್ಲೆಲ್ಲೂ ಮಾನವ ಸರಪಳಿ - ಉತ್ತರದಲ್ಲಿ ಹಿಮಾಲಯದ ಚಳಿಯ ಡಾರ್ಜಿಲಿಂಗ್‌ನಿಂದ ದಕ್ಷಿಣದ ಸುಂದರ್‌ಬಂಸ್‌ನ ಹಸಿರುವ ಕಾನನದವರೆಗೆ, ಪಶ್ಚಿಮ ಬಂಗಾಳದ ಕೆಂಪುಮಣ್ಣಿನ ಬೀರ್‌ಭೂಮ್‌ನಿಂದ ಪೂರ್ವದ ಹೌರಾದಂತಹ ಕೈಗಾರಿಕಾ ಪಟ್ಟಣಗಳವರೆಗೆ ಎಲ್ಲಾ ವರ್ಗಗಳ ಜನ ವಯಸ್ಸು-ಜಾತಿ-ಧರ್ಮ-ಕುಲದ ಪರಿವೆಯಿಲ್ಲದೆ ಕೈಗೆ-ಕೈ ಹೆಣೆದು ರಚಿಸಿದ ಮಾನವ ಸರಪಳಿ.

ಡಾರ್ಜಿಲಿಂಗ್, ಬರ್ದ್ವಾನ್, ಹೂಗ್ಲಿ, ಬಾಂಕುರಾ, 24 ಪರಗಣ, ಹೌರಾ ಎಲ್ಲೆಡೆ ಅಭೂತಪೂರ್ವ ಉತ್ಸಾಹದ ವಾತಾವರಣ. ರಾಜಧಾನಿ ಕಲಕತ್ತೆಯಲ್ಲಂತೂ ಪ್ರತಿಯೊಂದು ರಸ್ತೆ ಆಗಸ್ಟ್ 15 ರಂದು ಉತ್ಸಾಹಭರಿತ ಜನಗಳಿಂದ ತುಂಬಿಹೋಗಿತ್ತು.



ಇಲ್ಲಿ ನಿಸ್ಸಂಶಯವಾಗಿ ಆಕರ್ಷಣೆಯ ಕೇಂದ್ರವೆಂದರೆ ಸಿಪಿಐ(ಎಂ) ರಾಜ್ಯ ಸಮಿತಿಯ ಕಛೇರಿಯಿರುವ ಅಲಿ ಮುದ್ದೀನ್ ರಸ್ತೆ ಮತ್ತು ಜೆ.ಸಿ.ಬೋಸ್ ರಸ್ತೆ ಕೂಡುವ ಜಾಗ. ಇಲ್ಲಿ ಎಡರಂಗದ ಉನ್ನತ ಮುಖಂಡರು ಈ ರಾಜ್ಯವ್ಯಾಪಿ ಸರಪಳಿಯಲ್ಲಿ ತಮ್ಮ ಕೈಜೋಡಿಸಲು ನಿಂತಿದ್ದರು. ಮುಖ್ಯಮಂತ್ರಿ ಜ್ಯೋತಿಬಸು ಸೌಹಾರ್ದದ ಪ್ರತಿಜ್ಞೆ ಓದಿದರು - *ನಾವು ಜನ, ನಮ್ಮಲ್ಲಿನ ಬಹುವರ್ಣಸೂಸುವ ಗಾಜಿನಲ್ಲಿ ಇರುವಂತೆ ಜಾತಿ, ಧರ್ಮ, ಜನಾಂಗಗಳ ಭೇದಗಳೇನೇ ಇದ್ದರೂ, ಈ ನಮ್ಮ ನೆಲದಲ್ಲಿ ಶಾಂತಿ, ಸೌಹಾರ್ದ ಮತ್ತು ಐಕ್ಯತೆಯಿರುವಂತೆ ನೋಡಿಕೊಳ್ಳುತ್ತೇವೆ; ಕೊನೆಯ ವ್ಯಕ್ತಿಯವರೆಗೂ ಭಾರತದ ಸಮಗ್ರತೆ, ಆರ್ಥಿಕ ಸಾರ್ವಭೌಮತೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುತ್ತೇವೆ.* ಈ ಪ್ರತಿಜ್ಞೆ ಪಶ್ಚಿಮ ಬಂಗಾಳದ ಎಲ್ಲಾ ನಗರ, ಪಟ್ಟಣ, ಗ್ರಾಮಗಳಲ್ಲಿ ಏಕಕಾಲದಲ್ಲಿ ಸುಮಾರು ಎರಡು ಕೋಟಿ ಕಂಠಗಳಿಂದ ಸಮೂಹಗಾನದಂತೆ ಅಣುರಣನ ಗೊಂಡಿತು. ಇದೊಂದು ಚಿರಸ್ಮರಣೀಯ ಅನುಭವ ಎಂಬುದು ಇದನ್ನು ವೀಕ್ಷಿಸಿದವರ ಉದ್ಗಾರ.

ಈ ಕಾರ್ಯಕ್ರಮ ಕೊನೆಯಲ್ಲ, ಒಂದು ಹೊಸ ಉತ್ಸಾಹದ ಅಲೆಯ ಆರಂಭವಷ್ಟೇ ಎಂದರು ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಬಿಮನ್ ಬಸು. ಈ ಅಲೆ ಕೋಮುವಾದ, ಪ್ರತ್ಯೇಕತಾವಾದ ಮತ್ತು ಸಾಮಾಜಿಕ ವಿಭಜನೆಯ ಶಕ್ತಿಗಳಿಗೆ ಒಂದು ಭಾರೀ ಪರಾಭವವನ್ನು ಉಣ್ಣಿಸುತ್ತದೆ ಎಂದರು. ಏನೇ ಬರಲಿ, ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ರಕ್ಷಿಸುತ್ತೇವೆಂಬ ಒಂದು ಧೃಢ ಪ್ರತಿಜ್ಞೆಯ ಮೂಲಕ ಬಂಗಾಳದ ನಾಗರೀಕರ ಮನಸ್ಸುಗಳನ್ನು ಹೃದಯಗಳನ್ನು ಬೆಸೆದ ಈ ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಿದ ರಾಜ್ಯದ ಜನತೆಗೆ ಎಡರಂಗದ ಅಧ್ಯಕ್ಷ ಶೈಲೆನ್ ದಾಸ್ ಗುಪ್ತ ಹಾರ್ದಿಕ ಅಭಿನಂದನೆ ಸಲ್ಲಿಸಿದರು.

ಅಯೋಧ್ಯೆಗಾಗಿ ಸಂಘಪರಿವಾರಗಳು ಹಪಹಪಿಸುವುದೇಕೆ?

ಅನೇಕ ವರ್ಷಗಳಿಂದ ರಾಮಜನ್ಮ ಭೂಮಿಯ ಹೆಸರಿನಲ್ಲಿ ಅಯೋಧ್ಯೆಗಾಗಿ ಸಂಘ ಪರಿವಾರಗಳು ಏನೆಲ್ಲಾ ಕುತಂತ್ರ ಮಾಡುತ್ತಿವೆ. ಈ ಹಿಂಸಾಚಾರಕ್ಕೆ ಧರ್ಮದ ಕವಚ ಬೇರೆ. ರಾಷ್ಟ್ರಪ್ರೇಮದ ಲೇಪ. ತಾವೆಲ್ಲ ದೈವಭಕ್ತರೆಂದೂ, ರಾಮನ ಮೇಲಿನ ಭಕ್ತಿಯಿಂದ ನಾವು ಹೀಗೆ ಹೋರಾಟ ಮಾಡುತ್ತಿದ್ದೇವೆಂದು ಮುಗ್ಧರನ್ನು ನಂಬಿಸಿದ್ದಾರೆ. ನಿಜವಾಗಿ ಅಯೋಧ್ಯೆಗಾಗಿ ಹೊಡೆದಾಟ ಯಾಕೆ? ಅಲ್ಲಿ ರಾಮನ ಮಂತ್ರ ಇದೆಯೆ? ಅಥವಾ ರಮ್ (RUM XXX)ನ ಮಂತ್ರ ಇದೆಯೆ? ಚಿಕ್ಕವರದಿ ಇಲ್ಲಿದೆ.

ವಿಠ್ಠಲ ಭಂಡಾರಿ

ಊಟದೊಂದಿಗೆ ರಮ್ ಬಾಟಲ್
ತೀರ್ಥ ಸೇವನೆ ಭಕ್ತಾದಿಗಳಿಗೆ
ರಮ್(XXX) ಸೇವನೆ ಸಾಧುಗಳಿಗೆ!



ಒಂದು ಲೆಕ್ಕದ ಪ್ರಕಾರ ಅಯೋಧ್ಯೆಯಲ್ಲಿ 4000 ಮಠಗಳಿವೆ. ಅಷ್ಟೇ ಸಾಧು ಸಂತರು. ಅಥವಾ ಅದರ ಎರಡರಷ್ಟು. ಮೇಲಾಗಿ ರಾಮಜನ್ಮ ಸ್ಥಳ ಪಕ್ಕದಲ್ಲಿ ಸರಯೂನದಿ, ಮೊದಲು ಬಾಬ್ರಿ ಮಸೀದಿ ಇತ್ತು ಈಗ ಒಡೆದು ತೆಗೆಯುವ ಮೂಲಕ ಈ ಭೂಮಿ ಪವಿತ್ರವಾಗಿದೆ. ಮಂತ್ರಗಳು, ಗಂಟೆಯ ಓಂಕಾರ ದಿನವಿಡೀ ಕೇಳುತ್ತವೆ. ...ಹೀಗೆ ಅದನ್ನು ವರ್ಣಿಸಿ, ಅಲ್ಲಿ ಹುಟ್ಟುವವರೇ ಧನ್ಯ. ಇಲ್ಲಿ ನಮ್ಮ ಭವ್ಯ ಪರಂಪರೆಯ ಕುರುಹುಗಳಿವೆ. ಆಗಾಗಿ ಅದನ್ನು ನಮ್ಮ ಜೀವವನ್ನಾದರೂ ಕೊಟ್ಟು (ಅಥವಾ ಬೇರೆಯವರ ಜೀವವನ್ನು ತೆಗೆದು) ರಕ್ಷಿಸಿಕೊಳ್ಳಬೇಕು- ಹೀಗೆ ಹೇಳುತ್ತಾ ಹೋದರೆ ನೀವು ಮನಸ್ಸಿನಲ್ಲಿಯೇ ರಾಮನನ್ನು ನೆನೆಸಿ ಕೈ ಮುಗಿಯುತ್ತೀರಾ ಅಥವಾ ಚುನಾವಣೆ ಬಂದಿರಬೇಕು, ಈತನ ಕೊನೆಯ ವಾಕ್ಯ "ಕಮಲದ ಹೂವಿಗೇ ಮತಹಾಕಿ" ಎಂದು ಹೇಳುತ್ತಾನೆಂದು ಅಂದುಕೊಂಡಿರಾ?

ನಾನು ಮೇಲೆ ವರ್ಣಿಸಿದಂತೆ ಖಂಡಿತಾ ಅಯೋಧ್ಯೆ ಇಲ್ಲ. ರಾಮ ಓಡಾಡಿದ ಭೂಮಿಯ ರಕ್ಷಣೆಗಾಗಿಯೂ ಈ ಹೋರಾಟ ಅಲ್ಲ. ಇವೆರಡೂ ಭಾರತದ ಮುಗ್ಧ ಜನರನ್ನು ಮೋಸಗೊಳಿಸುವ ತಂತ್ರ ಅಷ್ಟೆ.

ಈ ಮಠಗಳಲ್ಲಿ ಸಾಧು ಗಳಿದ್ದದ್ದು ಸತ್ಯ. ಅವರ ಕೈಯಲ್ಲಿ ಕಮಂಡಲಕ್ಕೆ ಬದಲು ಝಳಝಳಿಸುವ ಕತ್ತಿಗಳಿವೆ, ಕೈಯಲ್ಲಿರುವ ರುದ್ರಾಕ್ಷಿಯನ್ನು ತಾನು ಉರುಳಿಸಿದ ತಲೆಗಳನ್ನು ಲೆಕ್ಕಹಾಕಲು ಬಳಸುತ್ತಾರೆ. ಸಾಮಾನ್ಯವಾಗಿ ಈ 'ಸಾಧು'ಗಳೆಲ್ಲ ಕ್ರಿಮಿನಲ್‌ಗಳು, ಸಮಾಜಬಾಹಿರ ಕೆಲಸದಲ್ಲಿ ತೊಡಗಿದವರು. ಮನುಷ್ಯತ್ವ ಇವೆಲ್ಲವೂ ಅರ್ಥವಾಗದ ಮಾತು.

ಮಹಂತ ರಾಮಚಂದ್ರ ಪರಮಹಂಸ



ಕೊಲೆ, ಸುಲಿಗೆ ನಿತ್ಯ ದಿನಚರಿ. ಯಾಕೆ ಹೀಗೆಂದು ಆಶ್ಚರ್ಯ ಆಗಿರಬೇಕಲ್ಲಾ?

ಅಯೋಧ್ಯೆಯ ವಿವಿಧ ಮಠಗಳಲ್ಲಿ ಪ್ರತಿತಿಂಗಳು ದೊಡ್ಡ ಪ್ರಮಾಣದ ಕಾಣಿಕೆಗಳು, ಮತ್ತು ಹಣಕಾಸಿನ ವ್ಯವಹಾರ ನಡೆಯುತ್ತಿವೆ. ಹಾಗಾಗಿ ಈ ಮಠಗಳ ಮೇಲಿನ ಅಧಿಪತ್ಯವನ್ನು ಸಾಧಿಸಲು ವಿವಿಧ ಬಣಗಳ ನಡುವೆ ಇಲ್ಲಿ ಯುದ್ಧವೇ ನಡೆದಿದೆ. ಸುಮಾರು 2 ದಶಕಗಳಿಂದ ಈ ಅಪರಾಧ ನಡೆಯುತ್ತಿದ್ದರೂ ಪೋಲೀಸರು ಕಣ್ಣುಮುಚ್ಚಿ ಕುಳಿತಿದ್ದಾರೆ. ಯಾಕೆಂದರೆ ಕಾವಿಧಾರಿಗಳನ್ನು ಮುಟ್ಟುವುದೆಂದರೆ ನಮ್ಮ ಪರಂಪರೆಗೆ ಮಾಡಿದ ಅವಮಾನವಲ್ಲವೇ! ಎಲ್ಲೆ ಅಪರಾಧ ಮಾಡಿ ತಲೆಹೋಗುವ ಸ್ಥಿತಿ ಬಂದಾಗ ಇಲ್ಲಿ ಬಂದು ಮಠದ ಸ್ವಾಮಿ ಆಗಿಬಿಡುತ್ತಾರೆ. ಇದು ಎಲ್ಲಾ ಅಪರಾಧಗಳಿಗೂ ಪೋಲೀಸರಿಂದ ರಕ್ಷಣೆ ಪಡೆವ ತಾಣವಾಗಿದೆ. ಯಾಕೆಂದರೆ ಋಷಿ ಮೂಲವನ್ನು ಅರಸಬಾರದಂತಲ್ಲಾ?!

ಮಂಗೇಶ್ ರಾಮ್ ಕೃಪಾಲದಾಸ್ ಒಂದು ಮಠದಸ್ವಾಮಿ. ಸಾಯುವ ಮೊದಲು ಎರಡು ಡಜನ್ ಕೊಲೆ ಮತ್ತು ಲೂಟಿಯ ಕೇಸು ದಾಖಲಾಗಿತ್ತಂತೆ. 80ರ ದಶಕದಲ್ಲಿ ರಾಜಕಾರಣಿಯೊಬ್ಬನನ್ನು ಕೊಂದು ಅಯೋಧ್ಯೆಗೆ ಬಂದು 10 ವರ್ಷಗಳಕಾಲ ಭೂಗತ ಜಗತ್ತನ್ನು ಆಳಿದಾತನ ಬಗ್ಗೆ ಆತನ ಸಂಗಡಿಗ ಹೇಳುತ್ತಾನೆ "ಕೃಪಾಲದಾಸ ಒಬ್ಬ ತಜ್ಞ ಬಾಂಬ್ ನಿರ್ಮಾಣಗಾರ"

1991ರಲ್ಲಿ ಸಾಧುಗಳಾದ ಜನಮೇಜಯಶರಣ್, ಬಾಲಗೋವಿಂದದಾಸ, ಮತ್ತು ಕಮಲೇಶ ದಾಸ್ ಸೇರಿ ಜಾನಕಿ ಘಾಟನ ಮಹಂತರನ್ನು ಕೊಲೆಮಾಡಿದರು. ಇದರಿಂದ ಜನಮೇಜಯ 15 ಕೋಟಿರೂ ಆಸ್ತಿಗೆ ಒಡೆಯನಾದ.

ಹನುಮಾನ್ ಘಡಿ ದೇವಸ್ಥಾನದಲ್ಲಿ ಸುಮಾರು 600 ಸಂತರು ವಾಸವಾಗಿದ್ದಾರೆ. ಇವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಹಲವಾರು ಕೊಲೆಗಳು ನಡೆದುಹೋಗಿವೆ. 1992ರಲ್ಲಿ ದೇವಾಲಯದ ಸಂಕೀರ್ಣದ ಮುಖ್ಯಸ್ಥ ದೀನ ಬಂದು ದಾಸ ಅವರು ಕೊಲ್ಲಲ್ಪಟ್ಟು ಮಹಂತ ಹರ್‌ಭಜನದಾಸ 1984ರಲ್ಲಿ ತನ್ನ ಆಪ್ತರಿಂದ ಕೊಲೆಗೈಯಲ್ಪಟ್ಟರು.

1999ರ ಮಾರ್ಚ್‌ನಲ್ಲಿ ಒಂದು ದೇವಸ್ಥಾನಕ್ಕಾಗಿ ನಡೆದ ಘಟನೆಯಲ್ಲಿ ಮೈಥಿಲಿ ಶಂಕರಾಚಾರ್ಯರ ಕೋಣೆಗೆ ನಾಡಬಾಂಬ್ ಹಾಕಲಾಯಿತು. ಈ ಕೃತ್ಯ ಮಾಡಿದ ಮೈಥಿಲಿ ರಾಮನ್ ಶರಣ್‌ಗೆ ರಾಮಜನ್ಮ ಭೂಮಿನ್ಯಾಸದ ರಾಮಚಂದ್ರ ಪರಮಹಂಸ, ಬಿ.ಜೆ.ಪಿ. ರಾಜ್ಯ ಉಪಾಧ್ಯಕ್ಷ ವಿನಯ ಕತಿಯಾರರ ಬೆಂಬಲವಿತ್ತು. ಕೊನೆಗೆ ಕೋರ್ಟ್ ಮಧ್ಯ ಪ್ರವೇಶಿಸಬೇಕಾಯಿತು.

ಇವರ ಹೊಡೆದಾಟ ಮತ್ತು ಗುಂಪುಗಳ ಹಾರಾಟದಲ್ಲಿ ಜನಸಾಮಾನ್ಯರೂ ಬಲಿಯಾದ ಅನೇಕ ಉದಾಹರಣೆಗಳಿವೆ. 1998ರಲ್ಲಿ ಗುಪ್ತಾರ ಘಟ್ಟ ಪ್ರದೇಶದ ನಿವಾಸಿಗಳಿಗೆ ಗುಂಡುತಾಗಿ ನಾಲ್ಕಾರು ಜನ ಸಾವನ್ನಪ್ಪಿದ್ದಾರೆ.

ಸಾಗಲಿಯಾ ಮಠದ ಬಾಬಾ ಜ್ಞಾನ ದಾಸ್ "ಎಲ್ಲಾ ದೇವಾಲಯಗಳ ಮೇಲೆ ನಿಯಂತ್ರಣ ಹೇರಲು ವಿಶ್ವ ಹಿಂದೂ ಪರಿಷತ್ ಪ್ರಯತ್ನಿಸುತ್ತಿದೆ. ಈ ಮೂಲಕ ಅಯೋಧ್ಯೆಯ ಈ ಪಾತಕೀಕರಣಕ್ಕೆ ವಿಶ್ವಹಿಂದೂ ಪರಿಷತ್ ಕಾರಣ" ವೆಂದು ಹೇಳುತ್ತಾರೆ.

ಅನೇಕ ಸಾಧುಗಳು ಕೋವಿಯ ಮೂಲಕವೇ ಮಠನಡೆಸುತ್ತಿದ್ದಾರೆ. ಅದನ್ನು ನವೀಕರಿಸಲಿಲ್ಲ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳುತ್ತಿದ್ದಾರೆ. ಇದು ಇವರಿಗೆ ಹೇಗೆ ಬಂತು ರಾಜಕಾರಣಿಗಳ ಕುಮ್ಮಕ್ಕಿಲ್ಲವೆ? ಎಂದು ಪೊಲೀಸ್ ಅಧಿಕಾರಿಯೊಬ್ಬರು ಪ್ರಶ್ನಿಸುವ ಮೂಲಕ ರಾಜಕಾರಣಿಗಳೊಂದಿಗೆ ಅವರ ಸಂಬಂಧದ ಬಗ್ಗೆ ವಿವರಿಸುತ್ತಾರೆ.

ಅಯೋಧ್ಯೆ ಇಂದು ಮಾದಕ ದ್ರವ್ಯಗಳ, ಪೇಯಗಳ ಮುಖ್ಯ ಕೇಂದ್ರ ಆಗಿದೆ. ಬಹುತೇಕ ಮಠಗಳ ಮೂಲಕ ಇದು ಕಳ್ಳಸಾಣಿಕೆ ಆಗುತ್ತಿದೆ. ಅಶ್ರಫ್ ಮಹಾರಾಜನಂಥಹ ಸುಮಾರು 70 ಜನ ಕಳ್ಳಸಾಗಣಿಕೆದಾರರಿಗೆ ಅಯೋಧ್ಯೆ ಇಂದು ರಕ್ಷಣೆ ಕೊಟ್ಟಿದೆ. ದಿನನಿತ್ಯದಂತೆ ನದಿಯ ದಂಡೆಯಲ್ಲಿ ಪಾನಗೋಷ್ಠಿ ನಡೆದೇ ಇರುತ್ತದೆ. ಡ್ರಗ್ಸ್, ಅಫೀಮ್ ಇಲ್ಲಿ ಮಾಮೂಲು. ಈ ಗೋಷ್ಠಿಯಲ್ಲಿ ಪಾಲ್ಗೊಳ್ಳುವವರು ಯಾರು? ಹಣೆಯಲ್ಲಿ ಭಸ್ಮ ಬಿಚ್ಚಿದ ಕೂದಲು, ಕಾವಿಬಟ್ಟೆ ತೊಟ್ಟು ಜಗತ್ತಿಗೆ ಆಧ್ಯಾತ್ಮಿಕತೆಯ ಪಾಠಹೇಳುವ, ಅಹಿಂಸೆಯ ನೈತಿಕತೆಯ ಪಾಠಸಾರುವ ಸಾಧುಗಳು ಸಂತರು.

ಅಯೋಧ್ಯೆ ಪಾತಕೀಕರಣಗೊಳ್ಳುತ್ತಿದೆ ಎಂದು ಒಪ್ಪಿಕೊಳ್ಳುವ ಸಗಾರಿಯ ಪಟ್ಟಿಯ ಮಹಂತ ಜ್ಞಾನ ದಾಸ " ಹೀಗೆ ಸಾಧುಗಳ ಹೆಸರಲ್ಲಿ ಕ್ರಿಮಿನಲ್‌ಗಳು ತುಂಬಿರಲು ವಿಶ್ವ ಹಿಂದೂ ಪರಿಷತ್ತೇ ಕಾರಣ ರಾಜಕೀಯ ಲಾಭ ಪಡೆಯಲು ಹೀಗ ಮಾಡುಲಾಗುತ್ತದೆ" ಎನ್ನುತ್ತಾರೆ.

ರಾಮಜನ್ಮ ಭೂಮಿ ನ್ಯಾಸ ಮುಖ್ಯಸ್ಥರೂ ಆಗಿರುವ 90 ರ ಹರೆಯದ ಮಹಂತ ರಾಮಚಂದ್ರ ಪರಮಹಂಸ ಇವರನ್ನು ಅಯೋಧ್ಯೆಯಲ್ಲಿ ಅಧಿಕಾರಕ್ಕಾಗಿ, ಮಠದ ಪಾರುಪತ್ಯಕ್ಕಾಗಿ ನಡೆಯುವ ಹೊಡೆದಾಟ, ಕೊಲೆಯ ಬಗ್ಗೆ ಕೇಳಿದರ 'ವಿಶ್ವಾಮಿತ್ರ-ವಸಿಷ್ಠರೇ ತಮ್ಮ ಪರಮಾಧಿಕಾರಕ್ಕಾಗಿ ಹೋರಾಡಿದ್ದಾರೆ. ಇನ್ನು ನಾವು ಸಂತರೇನು ಮಹಾ?' ಎನ್ನುವ ಮೂಲಕ ಎಲ್ಲಾ ಬಿಟ್ಟವರು ಎಲ್ಲದಕ್ಕಾಗಿ ಹೊಡೆದಾಡುವ ಕ್ರಿಯೆಯನ್ನು ಬೆಂಬಲಿಸುತ್ತಾರೆ.

ಹೀಗೆ ಅಯೋಧ್ಯೆ ಇಂದು ಕಳ್ಳ ಸಾಗಣಿಕೆಯ ಕೇಂದ್ರವಾಗಿ ಕೋಟ್ಯಾಂತರ ರೂಪಾಯಿಗಳ ಲಾಭ ತರುತ್ತಿದೆ. ಜನ ತಿಳಿಯದೆ ಮಠ-ದೇವಸ್ಥಾನಗಳಿಗೆ ಅಪಾರ ಕಾಣಿಕೆ-ಹಣ ಹಾಕುತ್ತಿದ್ದಾರೆ.ಹಾಗಾಗಿ ಇಂದು ಅವನ್ನು ವಶಪಡಿಸಿಕೊಳ್ಳುವ ಕಾರಣಕ್ಕಾಗಿ ಅಯೋಧ್ಯೆಯ ಬಗ್ಗೆ ರಕ್ತಪಾತ ನಡೆಯುತ್ತಿದೆ. ಆದ ಇದನ್ನೆಲ್ಲಾ ಮರೆಮಾಚಿ ಇಲ್ಲಿ ಅಯೋಧ್ಯೆಯ ಬಗ್ಗೆ ಉತ್ಪ್ರೇಕ್ಷಿಸಿ ನಿಜ ಸಂಗತಿಯನ್ನು ಮರೆಮಾಚುವ ಮೂಲಕ ಜನರ ಧಾರ್ಮಿಕ ಭಾವನೆಯನ್ನು ಉದ್ರೇಕಿಸಿ ಚುನಾವಣೆಗೆ ಓಟನ್ನಾಗಿ ಪರಿವರ್ತಿಸುವ ಒಂದು ತಂತ್ರವನ್ನಾಗಿ ಬಿಜೆಪಿ ಮತ್ತಿತರ ಸಂಘಪರಿವಾರಗಳು ಬಳಸಿಕೊಳ್ಳುತ್ತಿದೆ.

ಚುನಾವಣಾ ಆಯೋಗದ ನಿರ್ದೇಶನ

ಪುಟ 2 ರಿಂದ

ಸೇರಿದಂತೆ ಪ್ರಮುಖ ಸರಕಾರಿ ವ್ಯಕ್ತಿಗಳು ಚುನಾವಣೆಗಳಲ್ಲಿ ಅಭ್ಯರ್ಥಿಗಳಾಗಿರುವುದರಿಂದ ಸೇನಾಪಡೆಗಳನ್ನು ಸಂಕುಚಿತ ಉದ್ದೇಶಗಳಿಗಾಗಿ ಬಳಸುವುದನ್ನು ತಡೆಯಬೇಕು ಎಂದು ಸುರ್ಜಿತ್ ತಮ್ಮ ಪತ್ರದಲ್ಲಿ ತಿಳಿಸಿದ್ದರು. ಇದರ ಪ್ರಕಾರ ಈಗ ಕಾರ್ಗಿಲ್ ಕುರಿತ ವೃತ್ತಚಿತ್ರದ ಪ್ರಸಾರವನ್ನು ಸದ್ಯಕ್ಕೆ ಅಕ್ಟೋಬರ್ 3 ರವರೆಗೆ ನಿಲ್ಲಿಸಬೇಕು ಎಂದು ಚುನಾವಣಾ ಆಯೋಗ ನಿರ್ದೇಶನ ನೀಡಿರುವುದಾಗಿ ತಿಳಿದುಬಂದಿದೆ. ಸುರ್ಜಿತ್‌ರವರು ಪತ್ರದಲ್ಲಿನ ಮೇಲೆ ಹೇಳಿದ ಮಾತುಗಳನ್ನು ಹಾಗೆಯೇ ಪುನರುಚ್ಛರಿಸುತ್ತಾ ಚುನಾವಣಾ ಆಯೋಗ "..... ರಕ್ಷಣಾ ಪಡೆಗಳು ಈಗ ರಂಗದಿಂದ ಹಿಂದಕ್ಕೆ ಸರಿದು ಭಾರತದ ರಾಜಕೀಯ ವ್ಯವಸ್ಥೇ ತನ್ನ ಒಡೆಯರು ಆಂದರೆ ಜನಗಳ ಮುಂದೆ ತರ್ಕ ಮಂಡಿಸಲು ಅವಕಾಶ ಮಾಡಿಕೊಡಬೇಕು ಎಂದಿದೆ.

ಚುನಾವಣಾ ಆಯೋಗದ ಈ ನಿರ್ದೇಶನದಿಂದ ಬಿಜೆಪಿ ಮತ್ತು ಅದರ ಮಿತ್ರರು ಕುಪಿತಗೊಂಡಂತೆ ಕಾಣುತ್ತದೆ. ಇದುವರೆಗೆ ರಾಷ್ಟ್ರಪತಿಗಳನ್ನು ಪರೋಕ್ಷವಾಗಿ ಟೀಕಿಸುತ್ತಿರುವಂತೆ ಈಗ ಚುನಾವಣೆ ಆಯುಕ್ತರನ್ನು ಟೀಕಿಸಲಾರಂಭಿಸಿದೆ. ಈ ಮೂಲಕ ತಮ್ಮ ಸರ್ವಾಧಿಕಾರಿ ಪ್ರವೃತ್ತಿಯನ್ನು ಜನಗಳ ಮುಂದೆ ಪ್ರದರ್ಶಿಸುತ್ತಿದ್ದಾರೆ. ಜನಗಳು ಇದನ್ನು ಗಮನಿಸದೇ ಇರಲು ಸಾಧ್ಯವಿಲ್ಲ.

ಏನೀದೊ ರಾಮಣ್ಣ ಯಾರಿಗೋಟು ನೀಡುತಿರುವೆ
ಏನೀದೊ ಭೀಮಣ್ಣ ಯಾರಿಗೋಟು ನೀಡುತಿರುವೆ

ಅಕ್ಕಿ ಗೋಧಿ ರಾಗಿ ಜೋಳ ಬೆಲೆ ಎಲ್ಲಾ ಏರಿದವೊ
ಬೆಳೆದ ರೈತ ಬೆಲೆ ಸಿಗದೆ ನೇಣು ಹಾಕಿಕೊಂಡರಲ್ಲೊ
ಇಂಥ ಸ್ಥಿತಿಗೆ ಕಾರಣರೂ ಬಿ.ಜೆ.ಪಿ. ಕಾಂಗ್ರೆಸ್ಸು.

ಒಂದು ಭಾರಿ ಎಂದು ಹೇಳಿ ಜನಕ್ಕೆ ಮೋಡಿ ಮಾಡಿದಾಯ್ತು
ವಾಜಪೇಯಿ ಸೌಮ್ಯನೆಂಬ ಸುಳ್ಳನ್ನು ಬಿತ್ತಿದಾಯ್ತು
ಅಧಿಕಾರದ ದಾಹಕ್ಕೆ ತತ್ವನೆಲ್ಲ ಬಿಟ್ಟಾಯ್ತು
ಬಡಜನರ ಬದುಕನ್ನ ಘೋರ ನರಕ ಮಾಡಿದಾಯ್ತು

ಮುಸ್ಲಿಮರು ವೈರಿ ಎಂದು ಕತ್ತಿಮಸೆಯುತ್ತಿದ್ದರಲ್ಲೊ
ದೇಶದ್ರೋಹಿ ಜನರೆಂದು ಅವರನ್ನು ಜರೆದರಲ್ಲೋ
ಕೋಮುಗಲಭೆ ಹುಟ್ಟು ಹಾಕಿ ಜನರನ್ನು ಕೊಂದರಲ್ಲೋ
ಹೆಣದ ಎದೆಯ ಮೇಲೆ ನಡೆದು ಓಟು ಪಡೆದುಹೋದರಲ್ಲೊ

ಕ್ರೈಸ್ತರನ್ನು ಕೊಂದುಹಾಕಿ ಚರ್ಚುಗಳ ಒಡೆದು ಹಾಕಿ
ಅತ್ಯಾಚಾರವೆಸಗಿದವರ ದೇಶ ಭಕ್ತರೆಂದರಲ್ಲೊ ಮನುಷ್ಯತ್ವ
ಮರೆತಂತ ಮೌಢ್ಯವನ್ನು ತುಂಬಿದಂತ
ಕೋಮುವಾದಿ ಬಿಜೆಪಿ ದೇಶದ ವೈರಿಯಣ್ಣ

ಇದರ ಬದಲು ನೋಡಲ್ಲಿ ಸಿಪಿಎಂ ಆಡಳಿತ
ಬಡಜನರ ಪಕ್ಷವಾಗಿ ನಿಲ್ಲಬಹುದು ಕಾಣಣ್ಣ
ಶೋಷಕರ ಎದೆಯಲ್ಲಿ ನಡುಕವನ್ನು ತಂದಿತಣ್ಣ
ರೈತ-ಕಾರ್ಮಿಕ ಐಕ್ಯತೆಯ ಬೆಸೆಯಿತಣ್ಣ

ಸಿಪಿಐ(ಎಂ) ಪಕ್ಷದ ಆಡಳಿತ ನೋಡಿರಣ್ಣ
ಬಡಜನರ ಮಿತ್ರನಾಗಿ ಬೆಳೆದಂತ ಪಕ್ಷವಣ್ಣ
ಕುಡುಗೋಲು ಸುತ್ತಿಗೆ ನಕ್ಷತ್ರದ ಗುರುತಣ್ಣ
ಇದನು ಮರೆಯದೆ ಓಟನ್ನು ನೀಡಿರಣ್ಣಾ

ವಿಜಯಕುಮಾರ್.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ